ಜನಶಕ್ತಿ

ಕನ್ನಡ ವಾರಪತ್ರಿಕೆ

Blog : janashakthi.wordpress.com e-mail : js_weekly@yahoo.com

ಸಂಪುಟ 7 ಸಂಚಿಕೆ 09
ಮಾರ್ಚ್ 03, 2013
ಪುಟ 16 ರೂ. 10/-





ಕೋಟಿ ಕೋಟಿ ಕಾರ್ಮಿಕರ ಬೃಹತ್ ಕಾರ್ಯಾಚರಣೆ

ಅಭೂತಪೂರ್ವ ಮುಷ್ಕರ



ನಗರ ಸ್ಥಳೀಯ ಸಂಸ್ಥೆಯ ಚುನಾವಣೆ : ಮುಂದೂಡುವ ಕಸರತ್ತಿಗೆ ಸೋಲು ಪ್ರಜಾಪ್ರಭುತ್ವ ಸಂಪ್ರದಾಯಕ್ಕೆ ಗೆಲುವು



ಮೊಳಗುತ್ತಿದೆ ಎಚ್ಚರಿಕೆಯ ಗಂಟೆ ಸರ್ಕಾರಕ್ಕೆ ಎಚ್ಚರವುಂಟೇ?



ಹೈದರಾಬಾದ್ ಸರಣಿ ಬಾಂಬ್ ಸ್ಫೋಟ : ಹೀನ ಕೃತ್ಯ

ದಲಿತರಿಗೆ ನ್ಯಾಯಬದ್ಧ ಪಾಲು ಕೊಡಿ ಬೃಹತ್ ರ್‍ಯಾಲಿಯ ಆಗ್ರಹ

ಸಂಘರ್ಷ ಸಂದೇಶ ಜಾಥಾ

ಕಾಂಗ್ರೆಸ್-ಬಿಜೆಪಿಗಳ ಜನವಿರೋಧಿ ನೀತಿಗಳ ಬದಲಿಗೆ ಎಡ ಪರ್ಯಾಯ ನೀತಿಗಳನ್ನು ಜನರ ಮುಂದಿಡಲಿರುವ ನಾಲ್ಕು ಅಖಿಲ ಭಾರತ ವ್ಯಾಪ್ತಿಯ ಜಾಥಾಗಳು

ಕಾಂಗ್ರೆಸ್-ಬಿಜೆಪಿಗಳ ದೇಶ ವಿರೋಧಿ, ಜನವಿರೋಧಿ ನೀತಿಗಳ ಬದಲಿಗೆ ಎಡ ಪರ್ಯಾಯ ನೀತಿಗಳನ್ನು ಜನರ ಮುಂದಿಡಲಿರುವ ನಾಲ್ಕು ಅಖಿಲ ಭಾರತ ವ್ಯಾಪ್ತಿಯ ಜಾಥಾಗಳನ್ನು ಸಿಪಿಐ(ಎಂ) ಸಂಘಟಿಸುತ್ತಿದೆ. ಈ ಹಿನ್ನೆಲೆಯಲ್ಲಿ ಜಾಥಾದ ಉದ್ದೇಶಗಳನ್ನು ವಿವರಿಸುವ ಒಂದು ಲೇಖನ.

ಈ ಜಾಥಾ ಹೋರಾಟ ಮತ್ತು ಬದಲಿ ನೀತಿಗಳ ಪ್ರಚಾರಕ್ಕಾಗಿ, ಅಸಂಘಟಿತ ವಲಯದ ರೈತರು, ಕಾರ್ಮಿಕರು, ಜಾತಿ ಪದ್ಧತಿಯಿಂದ ಶೋಷಣೆ ಮತ್ತು ಭೇದ ಭಾವಕ್ಕೆ ಒಳಗಾದ ದಲಿತರು ಮತ್ತು ಆದಿವಾಸಿಗಳು, ಕೋಮು ರಾಜಕೀಯ ಮತ್ತು ಭೇದಭಾವದ ಸಂತ್ರಸ್ತರಾದ ಅಲ್ಪಸಂಖ್ಯಾತರು, ಮತ್ತು ಎರಡನೇ ದರ್ಜೆಯ ನಾಗರಿಕರಂತೆ ಪರಿಗಣಿಸಲ್ಪಟ್ಟು ಲೈಂಗಿಕ ಹಿಂಸೆಗೆ ಒಳಗಾದ ಮಹಿಳೆಯರ ಪರವಾಗಿ ಈ ಜಾಥಾ. ಲಾಭ'ವನ್ನು ಕೇಂದ್ರ ಸ್ಥಾನದಲ್ಲಿರಿಸುವ ಬದಲಿಗೆ ಜನತೆಯನ್ನು ಕೇಂದ್ರದಲ್ಲಿರಿಸುವ ಬದಲಿ ನೀತಿಗಳ ಕಾರ್ಯಕ್ರಮಗಳಿಗಾಗಿ, ಈ ಜಾಥಾ ದುಡಿಯುವ ಜನತೆಯನ್ನು ಒಗ್ಗೂಡಿಸಿ ಕೋಮು ರಾಜಕೀಯದಿಂದ ಸಂರಕ್ಷಿಸುವ ಸಲುವಾಗಿ.

ದೇಶದ ಬ್ಯಾಂಕಿಂಗ್, ವಿಮೆ, ವಿದ್ಯುತ್, ರಕ್ಷಣೆಯಂತಹ ಆರ್ಥಿಕದ ನಿರ್ಣಾಯಕ ವಲಯಗಳನ್ನು ಮತ್ತು ಆರೋಗ್ಯ ಮತ್ತು ಶಿಕ್ಷಣದಂತಹ ವಲಯಗಳನ್ನು ಖಾಸಗಿಯವರಿಗೆ ತೆರೆಯುವುದನ್ನು, ಲಜ್ಜೆಗೆಟ್ಟು ಮಾರುವುದನ್ನು ತಡೆಯಬೇಕಿದೆ. ನಮ್ಮ ಸಾರ್ವಜನಿಕ ವಲಯದ ಆಸ್ತಿಗಳನ್ನು ದೇಶಿ ಮಾತು ವಿದೇಶೀ ಕಂಪನಿಗಳಿಗೆ ಮಾರುವುದು ದೇಶದ ಸಾರ್ವಭೌಮತೆಗೆ ಆತಂಕಕಾರಿ ದೇಶದ ನೈಸರ್ಗಿಕ ಸಂಪನ್ಮೂಲಗಳಾದ ಕಲ್ಲಿದ್ದಲು, ಕಬ್ಬಿಣದ ಅದಿರು, ಇತ್ಯಾದಿಗಳನ್ನು ದೊಡ್ಡ ಗಣಿಗಾರಿಕಾ ಕಂಪನಿಗಳ ಲೂಟಿಗೆ ತೆರೆದಿರಿಸಲಾಗಿದೆ. ಇದೇ ಸಮಯದಲ್ಲಿ ಆದಿವಾಸಿಗಳ ಹಕ್ಕುಗಳನ್ನು ದಮನಿಸಲಾಗುತ್ತಿದೆ. ಚಿಲ್ಲರೆ ವಲಯವನ್ನೂ ವಾಲ್ಮಾರ್ಟ್ ನಂತಹ ದೊಡ್ಡ ಕಂಪನಿಗೆ ತೆರೆಯಲಾಗುತ್ತಿದೆ. ಇದು ಭಾರತದ ಐದು ಕೋಟಿ ಜನರ ಬದುಕಿನ ಆಧಾರವನ್ನೇ ನಾಶ ಮಾಡುತ್ತದೆ.

ಬಡವರನ್ನು ಶೋಷಿಸಿ ಶ್ರೀಮಂತ ದೇಶೀ ಮತ್ತು ವಿದೇಶೀ ಕಂಪನಿಗಳಿಗೆ ಸಹಾಯಧನ ನೀಡುವ ಕಾಂಗ್ರೆಸ್ ಮತ್ತು ಬಿಜೆಪಿಯ ನವ ಉದಾರವಾದಿ ನೀತಿಗಳನ್ನು ದೃಢವಾಗಿ ವಿರೋಧಿಸಬೇಕಿದೆ. ಈ ನೀತಿಗಳಿಂದಾಗಿ ಎಂದೆಂದೂ ಕಾಣದ ಭ್ರಷ್ಟಾಚಾರ ಲಕ್ಷ ಲಕ್ಷ ಕೋಟಿ ರೂಪಾಯಿಗಳಲ್ಲಿ ಆಗುತ್ತಿದೆ.

ಈ ನೀತಿಗಳ ನೇರ ಪರಿಣಾಮವಾಗಿ ಬಡವರು ಮತ್ತು ಶ್ರೀಮಂತರ ನಡುವಿನ ಅಂತರ ಹೆಚ್ಚುತ್ತಿದೆ.

ಕೋಟ್ಯಾಧಿಪತಿಗಳ ಸಂಖ್ಯೆ (5000 ಕೋಟಿ ರೂಪಾಯಿಗಳಿಗೂ ಮೀರಿ ಆಸ್ತಿ ಇರುವ ವ್ಯಕ್ತಿಗಳು) ಭಾರತದಲ್ಲಿ 2003 ರಲ್ಲಿ 13 ಇದ್ದದ್ದು 2011 ರ ಮಾರ್ಚಿಯಲ್ಲಿ 55ಕ್ಕೆ ಏರಿದ್ದರೆ 2012 ರ ಅಕ್ಟೋಬರದಲ್ಲಿ 61ಕ್ಕೆ ಏರಿತ್ತು. 2011 ರಿಂದ 2012 ರವರೆಗಿನ ಒಂದೇ ವರ್ಷದಲ್ಲಿ 100 ಅತಿ ಶ್ರೀಮಂತ ಭಾರತೀಯರ ಸಂಪತ್ತು 241 ಶತಕೋಟಿ ಡಾಲರುಗಳಿಂದ 250 ಶತಕೋಟಿ ಡಾಲರುಗಳಿಗೆ ಏರಿತ್ತು.

ಇದೇ ಸಮಯದಲ್ಲಿ ಭಾರತದ 86.3 ಕೋಟಿ ಜನರ ದಿನದ ಖರ್ಚು ಮಾಡುವ ಸಾಮರ್ಥ್ಯ 20 ರೂ ಮಾತ್ರ. ಸಾಲಬಾಧೆಯಿಂದ ನೊಂದ 2.25 ಲಕ್ಷ ರೈತರು 1995 ರ ನಂತರದಲ್ಲಿ ಆತ್ಮಹತ್ಯೆಗೆ ಶರಣಾಗಿದ್ದಾರೆ.

ದೇಶದ ನೈಸರ್ಗಿಕ ಸಂಪತ್ತುಗಳನ್ನು ಈ ಸಂಪನ್ಮೂಲಗಳನ್ನು ದೇಶದಲ್ಲಿನ ಅಸಮಾನತೆಗಳನ್ನು ತೊಡೆದುಹಾಕಿ ಜನಸಮೂಹಗಳ ಅವಶ್ಯಕತೆಗಳನ್ನು ಪೂರೈಸುವಲ್ಲಿ ಬಳಸುವಂತಾಗಬೇಕು ಎಂದು ಜಾಥಾ ಆಗ್ರಹಿಸುತ್ತದೆ. ಜಾಥಾ ಕೆಲವು ನಿರ್ಣಾಯಕ ಸಮಸ್ಯೆಗಳನ್ನು ಕೈಗೆತ್ತಿಕೊಂಡಿದೆ.

ಮನೆ ನಿವೇಶನ ಮತ್ತು ಭೂಮಿ ಹಕ್ಕು

ಭಾರತದಲ್ಲಿ 21 ದಶಲಕ್ಷಗಳಿಗೂ ಹೆಚ್ಚು ಹೆಕ್ಟೇರುಗಳ ಮಿಗುತೆ ಭೂಮಿ ಲಭ್ಯವಿದೆ ಮತ್ತು ಅದನ್ನು ಕಾನೂನು ಬಾಹಿರವಾಗಿ ಬಲಾಢ್ಯರು ಅತಿಕ್ರಮಿಸಿಕೊಂಡಿದ್ದಾರೆ ಎಂದು ಅಂದಾಜು ಮಾಡಲಾಗಿದೆ. ಆದರೆ ಬರೀ 2.07 ದಶಲಕ್ಷ ಹೆಕ್ಟೇರುಗಳಷ್ಟು ಭೂಮಿ ಮಿಗುತೆ ಎಂದು ಘೋಷಿಸಿ ಬರೀ 1.9 ದಶಲಕ್ಷ ಹೆಕ್ಟೇರುಗಳಷ್ಟನ್ನು ವಿತರಿಸಲಾಗಿದೆ. ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ಇದರ ಬಹುದೊಡ್ಡ ಭಾಗವನ್ನು ವಿತರಣೆ ಮಾಡಿತು. ಭಾರತದಲ್ಲಿ ಭೂರಹಿತ ಕುಟುಂಬಗಳ ಸಂಖ್ಯೆ 1992 ರಲ್ಲಿ ಶೇ. 22 ರಷ್ಟಿದ್ದದ್ದು 2011 ರ ವೇಳೆಗೆ ಶೇ. 41ಕ್ಕೆ ಏರಿದ್ದು ಆಘಾತಕರವಾಗಿದೆ.

ಭೂಮಿಯನ್ನು ಭೂ ರಹಿತರಿಗೆ ವಿತರಿಸಿ ಪ್ರತಿ ಕುಟುಂಬಕ್ಕೂ ಕನಿಷ್ಠ ಒಂದು ಮನೆ ನಿವೇಶನ ಇರುವಂತೆ ಮಾಡುವ ಬದಲು ಕೇಂದ್ರ ಸರ್ಕಾರ ಕಂಪನಿಗಳು ಮತ್ತು ದೊಡ್ಡ ಗಣಿಗಾರಿಕೆ ಕಂಪನಿಗಳು ಭೂಮಿ ಸ್ವಾಧೀನ ಪಡಿಸಿಕೊಳ್ಳುವುದು ಮತ್ತು ಆಕ್ರಮಿಸಿಕೊಳ್ಳುವುದನ್ನು ಪ್ರೋತ್ಸಾಹಿಸುತ್ತಿದೆ. ಐದನೇ ಶೆಡ್ಯುಲಿನ ಸಾಂವಿಧಾನಿಕ ರಕ್ಷಣೆಯ ಭರವಸೆಗೆ ವ್ಯತಿರಿಕ್ತವಾಗಿ ಆದಿವಾಸಿಗಳನ್ನು ಸ್ಥಳಾಂತರಿಸಲಾಗುತ್ತಿದೆ.

ಭೂರಹಿತರಿಗೆ ಭೂಮಿ ಮತ್ತು ಮನೆ ನಿವೇಶನಗಳ ಹಂಚಿಕೆಯ ತುರ್ತು ಅಗತ್ಯ ಇದೆ. ಆದಿವಾಸಿಗಳು ಮತ್ತು ರೈತರ ಭೂಮಿಯ ಬಲಾತ್ಕಾರಿಕ ಆಕ್ರಮಣದಿಂದ ರಕ್ಷಿಸ ಬೇಕಿದೆ. ಅಲ್ಲದೇ ಪೂರ್ಣ ಪರಿಹಾರ ಮತ್ತು ಪುನರ್ವಸತೀಕರಣಕ್ಕಾಗಿ ಹೋರಾಟ ತೀವ್ರಗೊಳ್ಳಬೇಕಿದೆ. ತಮ್ಮ ಭೂಮಿಯನ್ನು ನೀಡಲು ಒಪ್ಪುವ ರೈತರನ್ನು ಮಾತ್ರವಲ್ಲ, ಪಾಲು ಬೆಳೆಗಾರರು, ಕೃಷಿ ಕೂಲಿಕಾರರು ಮತ್ತು



ಭೂಮಿಯ ಮೇಲೆ ತಮ್ಮ ಜೀವಿತಕ್ಕಾಗಿ ಅವಲಂಬಿತರಾದ ಎಲ್ಲರಿಗೂ ನ್ಯಾಯ ದೊರೆಯಬೇಕಿದೆ. ಪ್ರತಿ ಭೂರಹಿತ ಕುಟುಂಬಕ್ಕೂ ನಿವೇಶನ ದೊರೆಯಬೇಕಿದೆ.

ಆಹಾರದ ಹಕ್ಕು

ಇಡೀ ಜಗತ್ತಿನಲ್ಲೇ ಅತ್ಯಂತ ದೊಡ್ಡ ಸಂಖ್ಯೆಯ ಅಪೌಷ್ಠಿಕ ಜನರಿರುವ ನಮ್ಮ ದೇಶದಲ್ಲಿ ಆಹಾರದ ಹಕ್ಕು ಮೂಲಭೂತ ಮತ್ತು ನಿರ್ಣಾಯಕ ಹಕ್ಕಾಗಿರುತ್ತದೆ. ಜಗತ್ತಿನ ಹಸಿವಿನ ಸೂಚ್ಯಂಕದಲ್ಲಿ ಒಟ್ಟು 78 ದೇಶಗಳ ಪೈಕಿ 65ನೇ ಸ್ಥಾನವನ್ನು ಭಾರತ ಹೊಂದಿರುವುದು ನಾಚಿಕೆಯ ಸಂಗತಿಯಾಗಿದೆ. ಇದು ನೇಪಾಳ ಮತ್ತು ಪಾಕಿಸ್ತಾನಗಳಿಗಿಂತಲೂ ಕೆಳಗಿನ ಸ್ಥಾನವಾಗಿದೆ. ಆದರೂ ಕೇಂದ್ರ ಸರ್ಕಾರ ಬಡತನ ರೇಖೆಯ ಕೆಳಗೆ ಮತ್ತು ಮೇಲೆ ಎಂದು ವರ್ಗೀಕರಿಸಿ 'ಗುರಿ ಪದ್ಧತಿ' ಅನುಸರಿಸಿ ಬಡವರಿಗೆ ಆಹಾರದ ಹಕ್ಕನ್ನು ನಿರಾಕರಿಸುತ್ತಿದೆ. ಸರ್ಕಾರದ ಪ್ರಕಾರ 26 ರೂಪಾಯಿಗಳಿಗೂ ಹೆಚ್ಚಿನ ಆದಾಯ ಹೊಂದಿರುವ ಗ್ರಾಮೀಣ ಭಾರತೀಯ ಅಥವಾ 32 ರೂಪಾಯಿ ಆದಾಯದ ನಗರವಾಸಿ ಬಡನಲ್ಲ ಮತ್ತು ಆತನಿಗೆ ರಿಯಾಯಿತಿ ದರದ ಆಹಾರ ಧಾನ್ಯದ ಅರ್ಹತೆ ಇಲ್ಲ!! ಹೀಗಿದ್ದರೂ ಸರ್ಕಾರಿ ಗೋದಾಮುಗಳಲ್ಲಿ 6.67 ಕೋಟಿ ಟನ್ನುಗಳಷ್ಟು ಆಹಾರ ಧಾನ್ಯಗಳು ಕೊಳೆಯುತ್ತಿವೆ. ಸರ್ವೋಚ್ಚ ನ್ಯಾಯಾಲಯ ಇದನ್ನು ವಿತರಿಸಲು ಹೇಳಿದರೂ ಸರ್ಕಾರ ವಿತರಿಸಲು ನಿರಾಕರಿಸಿದೆ. ಸರ್ಕಾರದ ತಪ್ಪು ನೀತಿಗಳಿಂದಾಗಿ ಅವಶ್ಯಕ ಸಾಮಗ್ರಿಗಳ ಬೆಲೆಗಳು ಪ್ರತಿ ವರ್ಷವೂ ಏರುತ್ತಲೇ ಇವೆ. ಕೃಷಿ ಸರಕುಗಳ ಸಟ್ಟಾ ವ್ಯವಹಾರ, ಪೆಟ್ರೋಲ್ ಡೀಸೆಲ್ ಮತ್ತು ಸೀಮೆ ಎಣ್ಣೆಗಳ ಮೇಲಿನ ಸಹಾಯಧನದಲ್ಲಿ ಕಡಿತ ಮತ್ತು ಬೆಲೆ ಏರಿಕೆ ಈ ಪರಿಸ್ಥಿತಿಗೆ ಕಾರಣವಾಗಿದೆ. ಈಗ ಸಹಾಯ ಧನದ ಗ್ಯಾಸ್ ಸಿಲಿಂಡರುಗಳಲ್ಲಿ ಕಡಿತ ಮಾಡುವುದರ ಜೊತೆಗೆ ಮೂರು ಬಾರಿ ಬೆಲೆ ಏರಿಸಲಾಗಿದೆ. ಅಕ್ಕಿ, ಗೋಧಿ, ಸಕ್ಕರೆ, ಅಡುಗೆ ಎಣ್ಣೆ, ದ್ವಿದಳ ಧಾನ್ಯಗಳ ಬೆಲೆಗಳು ಶೇ20 ರಿಂದ ಶೇ 30 ರಷ್ಟು ಏರಿದೆ. ತರಕಾರಿಗಳ ಬೆಲೆಯೂ ಏರಿದೆ.

ಸಾರ್ವಜನಿಕ ಒತ್ತಡದ ನಡುವೆ ಸರ್ಕಾರ ಒಂದು ಆಹಾರ ಭದ್ರತಾ ಮಸೂದೆ ತಯಾರಿಸಿದೆ. ಆದರೆ, 'ಗುರಿ ಪದ್ಧತಿ'ಯನ್ನು ಉಳಿಸಿಕೊಂಡು 35 ಕೆಜಿ ಆಹಾರ ಧಾನ್ಯ ಕೊಡಬೇಕಾದ ಕಡೆ ಧಾನ್ಯವನ್ನು ಕಡಿತಗೊಳಿಸಲಾಯಸುತ್ತದೆ. ಆಹಾರ ಧಾನ್ಯದ ರೂಪದಲ್ಲಿ ಕೊಡಬೇಕಾದದ್ದನ್ನು ದುಡ್ಡಿನ ರೂಪದಲ್ಲಿ ಪಾವತಿಸಲಾಗುತ್ತದೆ. ಇದು ಸರಕಾರದ ಖರ್ಚನ್ನು ಕಡಿತಗೊಳಿಸುವ ಕ್ರಮವೂ ಹೌದು. ಈ ಅನ್ಯಾಯವನ್ನು ವಿರೋಧಿಸಬೇಕಿದೆ.

ಶಿಕ್ಷಣ ಮತ್ತು ಉದ್ಯೋಗದ ಹಕ್ಕು

ಇಪ್ಪತ್ತೈದು ವರ್ಷದೊಳಗಿನ ಯುವ ಜನತೆ ಒಟ್ಟು ಜನಸಂಖ್ಯೆಯ ಶೇ 50 ರಷ್ಟಿದ್ದಾರೆ. ಇವರಿಗಾಗಿ ಸರಕಾರ ಎಂತಹ ಅವಕಾಶಗಳನ್ನು ಸೃಷ್ಟಿ ಮಾಡುತ್ತದೆ ಎಂಬುದರ ಮೇಲೆ ದೇಶದ ಭವಿಷ್ಯ ನಿಂತಿದೆ. ಸರಕಾರದ ಈವರೆಗಿನ ಶಿಕ್ಷಣ ಮತ್ತು ಉದ್ಯೋಗ ಅವಕಾಶಗಳ ಸೃಷ್ಟಿ ಕ್ರಮಗಳು ನಾಚಿಕೇಡಿನದಾಗಿದೆ.

ಸರಕಾರ 2009 ರಲ್ಲಿ ಶಿಕ್ಷಣದ ಹಕ್ಕಿನ ಮಸೂದೆಯನ್ನು ಜಾರಿ ಮಾಡಿತು. ಅದರ ಪ್ರಕಾರ ಇಷ್ಟೊತ್ತಿಗೆ ಪ್ರತಿ ಮಗುವೂ ಶಾಲೆಯಲ್ಲಿರಬೇಕಾಗಿತ್ತು. ಈ ಕಾನೂನನ್ನು ಜಾರಿ ಮಾಡಲು ಹೆಚ್ಚು ಶಾಲೆಗಳನ್ನು ತೆರೆದು 14 ಲಕ್ಷ ಶಿಕ್ಷಕರ ನೇಮಕ ಮಾಡಬೇಕಾಗಿತ್ತು. ಆದರೆ ಕೇಂದ್ರ ಸರಕಾರ ಅವಶ್ಯ ಹಣಕಾಸು ನೀಡಲು ನಿರಾಕರಿಸಿದೆ. ಈಗಾಗಲೇ ಹಣಕಾಸಿನ ಬಿಕ್ಕಟ್ಟಿನಲ್ಲಿರುವ ರಾಜ್ಯ ಸರಕಾರಗಳು ಅವಷ್ಟಕ್ಕೆ ಅವರೇ ಈ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಬಿಡಲಾಗಿದೆ. ಇಂದು ಒಂದನೇ ಕ್ಲಾಸಿಗೆ ಸೇರಿದ ಮಕ್ಕಳಲ್ಲಿ ಬರೀ ಶೇ 16 ರಷ್ಟು ಮಕ್ಕಳು ಮಾತ್ರ 12 ನೇ ಕ್ಲಾಸಿನ ವರೆಗೆ ಹೋಗುತ್ತಾರೆ. ಉಳಿದವರಲ್ಲಿ ಬಹುತೇಕರು ಆರ್ಥಿಕ ಕಾರಣಗಳಿಂದಾಗಿ ಶಾಲೆ ಬಿಟ್ಟಿರುತ್ತಾರೆ. ಪರಿಶಿಷ್ಟ ಜಾತಿ/ವರ್ಗಗಳ ಪರಿಸ್ಥಿತಿ ಇನ್ನೂ ದಾರುಣ.

ಪುಟ 10 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಗುತ್ತಿಗೆ ನರ್ಸ್‌ಗಳ ವಜಾ ಕ್ರಮ ಖಂಡನೀಯ

ಸೇವೆ ಕಾಯಂಗೊಳಿಸಿ ನ್ಯಾಯಬದ್ಧವಾದ ವೇತನ ನೀಡಲು ಒತ್ತಾಯಿಸಿ ಮುಷ್ಕರ ನಡೆಸುತ್ತಿದ್ದ ಬೆಂಗಳೂರಿನ ವಾಣಿ ವಿಲಾಸ, ವಿಕ್ಟೋರಿಯಾ, ಮಿಂಟೋ, ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದ 409 ಮಂದಿ ನರ್ಸ್‌ಗಳನ್ನು ವಜಾ ಮಾಡಿದ್ದು ರಾಜ್ಯ ಸರ್ಕಾರದ ಘೋರ, ಅಮಾನವೀಯ ಕ್ರಮವಾಗಿದೆ. ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಆಡಳಿತ ಮಂಡಳಿಗೆ ಹಲವು ಬಾರಿ ಮನವಿ ಸಲ್ಲಿಸಿದ್ದಾಗ್ಯೂ ಪ್ರಯೋಜನವಾಗದೆ ಹೋದಾಗ ಗುತ್ತಿಗೆ ನರ್ಸ್‌ಗಳು ಕಳೆದ ಜನವರಿ 9ರಿಂದ ಮುಷ್ಕರ ಆರಂಭಿಸಿದ್ದರು. ಮುಷ್ಕರ ನಿರತ ನರ್ಸ್‌ಗಳ ಬೇಡಿಕೆಗಳನ್ನು ಪರಿಗಣಿಸುವ ಬದಲು ಆಡಳಿತ ಮಂಡಳಿ ಹೊಸದಾಗಿ 600 ಕಾಯಂ ನರ್ಸ್‌ಗಳ ನೇಮಕಕ್ಕೆ ಸಿದ್ಧತೆ ನಡೆಸಿತ್ತು. ಈ ನೇಮಕಾತಿ ಸ್ಥಗಿತಗೊಳಿಸುವಂತೆ ಕೋರಿ ಮುಷ್ಕರ ನಿರತ ಗುತ್ತಿಗೆ ನರ್ಸ್‌ಗಳ ಸಂಘ ಹೈಕೋರ್ಟ್ ಮೊರೆ ಹೋಗಿತ್ತು. ಈ ನಡುವೆ ಕಾರ್ಮಿಕ ಇಲಾಖೆಯ ಮಧ್ಯಪ್ರವೇಶದಿಂದ ಮುಖ್ಯ ಆಡಳಿತಾಧಿಕಾರಿ ರವಿಕುಮಾರ್ ಮತ್ತು ಮುಷ್ಕರ ನಿರತ ನರ್ಸ್‌ಗಳ ಪ್ರತಿನಿಧಿಗಳ ನಡುವೆ ಮಾತುಕತೆ ನಡೆದು ನರ್ಸ್‌ಗಳು ತಮ್ಮ 'ಮುಷ್ಕರವನ್ನು ಜನವರಿ 30ರಂದೇ ಹಿಂತೆಗೆದುಕೊಂಡಿದ್ದರು. ಅಂದಿನಿಂದ ಬಿಎಂಸಿಆರ್‌ಐ ಕಛೇರಿ ಆವರಣದಲ್ಲಿ ಕೆಲಸಕ್ಕೆ ಹಾಜರಾಗುವ ಆದೇಶಕ್ಕಾಗಿ ಕಾಯುತ್ತಿದ್ದರು. ಆಡಳಿತ ಮಂಡಳಿಯು ಫೆಬ್ರವರಿ 16ರಂದು ಮಂಡಳಿಯ ಅಧ್ಯಕ್ಷ ವೈದ್ಯಕೀಯ ಶಿಕ್ಷಣ ಮಂತ್ರಿ ಎಸ್.ಎ. ರಾಮದಾಸ್ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮುಷ್ಕರದಲ್ಲಿ ಭಾಗಿಯಾದ ಎಲ್ಲ 409 ಗುತ್ತಿಗೆ ನರ್ಸ್‌ಗಳನ್ನು ಸೇವೆಯಿಂದ ವಜಾ ಮಾಡುವ ತೀರ್ಮಾನ ಕೈಗೊಂಡಿತು.


ರಾಜ್ಯದಲ್ಲಿ ಇಷ್ಟೊಂದು ಮಂದಿ ನೌಕರರನ್ನು ಸೇವೆಯಿಂದ ಒಮ್ಮೆಲೇ ವಜಾಮಾಡಿದಂತಹ ಕ್ರೂರ ಉದಾಹರಣೆ ಬೇರೊಂದಿಲ್ಲ. ಬಿಜೆಪಿ ಸಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ದಿನದಿಂದಲೂ ಕಾರ್ಮಿಕ ವಿರೋಧಿ ನೀತಿಯನ್ನೇ ಅನುಸರಿಸಿಕೊಂಡು ಬಂದಿತ್ತು. ಯಾವುದೇ ಜನಸಮೂಹಗಳ ಹೋರಾಟಗಳನ್ನು ಅದು ಸಹಿಸುತ್ತಿರಲಿಲ್ಲ. ಮುಂಬರುವ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಇತ್ತೀಚೆಗೆ ವಿವಿಧ ಇಲಾಖೆಗಳಲ್ಲಿ ಅನೇಕ ವರ್ಷಗಳಿಂದ ಕೆಲಸ ಮಾಡುತ್ತಿದ್ದ 23ಸಾವಿರ ದಿನಗೂಲಿ ನೌಕರರನ್ನು ಕಾಯಂಗೊಳಿಸುವ ತೀರ್ಮಾನವೊಂದನ್ನು ಬಿಟ್ಟರೆ ಬೇರೆ ಯಾವ ಸಂದರ್ಭದಲ್ಲಿಯೂ ಅದು ಕಾರ್ಮಿಕರ ಪರವಾದ ಧೋರಣೆಯನ್ನು ಅನುಸರಿಸಲು ಮುಂದಾಗಿಲ್ಲ. ಕಳೆದ ಐದಾರು ವರ್ಷಗಳಿಂದ ಗುತ್ತಿಗೆ ಆಧಾರದಲ್ಲಿ ಕೆಲಸಮಾಡುತ್ತಾ ಗುತ್ತಿಗೆದಾರರಿಂದ ತೀವ್ರ ಶೋಷಣೆ ಅನುಭವಿಸುತ್ತಿದ್ದ ನರ್ಸ್‌ಗಳು ನ್ಯಾಯ ಕೇಳಿದ್ದೇ ತಪ್ಪು ಎನ್ನುವಂತೆ ಅವರ ಮೇಲೆ ಗದಾ ಪ್ರಹಾರ ಮಾಡಿರುವುದನ್ನು ಕನಿಷ್ಠ ಮಾನವೀಯತೆ ಹೊಂದಿರುವವರ್‍ಯಾರೂ ಒಪ್ಪಲಾರರು.

ಜನವರಿಯಿಂದ ನಡೆಯುತ್ತಿದ್ದ ನರ್ಸ್‌ಗಳ ಮುಷ್ಕರದಿಂದಾಗಿ ಬೆಂಗಳೂರಿನ 5 ಪ್ರತಿಷ್ಠಿತ ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡುವ ವ್ಯವಸ್ಥೆ ಅಸ್ತವ್ಯಸ್ತಗೊಂಡಿತ್ತು. ಸರ್ಕಾರಿ ಆಸ್ಪತ್ರೆಗಳನ್ನೇ ಅವಲಂಭಿಸಿರುವ ಬಡರೋಗಿಗಳು ಪರದಾಡುವಂತಾಗಿತ್ತು. ಮುಷ್ಕರದ ಬಿಸಿ ಶಸ್ತ್ರ ಚಿಕಿತ್ಸಾ ವಿಭಾಗಕ್ಕೂ ತಟ್ಟದೆ ಇರಲಿಲ್ಲ. ಈ ಅವಾಂತರಕ್ಕೆ ಸರ್ಕಾರದ ವೈದ್ಯಕೀಯ ಶಿಕ್ಷಣ ಮತ್ತು ಆಸ್ಪತ್ರೆಗಳ ಹೊಣೆ ಹೊತ್ತಿರುವ ವೈದ್ಯಕೀಯ ಶಿಕ್ಷಣ ಮಂತ್ರಿಯ ಹಠಮಾರಿ ಧೋರಣೆಯೇ ಕಾರಣವಾಗಿದೆ. ಮುಷ್ಕರ ನಿರತ ನರ್ಸ್‌ಗಳ ಬೇಡಿಕೆಗಳು ಈಡೇರಿಸಲಾರದಂಥವೇನೂ ಆಗಿರಲಿಲ್ಲ. ಇವರ ಸೇವೆಯನ್ನು ಕಾಯಂಗೊಳಿಸುವ ಬದಲು ಹೊಸ 600 ಮಂದಿ ಕಾಯಂ ನರ್ಸ್‌ಗಳ ನೇಮಕಾತಿಗೆ ಸರ್ಕಾರ ತಯಾರಿದೆ ಎನ್ನುವಾಗ ಮುಷ್ಕರ ನಿರತ 409 ಗುತ್ತಿಗೆ ನರ್ಸ್‌ಗಳ ಸೇವೆಯನ್ನು ಕಾಯಂಗೊಳಿಸುವುದು ಸರಕಾರಕ್ಕೆ ದೊಡ್ಡ ಹೊರೆಯೇನೂ ಆಗಿರಲಿಲ್ಲ. ಮಾತುಕತೆಯ ಮೂಲಕ ಗುತ್ತಿಗೆ ನರ್ಸ್‌ಗಳ ಬೇಡಿಕೆಗಳನ್ನು ಬಗೆಹರಿಸಿಕೊಳ್ಳುವ ಪ್ರಯತ್ನವನ್ನು ಸರ್ಕಾರ ಮಾಡಿದ್ದರೆ ಆಸ್ಪತ್ರೆಗಳಲ್ಲಿ ಬಡರೋಗಿಗಳ ಸ್ಥಿತಿ ಚಿಂತಾಜನಕವಾಗುವುದನ್ನು ತಪ್ಪಿಸಬಹುದಾಗಿತ್ತು. ಸರ್ಕಾರದ ಕಾರ್ಮಿಕ ವಿರೋಧಿ–ಮುಷ್ಕರ ವಿರೋಧಿ ಧೋರಣೆಯೇ ಈ ಅನಾಹುತಕ್ಕೆ ಕಾರಣವಾಗಿದೆ.

ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸಾವಿರಾರು ನೌಕರರು ಗುತ್ತಿಗೆ ಆಧಾರದಲ್ಲಿ ಹತ್ತಾರು ವರ್ಷಗಳಿಂದ ಕೆಲಸಮಾಡುತ್ತಿದ್ದಾರೆ. ಗುತ್ತಿಗೆದಾರರು ಕಾರ್ಮಿಕರಿಗೆ ಕೊಡಬೇಕಾದ ಕಾನೂನುಬದ್ಧ ವೇತನವನ್ನೂ ಕೊಡದೆ ಗೋಳಾಡಿಸುತ್ತಿರುತ್ತಾರೆ.

ಮಟ 14 ಕ್ಕೆ

ಮಾಧ್ಯಮಗಳು ಊದಿದವು ತುಕ್ಕು ಹಿಡಿದ ತುತ್ತೂರಿ!



ಇದು ಅಭೂತಪೂರ್ವ ಮುಷ್ಕರ. ದೇಶದ, ವಿಶ್ವದ ಕಾರ್ಮಿಕ ವರ್ಗದ ಇತಿಹಾಸದಲ್ಲೇ ದಾಖಲೆ ಬರೆದ ಮಹಾ ಮುಷ್ಕರ. 48 ಗಂಟೆಗಳ ಈ ಮುಷ್ಕರದಲ್ಲಿ ಬಾಗವಹಿಸಿದವರು ಹತ್ತಾರು ಕೋಟಿ ಕಾರ್ಮಿಕರು. ಜೊತೆಯಾಗಿ ನಿಂತು ಹೆಗಲು ಕೊಟ್ಟವರು ಇನ್ನೂ ಹಲವು ಕೋಟಿ ಮಹಾಜನತೆ.

ಇಂತಹ ಜನ ಕೋಟಿಯ ಅಂತರಂಗದ ಸಂಕಟಗಳು, ಎದೆಯ ಕುದಿತ, ಸಹನೆಯ ಕಟ್ಟೆಯೊಡೆದು ಬೀದಿ, ಬೀದಿಗಳಲ್ಲಿ ಬಿಗಿ ಮುಷ್ಟಿಯನೆತ್ತಿ ಧಿಕ್ಕಾರದ ಘೋಷಣೆಗಳಾಗಿ, ಆಳುವವರ ಎದೆಗೆ ಎಸೆದ ಸಿಡಿಗುಂಡುಗಳಾಗಿ ಮೊಳಗಿ ಎತ್ತಿದ ಪ್ರಶ್ನೆಗಳಿಗೆ ಉತ್ತರಗಳನ್ನು ಬಯಸಿದವು. ಉತ್ತರಿಸದೇ ತತ್ತರಿಸಿದ ಸರಕಾರಗಳಿಗೆ ಮತ್ತೇ ಪ್ರಶ್ನೆಗಳನ್ನೆಸೆದರು. ಮಾತ್ರವಲ್ಲ, ಆಳುವವರ ದಿವಾಳಿತನವನ್ನು, ಸುಧಾರಣೆ, ಅಭಿವೃದ್ಧಿಯ ನಯವಂಚಕತನ, ಕ್ರೌರ್ಯದ ಕರಾಳ ಹೊದಿಕೆಯನ್ನು ಕಿತ್ತೆಸೆದು ಎಲ್ಲರೆದುರು ನಿಲ್ಲಿಸಿ ಕಟೆ, ಕಟೆಗೆ ಹತ್ತಿಸಿ ವಿಚಾರಿಸಿದರು,

ಅಭಿನಂದನೀಯ

ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಗುಜರಾತನಿಂದ ಗೌಹಾಟಿಯವರೆಗೆ ಎಲ್ಲಾ ಅಡೆ ತಡೆಗಳನ್ನು ದಿಟ್ಟವಾಗಿ ಎದುರಿಸಿ, ತ್ಯಾಗ ಬಲಿದಾನದಾನಕ್ಕೂ ಹಿಂಜರಿಯದೇ ಘಾತುಕರನ್ನು ಎದುರಿಸಿ ಇಬ್ಬರ ಪ್ರಾಣಾರ್ಪಣೆ ಮಾಡಿ ಎಲ್ಲೆಲ್ಲೂ ಮೊಳಗಿದ್ದು ಅದೇ ವರ್ಗ ಸಂಘರ್ಷದ ರಣ ಕಹಳೆ. ಆದ್ದರಿಂದಲೇ ಕರೆ ನೀಡಿದ್ದು ಸಾರ್ವತ್ರಿಕ ಮುಷ್ಕರವಾದರೂ ಪ್ರತಿರೋಧ'ದ ಈ ಮಹಾಪೂರದಿಂದ ಇಡೀ ದೇಶವೇ ಬಂದ್ ಆಗಿ ಮಾರ್ಪಡುವಂತಾಯಿತು. ಸಂಘಟನೆ, ಸಂಘಟನೆಯ ಶಕ್ತಿ ಅಷ್ಟಾಗಿ ಇಲ್ಲದಿರುವೆಡೆಯೂ ಸ್ವಯಂ ಪ್ರೇರಣೆಯಿಂದ ಜನತೆ ತಾವಾಗಿಯೇ ಸ್ಪಂದಿಸಿ ರಾಷ್ಟ್ರದ ಉಳಿವಿನ ಕರೆಗೆ ಕೈ ಜೋಡಿಸದ್ದೇನು ಸಾಮಾನ್ಯ ಸಂಗತಿಯೇ? ಇದು ಯಶಸ್ವಿ, ಅಭೂತಪೂರ್ವ, ಮಹಾ ಮುಷ್ಕರವಲ್ಲವೇ? ಈ ಎಲ್ಲಾ ಶ್ರಮ ಜೀವಿಗಳಿಗೆ, ಕಾರ್ಮಿಕ ವರ್ಗದ ಅಪೂರ್ವ ಒಗ್ಗಟ್ಟು ಬೆಸೆದ ನಾಯಕತ್ವಕ್ಕೆ ಇದೋ ಲಾಲ್ ಸಲಾಂ.

ಕಣ್ಣು ಮುಚ್ಚಿಕೊಂಡ ಕ್ಯಾಮರಾಗಳು!

'ನಿಜಕ್ಕೂ ಇಂತಹ ಹೋರಾಟಗಳಿಂದ ಏನಾದರೂ ಪ್ರಯೋಜನ ಆಗಬಲ್ಲುದೇ?, ಸರಕಾರ ಸ್ಪಂದಿಸುತ್ತದೆಯೇ?' ಇದು ಕೊಡಗಿನ ಚಾನೆಲ್ ಒಂದರ ಸಂದರ್ಶನದಲ್ಲಿ ಮಿತ್ರ ವರದಿಗಾರ ಕೇಳಿದ ಪ್ರಶ್ನೆ. ಜನ ಚಳುವಳಿಗಳ ಬಗ್ಗೆ ಒಂದಿಷ್ಟು ಕಾಳಜಿ ಇರುವವರಲ್ಲಿಯೂ ಸರಕಾರಗಳ ವರ್ತನೆಗಳನ್ನು ಬಲ್ಲವರಲ್ಲಿ ಹುಟ್ಟುವ ಸಹಜ ಪ್ರಶ್ನೆ! ಆದರೆ ಜನರ ನಿತ್ಯದ ಬವಣೆಗಳನ್ನು ಕಂಡ ಮೇಲೂ, ಮುಷ್ಕರ ಕರೆ, ನಂತರ ಅದು ಯಶಸ್ವಿಯಾದ ಮೇಲೂ ಇದೇ ಪ್ರಶ್ನೆಗಳನ್ನು ಎತ್ತುತ್ತವೆ ಎಂದರೆ. ನಮ್ಮ ಪ್ರಾದೇಶಿಕ ಕನ್ನಡ ಮಾಧ್ಯಮ, ರಾಷ್ಟ್ರೀಯ, ಅಂತರ್‌ರಾಷ್ಟ್ರೀಯ ಮಾಧ್ಯಮಗಳು ಇದೇ ಪ್ರಶ್ನೆಯನ್ನು ಕೇಳುತ್ತಾ ಹೋರಾಟವನ್ನೇ ಗೇಲಿ ಮಾಡಿದವು. ಈ ಮುಷ್ಕರದ ತೀರ್ಮಾನ ಮಾಡಿ ಹಲವು ತಿಂಗಳುಗಳೇ ಕಳೆದರೂ, ಸಿದ್ಧತೆಗಳು ಎಲ್ಲೆಡೆ ಭರದಿಂದ ನಡೆದರೂ ಕೊನೆಯ ಕ್ಷಣಗಳವರೆಗೂ ಬಾಯಿಗೆ ಬೀಗ ಹಾಕಿಕೊಂಡಿದ್ದ ಇಂತಹ ಮಾಧ್ಯಮಗಳು ಮಾತನಾಡಿದ್ದೇ 'ಏನು ಪ್ರಯೋಜನ'ವೆಂಬ ಪ್ರಶ್ನೆಯಿಂದ! ಹಜಾರೆಯವರ 'ಗಾಂಧಿ ಚಳುವಳಿ'(?) ಅಥವಾ ಬಾಬಾ ರಾಮದೇವ್‌ರವರ ಭ್ರಷ್ಟಾಚಾರ ವಿರೋಧಿ ಶಿರ್ಷಾಸನದ ಬುಡಬುಡಿಕೆ ಪ್ರಸಾರಿಸಲು ಹಗಲು, ರಾತ್ರಿ ಒಂಟಿ ಕಾಲ ಮೇಲೆ ನಿಲ್ಲುವ ನಮ್ಮ ಈ ಲಗಾಟಿ ಮಾಧ್ಯಮಗಳಿಗೆ ಕೋಟ್ಯಾಂತರ ಜನರ ಜೀವನ್ಮರಣದ ಪ್ರಶ್ನೆ 'ರಾಷ್ಟ್ರೀಯ ಹಾನಿ'ಯಾಗಿ ಯಾಕೆ ಕಂಡಿತು?

20,000 ಕೋಟಿ ಹಾನಿಯಾಯಿತೆಂದು ಲೆಕ್ಕ ಹೇಳಿದ ಅದೇ ಹೊತ್ತಿನಲ್ಲಿ ಕೇಂದ್ರದ 2ಜಿ ಹಗರಣ,ಕಲ್ಲಿದ್ದಿಲು, ಗ್ಯಾಸ್ ಹಗರಣ, ಗಣಿ, ಹೆಲಿಕಾಪ್ಟರ್ ಹಗರಣ ದಂತಹುಗಳಲ್ಲಿ ದೇಶಕ್ಕೆ ಆದ ಲಕ್ಷಾಂತರ ಕೋಟಿ ರೂ.ಗಳ ಹಾನಿಯ ಬಗ್ಗೆ ಯಾಕೆ ನಮ್ಮ ಮಾಧ್ಯಮಗಳು ಬಾಯಿ ಬಿಡಲಿಲ್ಲ. ಕಂಪನಿಗಳು, ಆಳುವವರ್ಗಗಳ ರಾಜಕಾರಣಿಗಳು ನಡೆಸುವ ಲೂಟಿ ದೇಶೋದ್ಧಾರವೇ?

ಎಷ್ಟೊಂದು ಪ್ರಭುವಾಣಿಗಳು! ?

ನಮ್ಮಲ್ಲೇ ನೋಡಿ! ಕಾರ್ಪೊರೇಟ್ ಮಾಧ್ಯಮಗಳ ಲಾಭಖೋರತನ, ಹಣ ಗಳಿಕೆಯ ಲಾಲಸೆಗಳನ್ನೇ ನಿಷ್ಠವಾಗಿ ಅನುಸರಿಸುವ ಪತ್ರಿಕೆ, ಟಿ.ವಿ.ಚಾನೆಲ್ಗಳ ನಡುವೆ ಇನ್ನೂ ಒಂದಿಷ್ಟು ಜನ ಪರ ಮನೋಭಾವ ಉಳಿಸಿಕೊಂಡಿರುವ ಈ ಹಣಕಾಸು ಪ್ಯಾಕೇಜಿಗಾಗಿ ಕಾರ್ಮಿಕರ ಕುಟುಂಬಗಳು 65ದಿನಗಳ ಸರದಿ ಉಪವಾಸ ಮುಷ್ಕರ ನಡೆಸಿದರೂ ಅದನ್ನು ನಿರ್ಲಕ್ಷಿಸಿದ ಯುಪಿಎ–2 ಹಣಕಾಸು ಮಂತ್ರಿಗಳು ಹಣಕಾಸು ಪ್ಯಾಕೇಜನ್ನು ಒದಗಿಸಲು ನಿರಾಕರಿಸಿದರು. ಇದರಿಂದ ಕುಪಿತಗೊಂಡ ಕಾರ್ಮಿಕರು ಮುಷ್ಕರ ನಡೆಸಿದರು. ನಂತರ ಯುಪಿಎ–2 ಸರಕಾರದ ಗಮನ ಸೆಳೆಯಲು. ಪ್ರಧಾನ ಮಂತ್ರಿಗಳು ಇದರಲ್ಲಿ ಮಧ್ಯಪ್ರವೇಶಿಸಬೇಕೆಂದು ಕೋರುವ ಮನವಿ ಪತ್ರವನ್ನು ಕಾರ್ಮಿಕರು ತಮ್ಮ ರಕ್ತದಿಂದ ಸಹಿ ಮಾಡಿ ಕಳಿಸಿದ್ದಾರೆ ಎಂದು ವರದಿಯಾಗಿದೆ. ಇದರ ಪ್ರತಿಗಳನ್ನು ಯುಪಿಎ ಅಧ್ಯಕ್ಷೆ, ಭಾರೀ ಉದ್ದಿಮೆಗಳ ಮಂತ್ರಿ ಮತ್ತು ತಮಿಳುನಾಡು ಮುಖ್ಯಮಂತ್ರಿಗಳಿಗೂ ಕಳಿಸಲಾಗಿದೆಯಂತೆ.

ಇಂತಹ ಮೌಲ್ಯಗಳೂ ಸಹ ಲಾಭ ನಷ್ಟಗಳ

ಮಟ 4 ಕ್ಕೆ

“ಅಧಿಕಾರದಾಹದಲ್ಲೇ ಕಾಲ ಕಳೆದ ಬಿಜೆಪಿ ರಾಜ್ಯ ಸರ್ಕಾರ”

ಆನೇಕಲ್ ಜಾಥಾದಲ್ಲಿ ಜಿ.ವಿ.ಶ್ರೀರಾಮರೆಡ್ಡಿ

ಎಲ್ಲರಿಗೂ ರೇಷನ್, ರೇಷನ್ ಕಾರ್ಡ್, ಮನೆ-ನಿವೇಶನಕ್ಕಾಗಿ ಅನೇಕಲ್ ತಾಲ್ಲೂಕಿಗೆ ಶಾಶ್ವತ ಕುಡಿಯುವ ನೀರು, ಬಗರ್ ಹುಕುಂ ಸಾಗುವಳಿ ಸಕ್ರಮ, ಅಸಂಘಟಿತ ಕಾರ್ಮಿಕರಿಗೆ ಕನಿಷ್ಠ ವೇತನಕ್ಕಾಗಿ ಮತ್ತು ರಾಜ್ಯ ಬಿಜೆಪಿ ಮತ್ತು ಕೇಂದ್ರ ಕಾಂಗ್ರೆಸ್ ಸರ್ಕಾರಗಳ ಭ್ರಷ್ಟಾಚಾರ ಮತ್ತು ಜನ ವಿರೋಧಿ ನೀತಿಗಳ ವಿರುದ್ಧ ಸಿಪಿಐ(ಎಂ) ನೇತೃತ್ವದಲ್ಲಿ ನಾಗರೀಕರ ಸಮಾವೇಶವು ಇತ್ತೀಚೆಗೆ ನಡೆಯಿತು. ಅದಕ್ಕೆ ಪೂರ್ವಭಾವಿಯಾಗಿ ಜನವರಿ 18 ರಿಂದ 25 2013ರವರೆಗೆ ಅನೇಕಲ್ ತಾಲ್ಲೂಕಿನಾದ್ಯಂತ ಹಳ್ಳಿಗಳನ್ನು ಒಳಗೊಂಡು ಅತ್ಯಂತ ಯಶಸ್ವಿಯಾಗಿ ನಡೆದ ಜಾಥ ಫೆಬ್ರವರಿ 3 ರಂದು ಬೃಹತ್ ಸಾವಾವೇಶ ವಾಗಿ ಮಾರ್ಪಟಿತ್ತು.



ಸಾವಾವೇಶಕ್ಕೆ ಮೊದಲು ಆನೇಕಲ್ಲಿನ ಪ್ರಮುಖ ಬೀದಿಯಲ್ಲಿ ರ್‍ಯಾಲಿ ನಡೆದು ನಂತರದಲ್ಲಿ ಬೃಹತ್ ಬಹಿರಂಗ ಸಮಾವೇಶ ನಡೆಯಿತು. ಇದೇ ಸಂದರ್ಭದಲ್ಲಿ ಜಾಥದಲ್ಲಿ ಪಾಲ್ಗೊಂಡಿದ್ದ ಕಾರ್ಯಕರ್ತರನ್ನು ಗೌರವಿಸಲಾಯಿತು. ಸಾಮಾವೇಶದ ವೇದಿಕಯಲ್ಲಿ ಸಿಪಿಐ(ಎಂ) ಜಿಲ್ಲಾ ಮುಖಂಡರಾದ ವೆಂಕಟಾಚಲಯ್ಯ, ಕೆ.ಎನ್.ಉಮೇಶ್, ಲಕ್ಷ್ಮಣ ಕುಮಾರ್ ಹಾಗೂ ತಾಲ್ಲೂಕಿನ ಮುಖಂಡರು ಭಾಗವಹಿಸಿದ್ದರು. ಜೊತೆಗೆ ರೈತರು, ಕಾರ್ಮಿಕರು, ಯುವಜನರು ಸೇರಿದಂತೆ ಸಾವಿರಕ್ಕೂ ಮೀರಿ ಜನರು ಭಾಗವಹಿದ್ದರು.

ಈ ಸಂದರ್ಭದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ. ಶ್ರೀರಾಮರೆಡ್ಡಿಯವರು ಮಾತನಾಡಿ ಅಧಿಕಾರಕ್ಕೆ ಬಂದ ಮೇಲೆ ಕೆ.ಜಿ.ಗೆ ಎರಡು ರೂಪಾಯಿಯಂತೆ ಅಕ್ಕಿ ಕೊಡುತ್ತೇವೆಂದು ಹೇಳಿದ್ದ ಬಿಜೆಪಿ ರಾಜ್ಯ ಸರ್ಕಾರ ಈ ಹಿಂದೆ ಕೊಡುತ್ತಿದ್ದನ್ನು ಹಾಳುಗೆಡವಿದೆ. ರಾಜ್ಯದ ಖಜಾನೆಯನ್ನು ಖಾಲಿ ಮಾಡಿದೆ. ರಾಜ್ಯದ ಎಲ್ಲಾ ಸಂಪತ್ತನ್ನು ಲೂಟಿ ಮಾಡಲಾಗುತ್ತಿದೆ. ಯು.ಪಿ.ಎ ಎರಡನೆಯ ಬಾರಿಗೆ ಅಧಿಕಾರಕ್ಕೆ ಬಂದ ಮೇಲೆ ಪ್ರತಿಯೊಂದು ಜೀವನ ಅವಶ್ಯಕ ವಸ್ತುಗಳ ಬೆಲೆಗಳು ಆಕಾಶದೆತ್ತರಕ್ಕೆ ಹೋಗಿವೆ. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ನಾಶ ಮಾಡಲಾಗುತ್ತಿದೆ ಎಂದರು.

ಪುಟ 13 ಕ್ಕೆ

......ತುಕ್ಕು ಹಿಡಿದ ತುತ್ತೂರಿ!

ಪುಟ 3 ರಿಂದ

ಲೆಕ್ಕಾಚಾರಗಳಿಂದ ಹೊರತಲ್ಲವೆಂದು ಕೊಂಡರೂ) ‘ಪ್ರಜಾವಾಣಿ’ ಪತ್ರಿಕೆ ತನ್ನ ಸಂಪಾದಕೀಯದಲ್ಲಿ ಮುಷ್ಕರವನ್ನು ದೂಷಣೆ ಮಾಡಿ ಹೀಗಳೆದ ವಾದ ವೈಖರಿಯೇ ವಿಚಿತ್ರವಾಗಿತ್ತು. ಮುಷ್ಕರಗಳಿಗೆ ಮಣಿದು ಬೇಡಿಕೆ ಈಡೇರಿಸಿದ ಉದಾಹರಣೆಗಳೇ ಅವರು ಕಂಡೇ ಇಲ್ಲದಿರುವುದರಿಂದ ಈ ಮುಷ್ಕರ ಅರ್ಥಹೀನವಂತೆ! ಅಂದರೆ ಚಳುವಳಿಗಳಿಲ್ಲದೇ ನಾವು ಸ್ವಾತಂತ್ರ್ಯ ಪಡೆದೆವೇ? ಅತ್ಯಾಚಾರ ವಿರೋಧಿ ಮಸೂದೆ-ಕ್ರಮಗಳನ್ನು ಕೈಗೊಳ್ಳುವಂತೆ ಚಳುವಳಿ ಒತ್ತಡ ಹೇರಿಲ್ಲವೇ?

ಪ್ರವಾ. ಪ್ರಕಾರ ಜನರ ಈ ಬವಣೆಗಳಿಗೆ ಪರಿಹಾರ ಒದಗಿಸಲು ಕರೆ ನೀಡಿರುವವರನ್ನೂ ಒಳಗೊಂಡು ಎಲ್ಲಾ ರಾಜಕೀಯ ಪಕ್ಷಗಳೂ ಕಾರಣವಾಗಿಬಿಟ್ಟಿರುವುದಾಗಿಯೂ ಅದರಿಂದ ಏನು ಪ್ರಯೋಜನವಿಲ್ಲವಂತೆ! ಇದರಿಂದಾಗಿ ದುಡಿದು ತಿನ್ನಬೇಕಾದ ಬಡ ಕುಟುಂಬಗಳು ಉಪವಾಸ ಬೀಳುವರಂತೆ. ಆದರೆ ಜನರಲ್ಲಿ ಕಷ್ಟಗಳು, ಆಕ್ರೋಶ ಹೆಚ್ಚಿದ್ದು ಆಡಳಿತದ ಎಲ್ಲಾ ಅಂಗಗಳೂ ನಿಷ್ಕ್ರಿಯವಾಗಿರುವುದರಿಂದ ಚಳುವಳಿ ಲಭ್ಯವಿರುವ ಮಾರ್ಗವೆಂದೂ, ಇದು ಮೂಲಭೂತ ಹಕ್ಕು ಎಂದು ಬೇರೆ ಹೇಳುತ್ತದೆ. ಸ್ಪಂದಿಸದ ಸರಕಾರಗಳಿರುವಾಗ ಹೋರಾಟ ನಡೆಸಬಾರದೆಂಬ ಅದ್ಭುತ ಸಲಹೆ ನೀಡುವಾಗಲೂ ಅವರ ಎಡಬಿಡಂಗಿತನ, ಕಾರ್ಪೋರೇಟ್ ಕಂಪನಿಗಳ ವಾದದಗಳನ್ನೇ ಸುತ್ತಿ ಬಳಸಿ ಹೇಳುವ ‘ಪ್ರಭುವಾಣಿ’ಯ ಎಂದಿನ ಅದರ ಕಸರತ್ತು ಅರ್ಥವಾಗದಿರುವುದೇನಲ್ಲ. ಅದೇ ರೀತಿ ಆಳುವವರ ಸೇವೆಯನ್ನು ಮುಷ್ಕರ ನಡೆದ ದಿನದಂದು ವರದಿ ಮಾಡುವಲ್ಲಿಯೂ ಪಕ್ಷಪಾತದಿಂದ ವರ್ತಿಸಿದ್ದು ಪ್ರಜಾವಾಣಿಯಂತಹ ಪತ್ರಿಕೆಗೆ ಶೋಭೆ ತರುವಂತಹುದಲ್ಲ. ಮುಖ ಪುಟದಲ್ಲಿ ‘ಜನಜೀವನ ಬಾಧಿಸದ ಮುಷ್ಕರ’ ಎಂಬ (ಬಾಧಿಸಬೇಕೆಂದು ಯಾರೂ ಕರೆ ನೀಡಿರಲಿಲ್ಲ) ತಲೆ (ಇಲ್ಲದ) ಬರಹ ಆದರೆ ಒಳ ಪುಟಗಳಲ್ಲಿ ಅಭೂತಪೂರ್ವ ಯಶಸ್ವಿಯಾದ ವಿವಿಧ ಜಿಲ್ಲೆಗಳ ವರದಿಗಳು, ಫೋಟೋಗಳು!

ವಾರ್ತೆಯಲ್ಲಿ ಕಾಣಿಸಿಕೊಂಡ ಮನಸಿನೊಳಗಿನ ಮಂಡಿಗೆ

ಹಾಗೇ ‘ಪ್ರಗತಿಪರ, ಜನಪರವೆಂದು ಹೇಳಿಕೊಳ್ಳುವ ವಾರ್ತಾಭಾರತಿ ಪತ್ರಿಕೆಯ ಸಂಪಾದಕೀಯವೂ ಸಿನಿಕತನದ ಬಳಲುತ್ತಾ ರೋಗಪೀಡಿತವಾಗಿತ್ತು . ಇಂತಹ ಮುಷ್ಕರಗಳ ಕರೆಯೇ ಒಂದು ಹರಕೆಯಂತೆ, ಶಾಸ್ತ್ರ ಮಾಡಿದಂತೆ ಎನ್ನುವ ಅವರು ಬಯಸುವ ಆದರ್ಶ ಮುಷ್ಕರಗಳು ಮನಸ್ಸಿನಲ್ಲೇ ನಡೆದು ಹೋಗಬೇಕೆಂದು ಭಾವಿಸುತ್ತಾರೆ. ಇಷ್ಟೆಲ್ಲಾ ಕಷ್ಟ ಕೋಟಲೆಗಳನ್ನು ಜನ ಅನುಭವಿಸುತ್ತಿರುವುದನ್ನು ನೋಡುವ ಕಣ್ಣುಗಳಿಲ್ಲವೇ? ಇಂತಹ ಚಳುವಳಿ ಸರಕಾರಕ್ಕೆ ಚುನಾವಣಾಪೂರ್ವ ಮುಜುಗರವುಂಟುಮಾಡುವುದಾಗಿ ‘ಕೈ’ ಎತ್ತಿ ಆರೋಪಿಸುತ್ತಾರೆ. ಹಿಂದುತ್ವದ ಕೋಮುವಾದದ ವಿರುದ್ಧ ಕತ್ತಿ ಝಳಪಿಸುವ ಯಾರೇ ಆಗಲೀ ಎರಡು ದಶಕಗಳುರುಳಿದ ಮೇಲೂ ಕೋಮುವಾದಕ್ಕೂ, ಉದಾರೀಕರಣದ ಆರ್ಥಿಕ ನೀತಿಗಳಿಗೂ ಬಿಡಿಸಲಾಗದ ನಂಟು ಇರುವುದನ್ನು ಮರೆಯಲಾದರೂ ಹೇಗೆ ಸಾಧ್ಯ. ಕೋಮುವಾದಿಗಳ ಬೆಳವಣಿಗೆಗೆ ಹದ ಭೂಮಿಕೆ ನೀಡುವ ಇಂತಹ ನೀತಿಗಳನ್ನು ಹಿಮ್ಮೆಟ್ಟಿಸದೇ ಸೆಕ್ಯುಲರಿಸಂನ್ನು ಕಾಪಾಡಬಹುದು ಎನ್ನುವುದು ಮೂರ್ಖತನವಾಗದೇ?. ಅವರಿಗೆ ಕೇಂದ್ರದ ಕಾಂಗ್ರೆಸ್ ಸರಕಾರದ ನೀತಿಗಳನ್ನು ನಿಖರವಾಗಿ, ನಿಷ್ಟುರತೆಯಿಂದ ವಿರೋಧಿಸಿದರೆ ಅದು ಬಿಜೆಪಿಗೆ ಸಹಾಯಕವಾಗುವುದು ಎಂಬ ಸರಳ ಲೆಕ್ಕಾಚಾರವಿರುವಂತೆ ಬಾಸವಾಗುತ್ತದೆ. ಅಂದರೆ ಕಾಂಗ್ರೆಸ್, ಬಿಜೆಪಿ ಪಕ್ಷಗಳು ಬಯಸುವಂತೆ ಅವರಿಬ್ಬರ ನಡುವೆಯೇ ರಾಜಕೀಯ ಧೃವೀಕರಣ ಆಗಬೇಕೆಂಬ ತಂತ್ರಕ್ಕೆ ಪೂರಕ ವಾದ ಅದಲ್ಲವೇ? ನೀತಿಗಳ ಬದಲಾವಣೆ, ನಿತ್ಯದ ಬವಣೆಗಳಿಗಾಗಿ ನಡೆಯುವ ಜನತೆಯ ಇಂತಹ ಮಹಾ ಆಂದೋಲನಗಳೇ ಪರ್ಯಾಯವನ್ನು ರೂಪಿಸುತ್ತವೆ ಎಂಬುದನ್ನು ಮರೆ ಮಾಚುವುದೇಕೆ?

ಮರೆ ಮಾಚಲಾಗದ ಸತ್ಯಗಳು

ಇನ್ನು ಕನ್ನಡ ಪ್ರಭ, ಮುಷ್ಕರವನ್ನು ‘ನೀರಸ ಪ್ರತಿಕ್ರಿಯೆ’ಯೆಂದು ಸಾರಿಸಿತು. ಮಾತ್ರವಲ್ಲ ಇದು ಹನ್ನೊಂದರಲ್ಲಿ ಇನ್ನೊಂದು ಎಂಬಂತೆ ಬಿಂಬಿಸಿ ದುಡಿಯುವ ವರ್ಗಗಳ ಹೋರಾಟಕ್ಕೆ ಯಾವುದೇ ಮಹತ್ವವನ್ನು ಕೊಡದೇ ನಿರ್ಲಕ್ಷಿಸಿತು. ಇನ್ನು ಉದಯವಾಣಿ, ಸಂಯುಕ್ತ ಕರ್ನಾಟಕ, ವಿಜಯ ಕರ್ನಾಟಕ ಪತ್ರಿಕೆಗಳ ವರದಿಗಳು ಈ ಧೋರಣೆಗಿಂತ ಭಿನ್ನವೇನಲ್ಲ. ಆದಾಗ್ಯೂ ಆಯಾ ಜಿಲ್ಲೆಗಳ ಸುದ್ದಿಗಳನ್ನು ಪ್ರಕಟಿಸುವಾಗ ಸತ್ಯವನ್ನು ಮರೆ ಮಾಚಲು ಸಾಧ್ಯವಾಗಲಿಲ್ಲ.

ಈ ವಿಷಯದಲ್ಲಿ ನಮ್ಮ ಚಾನೆಲ್‌ಗಳು ಆ ದಿನದ ಆರಂಭದಲ್ಲಿ ಜಿಲ್ಲೆಗಳಿಂದ ಉತ್ಸಾಹದಾಯಕ ವರದಿಗಳನ್ನು ನೀಡಿದವು. ಆದರೆ ಬರ ಬರುತ್ತಾ ಪಾರ್ಶ್ವ ವಾಲಿಕೆಯೂ ಕಂಡಿತು. ಅಲ್ಲಿ ನಡೆದ ಚರ್ಚೆಗಳಲ್ಲಿ ಕಾರ್ಮಿಕವರ್ಗದ ನಾಯಕರನ್ನು ಹೆಚ್ಚು ತೊಡಗಿಸಲು ಇನ್ನಷ್ಟು ಪ್ರಯತ್ನಿಸಬೇಕಿತ್ತು. ಇದು ಕೂಡ ಟಿ.ವಿ.9, ಸಮಯ, ಇವುಗಳನ್ನು ಬಿಟ್ಟರೆ ಉಳಿದಂತೆ ಅಷ್ಟಾಗಿ ಕಾಣಲಿಲ್ಲ. ಮುಖ್ಯವಾಗಿ ಮುಷ್ಕರದ ಮೊದಲೇ ಒಂದಿಷ್ಟು ಸುದ್ದಿ, ಚರ್ಚೆಗಳನ್ನು ಪ್ರಸಾರಿಸಿದ್ದಲ್ಲಿ ಜನತೆಗೆ ವಾಸ್ತವ ಸಂಗತಿಗಳನ್ನು ತಿಳಿಸಲು ಸಾಧ್ಯವಿರುತ್ತಿತ್ತು. ಆದರೆ ಇದರಿಂದ ಚಳುವಳಿಗೆ ಬೆಂಬಲ ಹೆಚ್ಚಬಹುದೆಂಬ ಕಾರಣವೂ ಇಂತಹ ಎಚ್ಚರದ ನಿರ್ಲಕ್ಷ್ಯಕ್ಕೆ ಒಂದು ಕಾರಣವಾಗಿರುವುದು ಗುಟ್ಟೇನಲ್ಲ. ಹೀಗೆ ನಮ್ಮ ಬಹುತೇಕ ಮಾಧ್ಯಮಗಳು ತಮ್ಮ ಒಡೆಯರ, ಜಾಹೀರಾತು ನೀಡುವ ಪ್ರಭುಗಳ ನಿಷ್ಠಸೇವೆಯನ್ನು ಮೆರೆದು ‘ಗ್ರಾಹಕ ವಾಣಿ’ಯನ್ನು ಅದುಮಿ ಮುಂದಿನ ಕಂಪನಿ ಜಾಹೀರಾತುಗಳನ್ನ ಖಾತ್ರಿ ಮಾಡಿಕೊಂಡವು.

ಮತ್ತೊಂದು ಗಂಭೀರ ಸಂಗತಿಯೆಂದರೆ ಇಂಗ್ಲೀಷ್ ಮತ್ತು ಹಿಂದಿ ಮಾಧ್ಯಮಗಳು ಮುಷ್ಕರದ ವಿರೋಧಿಯಾಗಿ ಬಂಡವಾಳಗಾರರ ತುತ್ತೂರಿಯನ್ನೇ ಊದುತ್ತಲೇ ಹೋದವು. ನೋಯ್ಡಾದಲ್ಲಿ ಶಾಂತ ಚಳುವಳಿ ನಡೆದಿರುವಾಗ ಸಂಘರ್ಷ ಭುಗಿಲೆದ್ದದ್ದು ಯಾಕೆ ಎಂಬ ಸತ್ಯವನ್ನು ಜನರಿಗೆ ತಿಳಿಸಲಿಲ್ಲ. ಅಲ್ಲಿ ಮಾಲೀಕ ವರ್ಗದ ಕುತಂತ್ರ, ಖಾಸಗಿ ವಾಹನ ತಡೆಯಲೆತ್ನಿಸಿದ ಕಾರ್ಮಿಕನನ್ನು ಬಲಿ ತೆಗೆದುಕೊಂಡದ್ದಾಗಲೀ, ಹರ್‍ಯಾಣದ ಅಂಬಾಲದಲ್ಲಿ ಕಾರ್ಮಿಕ ನಾಯಕನನ್ನು ಗೂಂಡಾಗಳು ಕೊಲೆ ಮಾಡಿದುದಾಗಲೀ ವಿಶದವಾಗಿ ವರದಿ ಆಗಲೇ ಇಲ್ಲ. ಮಾಲೀಕರ ಇಂತಹ ಪಿತೂರಿಗಳ ಪ್ರಕರಣಗಳನ್ನು ಬೇಕೆಂದೇ ಈ ಮಾಧ್ಯಮಗಳು ಮುಚ್ಚಿ ಹಾಕಿದ್ದು ಖಂಡನೀಯ. ಉಳಿದಂತೆ ವಿವಿಧ ರಾಜ್ಯಗಳಲ್ಲಿ ಯಶಸ್ವಿಯಾದ ಮುಷ್ಕರವನ್ನು ಪ್ರಸಾರಿಸದೇ ವಂಚಿಸಿದ್ದು ಅಕ್ಷಮ್ಯ.

ಈ ಹಿನ್ನೆಲೆಯಲ್ಲಿ ಪ್ರಜಾಪ್ರಭುತ್ವದ ನಾಲ್ಕನೆಯ ಸ್ಥಂಬ ತಾವೇ ಎಂದೂ, ಅಭಿವ್ಯಕ್ತಿ ಸ್ವಾತಂತ್ರ್ಯದ ರಕ್ಷಕರೂ ತಾವೇ ಎಂದೂ ಬಾಯಿ ಬಡಿದುಕೊಳ್ಳುವ ಮಾಧ್ಯಮಗಳು ನಿಜಕ್ಕೂ ತಾವೇನೆಂದು ಮತ್ತೆ ಸಾರಿಕೊಂಡವು.

ಜನಶಕ್ತಿ
ಕನ್ನಡ ವಾರಪತ್ರಿಕೆ

ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆ

ಮುಂದೂಡುವ ಕಸರತ್ತಿಗೆ ಸೋಲು ಪ್ರಜಾಪ್ರಭುತ್ವ ಸಂಪ್ರದಾಯಕ್ಕೆ ಗೆಲುವು

ನಿತ್ಯಾನಂದಸ್ವಾಮಿ

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ 2007 ರಲ್ಲಿ ಚುನಾವಣೆ ನಡೆದಿತ್ತು. 2013 ರ ಫೆಬ್ರವರಿ ತಿಂಗಳಾಂತ್ಯಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಒಂದನ್ನು ಹೊರತುಪಡಿಸಿ ಉಳಿದ ಎಲ್ಲ ನಗರ ಸ್ಥಳೀಯ ಸಂಸ್ಥೆಗಳ ಚುನಾಯಿತ ಅವಧಿ ಪೂರ್ಣಗೊಳ್ಳಲಿದೆ. ನಿಗದಿತ ಸಮಯದೊಳಗೆ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವುದು ಸರ್ಕಾರದ ಹೊಣೆಗಾರಿಕೆ. ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವುದು ಸರ್ಕಾರದ ಹೊಣೆಗಾರಿಕೆ. ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವುದರಿಂದ ಆಡಳಿತಾರೂಢ ಪಕ್ಷಕ್ಕೆ ಅನುಕೂಲವಾಗಲಿದೆಯೋ ಅಥವ ಅನಾನುಕೂಲವಾಗಲಿದೆಯೋ ಎಂದು ಪರಿಗಣಿಸಿ ಚುನಾವಣೆಯನ್ನು ಸಮಯಕ್ಕೆ ಸರಿಯಾಗಿ ನಡೆಸದೆ ಇರುವುದು ಪ್ರಜಾಪ್ರಭುತ್ವದ ಆರೋಗ್ಯಕ್ಕೆ ಹಾನಿಕಾರಕ ಪ್ರವೃತ್ತಿಯಾಗಿದೆ. ಬಿಜೆಪಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಗೌರವಿಸುವ ಒಂದು ರಾಜಕೀಯ ಪಕ್ಷವಲ್ಲ ಎಂಬುದು ಸ್ಥಳೀಯ ಸಂಸ್ಥೆಗಳ ಚುನಾವಣೆಯ ವಿಷಯದಲ್ಲಿ ಮತ್ತೊಮ್ಮೆ ಸಾಬೀತಾಗಿದೆ.

ರಾಜ್ಯ ಚುನಾವಣಾ ಆಯೋಗ ಕಳೆದ 6 ತಿಂಗಳಿಂದ ಚುನಾವಣಾ ಸಿದ್ಧತೆ ನಡೆಸಿದೆ. ಜಿಲ್ಲಾಧಿಕಾರಿಗಳ ಜೊತೆ ವಲಯವಾರು ಸಭೆಗಳನ್ನು ನಡೆಸಿದೆ. ಎಲ್ಲ ಮತಗಟ್ಟೆಗಳಲ್ಲಿ ಎಲೆಕ್ಟ್ರಾನಿಕ್ ಮತಯಂತ್ರಗಳ ಬಳಕೆಗೆ ಸಿದ್ಧತೆ ಮಾಡಿದೆ. ಆದರೆ ರಾಜ್ಯ ಸರ್ಕಾರಕ್ಕೆ ಮಾತ್ರ ಇದು ಬೇಡವಾಗಿತ್ತು. 2011ರ ಜನಗಣತಿ ಆಧಾರದ ಮೇಲೆ ಮೀಸಲಾತಿ ನಿಗದಿ ಪಡಿಸಿದ ಬಳಿಕ ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಬಹುದೆಂದು ರಾಜ್ಯ ಸರ್ಕಾರದ ನಿಲುವಾಗಿತ್ತು. ಮೀಸಲಾತಿ ಪಟ್ಟಿಯನ್ನು ತಯಾರಿಸಲು ಮೂರು ತಿಂಗಳಾದರೂ ಬೇಕಾಗುತ್ತದೆ. ಆಷ್ಟರೊಳಗೆ ವಿಧಾನ ಸಭಾ ಅವಧಿ ಮುಗಿಯುತ್ತದೆ. ಎರಡೂ ಚುನಾವಣೆಗಳನ್ನು ಒಟ್ಟಿಗೆ ನಡೆಸಬಹುದು ಎಂಬುದೇ ರಾಜ್ಯ ಬಿಜೆಪಿಯ ಹುನ್ನಾರವಾಗಿತ್ತು.

ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಮುಂದೂಡಲು ವಿಧಾನಸಭೆಯಲ್ಲಿ ಪ್ರತಿನಿಧಿಸುವ ಎಲ್ಲ ರಾಜಕೀಯ ಪಕ್ಷಗಳೂ ಸಾಕಷ್ಟು ಕಸರತ್ತು ಮಾಡಿದವು. ಹೇಗಾದರೂ ಮಾಡಿ ವಿಧಾನ ಸಭಾ ಚುನಾವಣೆ ಮುಗಿದ ನಂತರ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆದಿದ್ದರೆ ಏನಾದರೂ ಗಿಮಿಕ್ ಮಾಡಬಹುದಿತ್ತು ಎಂಬುದು ಕಾಂಗ್ರೆಸ್ ಸೇರಿದಂತೆ ಎಲ್ಲ ಪ್ರಮುಖ ರಾಜಕೀಯ ಪಕ್ಷಗಳ ಲೆಕ್ಕಾಚಾರವಾಗಿತ್ತು.

ಮೀಸಲಾತಿ ಪಟ್ಟಿ ನಿಗದಿಗೆ ಹೈಕೋರ್ಟ್ ಎರಡು ಸಲ ಕಾಲಾವಕಾಶ ನೀಡಿತ್ತು. ಅಂತಿಮವಾಗಿ ಡಿಸೆಂಬರ್ 20 ರಂದು ಹೈಕೋರ್ಟ್ ಎರಡು ದಿನಗಳ ಕಾಲಾವಕಾಶ ನೀಡಿತ್ತು. ಆದರೆ ರಾಜ್ಯ ಸರ್ಕಾರ ಈ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಲಿಲ್ಲ. ಹೀಗಾಗಿ ಚುನಾವಣಾ ಆಯೋಗ ನ್ಯಾಯಾಲಯನಿಂದನೆ ಪ್ರಕ್ರಿಯೆಯನ್ನು ಆರಂಭಿಸಿತ್ತು.

ಇಷ್ಟಾದ ನಂತರವೂ ಚುನಾವಣೆಯನ್ನು ಮುಂದೂಡುವ ಪ್ರಯತ್ನವನ್ನು ಸರ್ಕಾರ ಕೈಬಿಡಲಿಲ್ಲ. ಚುನಾವಣೆಯನ್ನು ಮುಂದೂಡಬೇಕು ಎಂದು ವಿಧಾನ ಮಂಡಲದ ಉಭಯ ಸದನಗಳಲ್ಲಿ ಸರ್ವಾನುಮತದ ನಿರ್ಣಯ ಕೈಗೊಳ್ಳಲಾಯಿತು. ಆದರೆ ಇದಕ್ಕೆ ಚುನಾವಣಾ ಆಯೋಗ ಮಾನ್ಯತೆ ನೀಡಲಿಲ್ಲ. ರಾಜ್ಯ ಚುನಾವಣಾ ಆಯುಕ್ತರನ್ನು ಸದನಕ್ಕೆ ಕರೆಯಿಸಿ ಛೀಮಾರಿ ಹಾಕುವ ಪ್ರಯತ್ನವನ್ನೂ ಮಾಡಲಾಯಿತು. ಆದರೆ ರಾಜ್ಯ ಚುನಾವಣಾ ಆಯುಕ್ತ ಅದಕ್ಕೆ ಸೊಪ್ಪು ಹಾಕಲಿಲ್ಲ. ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣಾ ದಿನಾಂಕ ನಿಗದಿ ಸಂಬಂಧ ಸರ್ಕಾರದ ಸಮ್ಮತಿ ಪಡೆಯುವುದನ್ನು ಕಡ್ಡಾಯಗೊಳಿಸಿ ವಿಧಾನಮಂಡಲ ತರಾತುರಿಯಲ್ಲಿ "ಕರ್ನಾಟಕ ಪುರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಮಸೂದೆಯನ್ನು ಅಂಗೀಕರಿಸಲಾಯಿತು. ಆದರೆ ಅದಕ್ಕೆ ಅಂಕಿತ ಹಾಕಲು ರಾಜ್ಯಪಾಲ ಎಚ್.ಆರ್. ಭಾರದ್ವಾಜ್ ನಿರಾಕರಿಸಿದರು. ಈ ನಡುವೆ ಚುನಾವಣೆಯನ್ನು ಮುಂದೂಡಲು ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ದಾಖಲು ಮಾಡಲಾಯಿತು. ಆದರೆ ಚುನಾವಣೆಯನ್ನು ಮುಂದೂಡಲು ಹೈಕೋರ್ಟ್ ನಿರಾಕರಿಸಿತು. ಈ ಅರ್ಜಿಗಳು ಸುಪ್ರೀಂಕೋರ್ಟ್ ಮೆಟ್ಟಿಲನ್ನು ಏರಿದವು. ಅಲ್ಲಿಯೂ ಸರ್ಕಾರಕ್ಕೆ ಹಿನ್ನಡೆಯಾಯಿತು. ಎಲ್ಲಾ ಅಡೆತಡೆಗಳನ್ನು ಸುಪ್ರೀಂಕೋರ್ಟ್‌ನಲ್ಲಿ ಪರಿಹರಿಸಿಕೊಂಡ ರಾಜ್ಯಚುನಾವಣಾ ಆಯೋಗವು ಫೆಬ್ರವರಿ 14 ರಂದು ರಾಜ್ಯದ 7 ಮಹಾನಗರ ಪಾಲಿಕೆಗಳು, 43 ನಗರ ಸಭೆಗಳು, 93 ಪುರಸಭೆಗಳು ಮತ್ತು 65 ಪಟ್ಟಣ ಪಂಚಾಯತಿಗಳ ಚುನಾವಣಾ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿತು. 2001ರ ಜನಗಣತಿ ಪ್ರಕಾರ ಚುನಾವಣೆಯನ್ನು ನಡೆಸಬೇಕೆಂಬ ಸುಪ್ರೀಂಕೋರ್ಟ್‌ನಲ್ಲಿ ಫೆಬ್ರವರಿ 1 ರ ಆದೇಶವನ್ನು ಆಕ್ಷೇಪಿಸಿ ಸಲ್ಲಿಸಲಾಗಿದ್ದ ಎರಡು ರಿಟ್ ಅರ್ಜಿಗಳನ್ನು ಫೆಬ್ರವರಿ 19 ರಂದು ಸುಪ್ರೀಂ ಕೋರ್ಟ್ ವಜಾಗೊಳಿಸುವ ಮೂಲಕ ಈಗಾಗಲೇ ಚುನಾವಣಾ ಆಯೋಗವು ಹೊರಡಿಸಿರುವ ಅಧಿಸೂಚನೆಗೆ ತಡೆ ನೀಡಲು ನಿರಾಕರಿಸಿತು. ಇದರೊಂದಿಗೆ ಚುನಾವಣಾ ಆಯೋಗದ ಹಾದಿ ಸುಗಮವಾಗಿದೆ; ರಾಜ್ಯ ಸರ್ಕಾರ ತೀವ್ರ ಮುಖಭಂಗಕ್ಕೆ ಒಳಗಾಗಿದೆ.



ಎಡರಂಗ ಸರ್ಕಾರಗಳ ದಾಖಲೆ :

ಆಧುನಿಕ ಭಾರತದ ಇತಿಹಾಸದಲ್ಲಿ, ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಕಾಲಕಾಲಕ್ಕೆ ತಪ್ಪದೆ ನಡೆಸುತ್ತಾ ದಾಖಲೆ ನಿರ್ಮಿಸಿರುವುದು ಪಶ್ಚಿಮ ಬಂಗಾಳ, ತ್ರಿಪುರ ಮತ್ತು ಕೇರಳದ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರಗಳು. ಚುನಾವಣೆಗಳಲ್ಲಿ ಎದ್ದೇಳ ಬಹುದಾದ ಆಡಳಿತ ವಿರೋಧಿ ಅಲೆಯನ್ನು ಲೆಕ್ಕಿಸದೆ, ಅವಧಿ ಮುಗಿಯುತ್ತಿದ್ದಂತೆ ತಪ್ಪದೆ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ನಡೆಸುತ್ತಾ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರಗಳು ಪ್ರಜಾಪ್ರಭುತ್ವ ಮೌಲ್ಯಗಳಿಗೆ ತಮ್ಮ ಬದ್ಧತೆಯನ್ನು ದಾಖಲಿಸುತ್ತಾ ಬಂದಿವೆ. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಜೀವಂತವಾಗಿಡಲು ಮತ್ತು ಆರೋಗ್ಯಕರವಾಗಿ ಮುನ್ನಡೆಸಲು ಕಾಲಕಾಲಕ್ಕೆ ಚುನಾವಣೆಗಳನ್ನು ನಡೆಸುವುದು ಅತ್ಯಗತ್ಯವಾಗಿದೆ. ಸಿಪಿಐ(ಎಂ) ಈ ವಿಷಯದಲ್ಲಿ ದೇಶದ ಇತರ ಎಲ್ಲಾ ರಾಜಕೀಯ ಪಕ್ಷಗಳಿಗೆ ಮಾದರಿಯಾಗಿದೆ. ದೇಶದಲ್ಲೇ ಮೊದಲ ಬಾರಿಗೆ ಮೂರು ಹಂತಗಳ ಪಂಚಾಯತ್ ಪದ್ಧತಿಯನ್ನು ಅನುಷ್ಠಾನಗೊಳಿಸಿದ ಕೀರ್ತಿಯೂ ಪಶ್ಚಿಮ ಬಂಗಾಳದ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರಕ್ಕೆ ಸಲ್ಲುತ್ತದೆ. ಆದ್ದರಿಂದಲೇ ಎಡರಂಗ ಸರ್ಕಾರ ಜನರ ನಡುವೆ ಆಳವಾಗಿ ಬೇರೂರಲು ಸಾಧ್ಯವಾಗಿತ್ತು. ಎಲ್ಲ ಪ್ರಜಾಪ್ರಭುತ್ವ ವಿರೋಧಿ ಸರ್ವಾಧಿಕಾರಿ ಶಕ್ತಿಗಳು ನಡೆಸಿದ ಪಿತೂರಿಯಿಂದಾಗಿ ಮಾತ್ರ ಎಡರಂಗಕ್ಕೆ ಕಳೆದೆರಡು ಚುನಾವಣೆಗಳಲ್ಲಿ ಸೋಲು ಉಂಟಾಯಿತು. ಈ ಸೋಲು ತಾತ್ಕಾಲಿಕ. ಇಲ್ಲಿ ಬೇರೂರಿರುವ ಎಡ–ಪ್ರಜಾಪ್ರಭುತ್ವವಾದಿ ಶಕ್ತಿಗಳು ತಾತ್ಕಾಲಿಕ ಹಿನ್ನಡೆಯಿಂದ ಹೊರಬಂದು ಮತ್ತೆ ಪ್ರಜಾಪ್ರಭುತ್ವದ ಮುನ್ನಡೆಯನ್ನು ಇನ್ನೂ ಎತ್ತರಕ್ಕೆ ಕೊಂಡೊಯ್ಯದೆ ಇರಲಾರವು.

ರಾಜ್ಯದ ಮತದಾರರ ಮುಂದೆ ಆಯ್ಕೆಯ ಕೊರತೆ :

ರಾಜ್ಯದಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳ ಘೋಷಣೆಯಂತೂ ಆಗಿದೆ. ಅದರ ನಂತರ ವಿಧಾನಸಭಾ ಚುನಾವಣೆಯೂ ಬರಲಿದೆ. ಆದರೆ ಮತದಾರರು ಗೊಂದಲದಲ್ಲಿದ್ದಾರೆ. ಅವರ ಎದುರು ಆಯ್ಕೆ ಎಂಬುದೇ ಇಲ್ಲದಂತಾಗಿದೆ. ಎರಡು ಪ್ರಮುಖ ರಾಜಕೀಯ ಪಕ್ಷಗಳಲ್ಲಿ ಕಾಂಗ್ರೆಸನ್ನು ದೆಹಲಿ ಗಾದಿಯ ಮೇಲೆ ಕುಳ್ಳಿರಿಸಿದ ಮತದಾರರು ಪಶ್ಚಾತ್ತಾಪ ಪಡುತ್ತಿದ್ದಾರೆ. ಕಾಂಗ್ರೆಸ್‌ಗಿಂತ ತಾನು ಭಿನ್ನ ಎಂದು ಹೇಳಿಕೊಳ್ಳುತ್ತಿದ್ದ ಬಿಜೆಪಿಗೆ ರಾಜ್ಯದಲ್ಲಿ ಮಣೆ ಹಾಕಿದವರು ಅದರ ಸಹವಾಸದಿಂದ ಮುಕ್ತರಾಗಲು ಚುನಾವಣೆಯ ದಾರಿಯನ್ನೇ ಕಾಯುತ್ತಿದ್ದಾರೆ. ಆದರೆ ಈ ಎರಡೂ ಪಕ್ಷಗಳನ್ನೂ ತಿರಸ್ಕರಿಸಲು ಸಜ್ಜಾಗುತ್ತಿರುವ ಮತದಾರರಿಗೆ ಮೂರನೇ ಪರ್ಯಾಯ ಕಾಣಸಿಗುತ್ತಿಲ್ಲ. ಬಿಜೆಪಿಯಿಂದ ಸಿಡಿದು ಬಂದ ಕೆಜೆಪಿಯಾಗಲಿ, ಬಿ.ಎಸ್.ಆರ್. ಪಕ್ಷವಾಗಲಿ ಬಿಜೆಪಿಯಿಂದ ತಾವು ಭಿನ್ನ ಎಂದು ಹೇಳಿಕೊಂಡರೂ, ಮತದಾರರು ಅವುಗಳನ್ನು ನಂಬುವ ಸ್ಥಿತಿ ಇಲ್ಲ. ಹಾಗಾದರೆ ಮುಂದೇನು? ಮತದಾರರು ಮತದಾನದ ಕರ್ತವ್ಯದಿಂದ ಹಿಂದೆ ಸರಿಯಲು ಸಾಧ್ಯವೆ?

ಹೋರಾಟಗಾರರನ್ನು ಗೆಲ್ಲಿಸಬೇಕು :

ಸ್ಥಳೀಯ ಸಂಸ್ಥೆಗಳು ಭ್ರಷ್ಟಾಚಾರದ ಕೂಪಗಳಾಗಿವೆ. ಇಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಎಂಬ ವ್ಯತ್ಯಾಸವಿಲ್ಲ. ಭ್ರಷ್ಟಾಚಾರ ಎಂಬ ಒಂದೇ

ಪುಟ 14ಕ್ಕೆ



ದಲಿತರ ಹಕ್ಕುಗಳಿಗಾಗಿ ಸಿಪಿಐ(ಎಂ) ಬೃಹತ್ ಪ್ರತಿಭಟನೆ

ಉಡುಪಿ ಸೇರಿದಂತೆ ರಾಜ್ಯದ ವಿವಿದೆಡೆ ನಡೆಯುತ್ತಿರುವ ಮಡೆಸ್ನಾನ - ಪಂಕ್ತಿಬೇಧ ನಿಷೇದಿಸಲು ಒತ್ತಾಯಿಸಿ ಹಾಗು ಎಸ್ ಸಿ ಪಿ ಸಮರ್ಪಕ ಜಾರಿಗೆ ಅಗತ್ಯ ಕಾನೂನು ರೂಪಿಸಲು ಆಗ್ರಹಿಸಿ ಸಿಪಿಐ(ಎಂ) ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಇತ್ತೀಚಿಗೆ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಅನಾಗರಿಕ ಪಂಕ್ತಿಬೇಧ -ಮಡೆಸ್ನಾನಕ್ಕೆ ತಡೆ ಹಾಕಬೇಕೆಂದು, ಎಸ್.ಸಿ/ಎಸ್.ಟಿ ಜನಸಂಖ್ಯೆಗೆ ಅನುಗುಣವಾಗಿ ಬಜೆಟ್‌ನಲ್ಲಿ ಹಣ ಹೆಚ್ಚಿಸಿ ಎಸ್.ಸಿ.ಪಿ ಜಾರಿಗೆ ಆಂಧ್ರಪ್ರದೇಶದ ಮಾದರಿ ಶಾಸನ ತರಬೇಕೆಂದು,

ದೇಶದಲ್ಲಿ 1978 ರಿಂದ ದಲಿತರ ಅಭಿವೃದ್ಧಿಗಾಗಿ ಸರ್ಕಾರ ವಿಶೇಷ ಘಟಕ ಯೋಜನೆ ಮೂಲಕ ಅತಿ ಕಡಿಮೆ ಹಣ ನೀಡುತ್ತಿರುವುದರಿಂದ ದಲಿತರ ಅಭಿವೃದ್ಧಿ ನಿರೀಕ್ಷಿಸಿದಷ್ಟು ಸಾಧಿಸಲು ಸಾಧ್ಯವಾಗಿಲ್ಲ. 2011-12 ರಲ್ಲಿ ಕೇಂದ್ರ ಸರ್ಕಾರ 3,40,225-00 ಕೋಟಿ, ಬಜೆಟ್‌ನಲ್ಲಿ 30,551 ಕೋಟಿ ಮಾತ್ರ ಎಸ್.ಸಿ.-ಎಸ್.ಟಿ. ಯೋಜನೆ ಹಂಚಿಕೆ ಮಾಡಿದೆ. (ಅಂದಿನ ಜನಸಂಖ್ಯೆ ಶೇ.16.6) ಜನ ಸಂಖ್ಯೆ ಅನುಗುಣವಾಗಿ ಇನ್ನೂ ಸುಮಾರು 24 ಸಾವಿರ ಕೋಟಿ ಹಣ ನೀಡಬೇಕಿತ್ತು. ಅಲ್ಲದೆ ವಿಶೇಷ ಘಟಕ ಯೋಜನೆ (ಎಸ್.ಸಿ.ಪಿ) ಹಣವನ್ನು ಕಾಮನ್‌ವೆಲ್ತ್ ಕ್ರೀಡಾ ಕೂಟಕ್ಕೆ 74.35 ಕೋಟಿ ಹಣವನ್ನು ದುರ್ಬಳಕೆ ಮಾಡಿ ದಲಿತರಿಗೆ ವಂಚನೆ ಮಾಡಿದೆ. ರಾಜ್ಯ ಬಿಜೆಪಿ ಸರ್ಕಾರ 1994-95 ರಿಂದ 2008-09ರವರೆಗೆ ಬಜೆಟ್‌ನಲ್ಲಿ 13,23,164.08 ಲಕ್ಷ ರೂ. ನಿಗದಿಪಡಿಸಿತ್ತು. ಆದರೆ 09,42,328.44 ಲಕ್ಷ ರೂ.ಮಾತ್ರ ಖರ್ಚು ಮಾಡಿದೆ. ಬಾಕಿ 3,80,835 ಲಕ್ಷ ರೂ.ಗಳನ್ನು ಖರ್ಚು ಮಾಡಲೇ ಇಲ್ಲ.

ಬಿಜೆಪಿ ಸರ್ಕಾರ ದಲಿತ ಅಭಿವೃದ್ಧಿಗಾಗಿ ಸಮಾಜ ಕಲ್ಯಾಣ ಇಲಾಖೆಗೆ ಪ್ರತ್ಯೇಕವಾಗಿ ಬಜೆಟ್ ಮಂಡಿಸುವುದಾಗಿ ಹೇಳುತ್ತಿರುವ ಹೇಳಿಕೆ ಸರ್ವಸಮ್ಮತವಾದುದಲ್ಲ. ಇದರ ಬದಲು ಆಂಧ್ರಪ್ರದೇಶದ ಮಾದರಿಯಲ್ಲಿ 'ಶಾಸನ' ತಂದು ವಿಶೇಷ ಘಟಕ ಯೋಜನೆಯಲ್ಲಿ ಹಣವನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸಿದ್ದಲ್ಲಿ ಮಾತ್ರವೇ ಒಂದಿಷ್ಟು ಬೆಳವಣಿಗೆಯನ್ನು ನಿರೀಕ್ಷಿಸಬಹುದಾಗಿದೆ.

ದಲಿತರಿಗೆ ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಜಾರಿಗೊಳಿಸಿ, ಬ್ಯಾಕ್‌ಲಾಗ್ ಹುದ್ದೆ ಭರ್ತಿಯಾಗಲಿ.

ಉದಾರೀಕರಣ ಖಾಸಗೀಕರಣ ನೀತಿಗಳು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮೀಸಲಾತಿ ಸೌಲಭ್ಯಗಳನ್ನು ನುಂಗಿಹಾಕಿದೆ. ಹೊರಗುತ್ತಿದೆ, ಗುತ್ತಿಗೆ ಆಧಾರದಲ್ಲಿ ನೇಮಕಾತಿ, ಖಾಸಗೀಕರಣಕ್ಕೆ ಮುಂದಾಗಿರುವುದರಿಂದ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುತ್ತಿಲ್ಲ. ಮೀಸಲಾತಿ ಸೌಲಭ್ಯದಿಂದ, ದಲಿತರನ್ನು ವಂಚಿಸಲಾಗುತ್ತಿದೆ.

ಮೀಸಲಾತಿಯಲ್ಲಿ ಈ ಮೇಲಿನ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡುವಲ್ಲಿ ವಂಚಿಸಲಾಗಿದೆ. ಮೀಸಲಾತಿಗೆ ಮಾರಕವಾಗಿರುವ ಹೊರಗುತ್ತಿಗೆ, ಗುತ್ತಿಗೆ ಪದ್ಧತಿಗೆ ಕಡಿವಾಣ ಹಾಕದಿದ್ದಲ್ಲಿ ಮೀಸಲಾತಿ ಕೇವಲ ಮರೀಚಿಕೆಯಾಗಲಿದೆ. ಸರ್ಕಾರಿ ವಲಯ ಕ್ಷೀಣಿಸುತ್ತಿರುವ ಈ ಸಂದರ್ಭದಲ್ಲಿ ಖಾಸಗೀ ಕ್ಷೇತ್ರಕ್ಕೆ ಮೀಸಲಾತಿ ವಿಸ್ತರಿಸುವುದು ಸಾಮಾಜಿಕ ನ್ಯಾಯವನ್ನು ತಂದುಕೊಡಬಲ್ಲುದಾಗಿದೆ. ಮೀಸಲಾತಿ ಸೌಲಭ್ಯಗಳನ್ನು ಖಾಸಗೀ ಕ್ಷೇತ್ರಕ್ಕೆ ವಿಸ್ತರಿಸಬೇಕು. ಎಲ್ಲಾ ದಲಿತರಿಗೂ ಉದ್ಯೋಗ ಸಿಗಬೇಕೆಂದು, ಭೂಹೀನ ದಲಿತರಿಗೆ ತಲಾ ಎರಡು ಎಕರೆ ಭೂಮಿಯನ್ನು ನೀಡಬೇಕೆಂದು, ದಲಿತಜ ಮೇಲಿನ ಜಾತಿ ದೌರ್ಜನ್ಯ ಖಂಡಿಸಿ,

ದೇಶದಲ್ಲಿ ದಲಿತರ ಮೇಲೆ ಜಾತಿ ದೌರ್ಜನ್ಯ ತೀವ್ರಗೊಂಡು ಮುಂದುವರೆಯುತ್ತಲೇ ಇದೆ. ಪ್ರತಿ 02 ದಿನದಲ್ಲಿ ದಲಿತರ 03 ಕೊಲೆಗಳು ಮತ್ತು 20 ನಿಮಿಷಕ್ಕೊಂದು ಜಾತಿ ದೌರ್ಜನ್ಯಗಳು. 1/2 ಗಂಟೆಗೊಮ್ಮೆ ದಲಿತಿ ಮಹಿಳೆಯರ ಮೇಲೆ ಅತ್ಯಾಚಾರ ಪ್ರಕರಣಗಳು ದಾಖಲಾಗುತ್ತಿವೆ. ರಾಷ್ಟ್ರೀಯ ಅಪರಾಧ ದಾಖಲಾತಿ ಕಚೇರಿ (ಎನ್.ಸಿ.ಆರ್.ಬಿ) ವರದಿ ಪ್ರಕಾರ 2010 ರಲ್ಲಿ 1,349 ಅತ್ಯಾಚಾರ ಪ್ರಕರಣಗಳು 2011 ರಲ್ಲಿ 1557 ಅತ್ಯಾಚಾರ ಮೊಕದ್ದಮೆಗಳು ನೊಂದಾಯಿಸಲ್ಪಟ್ಟಿವೆ. ಒಂದೇ ವರ್ಷದಲ್ಲಿ ಶೇ.15.4 ರಲ್ಲಿ ಅತ್ಯಾಚಾರ ಪ್ರಕರಣಗಳು ಹೆಚ್ಚಾಗಿರುವುದು ಆತಂಕಕಾರಿಯಾದ ವಿಷಯವಾಗಿದೆ.

ರಾಜ್ಯದಲ್ಲಿ ದಲಿತರ ಮೇಲೆ ದೌರ್ಜನ್ಯಗಳು ದಿನದಿಂದ ದಿನಕ್ಕೆ ತೀವ್ರಗೊಳ್ಳುತ್ತಲೇ ಇದೆ. 2008 ರಲ್ಲಿ 1494, 2009 ರಲ್ಲಿ 1441, 2010 ರಲ್ಲಿ 1632 ಪ್ರಕರಣಗಳು ದಾಖಲಾಗಿವೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರದ ಕಾಲಾವಧಿಯಲ್ಲಿ ದೌರ್ಜನ್ಯಗಳು ತೀವ್ರಗೊಂಡಿರುವುದು ಆತಂಕದ ವಿಷಯವಾಗಿದೆ. ದಲಿತರ ಮೇಲಿನ ದೌರ್ಜನ್ಯ ತಡೆಗಟ್ಟುವಲ್ಲಿ ಸರ್ಕಾರ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಭೂಹೀನ ದಲಿತರಿಗೆ ಭೂಮಿ ನೀಡದ ಹೊರತು ದಲಿತರ ಅಭಿವೃದ್ಧಿಯ ಮಾತು ಕೇವಲ ಬೂಟಾಟಿಕೆಯಾಗುತ್ತದೆ.

ದೇವದಾಸಿ ಮಹಿಳೆಯರ ಸಮಸ್ಯೆ ಬಗೆಹರಿಸಬೇಕೆಂದು ಒತ್ತಾಯಿಸಿ ಸಿಪಿಐ(ಎಂ) ನೇತೃತ್ವದಲ್ಲಿ ಸಾವಿರಾರು ಜನ ಸರ್ಕಾರದ ದಲಿತರ ವಿರೋಧಿ ನೀತಿಯನ್ನು ಖಂಡಿಸಿ ಪ್ರತಿಭಟನೆ ನಡೆಸಿದರು.

ರಾಜ್ಯದ ವಿವಿದೆಡೆಗಳಿಂದ ಆಗಮಿಸಿದ ಸಾವಿರಾರು ಕಾರ್ಯಕರ್ತರು ನಗರದ ರೈಲ್ವೆ ನಿಲ್ದಾಣದಿಂದ ಫ್ರೀಡಂ ಪಾರ್ಕ್‌ವರೆಗೆ ಮೆರವಣಿಗೆ ನಡೆಸಿ ಸರ್ಕಾರದ ದಲಿತ ವಿರೋಧಿ ನೀತಿಗಳ ವಿರುದ್ಧ ಘೋಷಣೆ ಕೂಗಿದರು. ನಂತರ ನಡೆದ ಬಹಿರಂಗ ಸಭೆಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ಮಾತನಾಡಿ ಉಡುಪಿ ಶ್ರೀಕೃಷ್ಣ ಮಠ ಹಾಗೂ ಹಲವು ದೇವಸ್ಥಾನಗಳಲ್ಲಿ ನಡೆಯುತ್ತಿರುವ ಪಂಕ್ತಿಭೇದ ಹಾಗೂ ಮಡೆಸ್ನಾನ ಪದ್ಧತಿಯನ್ನು ಸಂಪೂರ್ಣವಾಗಿ ನಿಷೇಧಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು. ಉಡುಪಿಯಲ್ಲಿ ಪಂಕ್ತಿಭೇದ, ಮಡೆಸ್ನಾನದ ವಿರುದ್ಧ ಹೋರಾಟ ನಡೆಸಿದ ಸಿಪಿಐ(ಎಂ)ನ ಮುಖಂಡರು ಹಾಗೂ ಕಾರ್ಯಕರ್ತರ ಮೇಲೆ ನಡೆಸಿರುವ ಪೊಲೀಸರ ದೌರ್ಜನ್ಯವನ್ನು ತೀವ್ರವಾಗಿ ಖಂಡಿಸಿದರು. ಅವರ ಮೇಲೆ ಹಾಕಿರುವ ಮೊಕದ್ದಮೆಗಳನ್ನು ವಾಪಸ್ ಪಡೆಯಬೇಕೆಂದು ಆಗ್ರಹಪಡಿಸಿದರು. ರಾಜ್ಯದಲ್ಲಿ ದಲಿತರ ಮೇಲಿನ ದೌರ್ಜನ್ಯ ದಿನೇ ದಿನೇ ಹೆಚ್ಚುತ್ತಿದೆ. ಅತ್ಯಂತ ಕಡುಬಡತನದಲ್ಲಿ ದಲಿತರು ಬದುಕು ನಡೆಸುತ್ತಿದ್ದರೂ ಬಿಜೆಪಿ ಸರ್ಕಾರ ದಲಿತರ ಅಭಿವೃದ್ಧಿಯ ಬಗ್ಗೆ ಕೇವಲ ಮೊಸಳೆ ಕಣ್ಣೀರು ಸುರಿಸುತ್ತಿದೆ ಎಂದು ವ್ಯಂಗ್ಯವಾಡಿದರು.

ಬಹುತೇಕ ದಲಿತರಿಗೆ ಮನೆ ನಿವೇಶನ ಸಮಸ್ಯೆ ಗಂಭೀರವಾಗಿದೆ. ಜೀವನ ನಿರ್ವಹಣೆಗೆ ತುಂಡು ಭೂಮಿಯೂ ಇವರ ಬಳಿಯಿಲ್ಲ. ಪರಿಸ್ಥಿತಿ ಹೀಗಿದ್ದೂ ಕೂಡ ದಲಿತರ ಅಭಿವೃದ್ಧಿಗಾಗಿ ಮೀಸಲಿಟ್ಟ ಹಣವನ್ನು ಖರ್ಚು ಮಾಡದೇ ಇತರೆ ಉದ್ದೇಶಗಳಿಗಾಗಿ ಆ ಹಣವನ್ನು ದುರ್ಬಳಕೆ ಮಾಡಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಬಿಜೆಪಿ ಆಂತರಿಕ ಕಚ್ಚಾಟದಲ್ಲಿ ಮುಳುಗಿ ರಾಜ್ಯದ ದಲಿತರ ಹಿತಾಸಕ್ತಿಯನ್ನು ಸಂಪೂರ್ಣವಾಗಿ ಕಡೆಗಣಿಸಿದೆ ಎಂದು ಸರ್ಕಾರವನ್ನು ದೂರಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಮಾರುತಿ ಮಾನ್ಪಡೆ ಮಾತನಾಡಿ ಮಡೆಸ್ನಾನ, ಪಂಕ್ತಿಭೇದದಂತಹ ಅನಿಷ್ಟ ಆಚರಣೆಗಳಿಗೆ ಸರ್ಕಾರ ಕಡಿವಾಣ ಹಾಕುವ ಬದಲು ಇಂತಹವುಗಳನ್ನು ಬೆಳೆಸಲು ಕುಮ್ಮಕ್ಕು ನೀಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ರಾಜ್ಯದಲ್ಲಿ ಅಸ್ಪೃಶ್ಯತೆ ಆಚರಣೆಗಳು ಎಗ್ಗಿಲ್ಲದೆ ನಡೆಯುತ್ತಿವೆ. ದಲಿತರ ಸಾಮಾಜಿಕ ಬಹಿಷ್ಕಾರ ಪ್ರಕರಣಗಳು ಸಾಮಾನ್ಯ ಸಂಗತಿಯಂತೆ ವರದಿಯಾಗುತ್ತಿವೆ. ಕ್ಷೌರ ಮಾಡಿಸಿಕೊಳ್ಳಲು ದೂರದ ಪಟ್ಟಣಗಳಿಗೆ ಬರಬೇಕಾದ ಸ್ಥಿತಿ ಈಗಲೂ ಮುಂದುವರೆದಿದೆ. ಆದರೆ ಸರ್ಕಾರ ಇದಾವುದರ ಬಗ್ಗೆಯೂ ಕನಿಷ್ಟ ಜ್ಞಾನವಿಲ್ಲದಂತೆ ವರ್ತಿಸುತ್ತಿದೆ ಎಂದು ದೂರಿದರು. ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯರಲ್ಲೊಬ್ಬರಾದ ವಿ.ಜೆ.ಕೆ. ನಾಯರ್ ವೇದಿಕೆಯಲ್ಲಿದ್ದು ಮಾತನಾಡಿದರು. ಈ ಸಂದರ್ಭದಲ್ಲಿ ಪ್ರತಿಭಟನಾ ಸ್ಥಳಕ್ಕೆ ಸರ್ಕಾರದ ಪರವಾಗಿ ಭೇಟಿ ನೀಡಿದ ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಇ.ವೆಂಕಟಯ್ಯ ಮನವಿ ಪತ್ರ ಸ್ವೀಕರಿಸಿ ಬೇಡಿಕೆಗಳ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಬಗೆಹರಿಸುವ ಭರವಸೆ ನೀಡಿದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಯು. ಬಸವರಾಜು ಅಧ್ಯಕ್ಷತೆ ವಹಿಸಿದ್ದರು. ಗೋಪಾಲಕೃಷ್ಣ ಅರಳಹಳ್ಳಿ, ನಾಗರಾಜು, ಅನಂತ್‌ನಾಯಕ್, ರಾಜಶೇಖರ ಮೂರ್ತಿ, ಮಾಳವ್ವ, ಕಾಗೆಕಲ್ಲವ್ವ, ಆರ್.ಕೃಷ್ಣ ಮುಂತಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಹೈದ್ರಾಬಾದ್ ಸರಣಿ ಬಾಂಬ್ ಸ್ಫೋಟ - ಸಿ.ಪಿ.ಐ.(ಎಂ) ಖಂಡನೆ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯು ನಿನ್ನೆ ಸಂಜೆ (21.2.2013) ಹೈದ್ರಾಬಾದ್‌ನಲ್ಲಿ 20ಜನರ ದುರ್ಮರಣಕ್ಕೆ ಹಾಗೂ ಹಲವಾರು ಜನರ ತೀವ್ರ ನೋವಿಗೆ ಕಾರಣವಾದ ಉಗ್ರವಾದಿಗಳ ಸರಣಿ ಬಾಂಬ್ ಸ್ಫೋಟದ ದುಷ್ಕೃತ್ಯವನ್ನು ಬಲವಾಗಿ ಖಂಡಿಸುತ್ತದೆ.

ಈ ಘಟನೆಯಲ್ಲಿ ಸಾವಿಗೀಡಾದವರ ಮತ್ತು ಹಾನಿಗೀಡಾದವರಿಗೆ ಸಿ.ಪಿ.ಐ.(ಎಂ) ತನ್ನ ಹೃದಯಪೂರ್ವಕ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಸದರಿ ದುಷ್ಕೃತ್ಯವನ್ನು ತೀವ್ರವಾಗಿ ತನಿಖೆಗೆ ಒಳಪಡಿಸಲು ಕೇಂದ್ರ ಹಾಗೂ ಆಂಧ್ರಪ್ರದೇಶ ಸರ್ಕಾರಗಳನ್ನು ಸಿ.ಪಿ.ಐ.(ಎಂ) ಒತ್ತಾಯಿಸುತ್ತದೆ. ಹಿಂದಿನ ಅನುಭವದಂತೆ ಯಾವುದೇ ಪೂರ್ವಗ್ರಹ ಪೀಡಿತರಾಗದೇ ಅತ್ಯಂತ ಎಚ್ಚರಿಕೆಯ ಹಾಗೂ ವೈಜ್ಞಾನಿಕವಾದ ತನಿಖೆಯನ್ನು ನಡೆಸಿ ದುಷ್ಕೃತ್ಯದಲ್ಲಿ ತೊಡಗಿದ ಉಗ್ರವಾದಿಗಳನ್ನು ಶಿಕ್ಷಿಸಲು ಕ್ರಮವಹಿಸಬೇಕೆಂದು ಒತ್ತಾಯಿಸುತ್ತದೆ.

ಕಾರ್ಮಿಕ ವರ್ಗ ಎಚ್ಚರಿಕೆ ನೀಡಿದೆ ಸರಕಾರ ಗಮನಿಸುತ್ತದೆಯೇ?

ಮುಂದುವರೆಯುತ್ತಿರುವ ಜಾಗತಿಕ ಬಿಕ್ಕಟ್ಟಿಗೆ ಭಾರತ ಹೇಗೆ ಸ್ಪಂದಿಸುತ್ತದೆ ಎಂಬುದನ್ನು ಮುಂಬರುವ ಬಜೆಟ್ ಬಿಂಬಿಸಲಿದೆ. ಜಾಗತಿಕ ಆರ್ಥಿಕವು ಬಿಕ್ಕಟ್ಟುಗಳ ನಾಲ್ಕು ಘಟ್ಟಗಳ ನಂತರ ಅವನ್ನು ಆರಂಭಿಸಿದ ಚಕ್ರದ ಮೂಲಕ್ಕೆ ಮತ್ತೆ ತಲುಪುತ್ತಿದೆ. ಈ ಹಿನ್ನೆಲೆಯಲ್ಲಿ, ನಮ್ಮ ಆಂತರಿಕ ಬೇಡಿಕೆಯನ್ನು ಬೃಹತ್ ಪ್ರಮಾಣದಲ್ಲಿ ವಿಸ್ತರಿಸಲು ಗಮನ ಕೇಂದ್ರೀಕರಿಸುವ ಮೂಲಕವಷ್ಟೇ ಭಾರತೀಯ ಆರ್ಥಿಕತೆಯನ್ನು ಮತ್ತೆ ಜ್ವಲಿಸುವಂತೆ ಮಾಡಲು ಸಾಧ್ಯ. ಇಲ್ಲವಾದರೆ, ಜನತೆಯ ಕ್ರೋಧವನ್ನು ಮತ್ತು ಭವಿಷ್ಯದಲ್ಲಿ ಜನಗಳ ಇನ್ನೂ ಬಲಿಷ್ಠ ಹೋರಾಟಗಳನ್ನು ಎದುರಿಸಬೇಕಾಗಬಹುದು. ಕಾರ್ಮಿಕ ವರ್ಗದ 48 ಗಂಟೆಗಳ ಐತಿಹಾಸಿಕ ಸಾರ್ವತ್ರಿಕ ಮುಷ್ಕರ ಭಾರತದ ಆಳುವ ವರ್ಗಗಳಿಗೆ ಈ ಎಚ್ಚರಿಕೆಯನ್ನು ನೀಡಿದೆ.

ಸೀತಾರಾಂ ಯೆಚೂರಿ

ನಾವು ಈ ಸಂಚಿಕೆಯನ್ನು ಮುದ್ರಣಕ್ಕೆ ಕಳಿಸುತ್ತಿರುವ ವೇಳೆಯಲ್ಲಿ ಭಾರತೀಯ ಕಾರ್ಮಿಕ ವರ್ಗದ ಸಾರ್ವತ್ರಿಕ ಮುಷ್ಕರ ಆರಂಭವಾಗಿದೆ. ಇದು ಹಲವು ವಿಧಗಳಲ್ಲಿ ಚಾರಿತ್ರಿಕವಾದದ್ದು. ಸ್ವತಂತ್ರ ಭಾರತದ ಇತಿಹಾಸದಲ್ಲಿ ಮೊದಲ ಬಾರಿಗೆ ಎರಡು ದಿನಗಳ, ಅಂದರೆ 48 ಗಂಟೆಗಳ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಲಾಗಿದೆ. ಅಲ್ಲದೆ ಮೊದಲ ಬಾರಿಗೆ ದೇಶದಲ್ಲಿ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಎಂದು ಮಾನ್ಯತೆ ಪಡೆದಿರುವ ಎಲ್ಲ ಸಂಘಟನೆಗಳು ತಮ್ಮ ಮುಖಂಡರ ರಾಜಕೀಯ ವಿಚಾರಗಳ ಬೇಧ-ಭಾವವಿಲ್ಲದೆ ಜಂಟಿಯಾಗಿ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿವೆ. ಈ ಕರೆಗೆ ವಿವಿಧ ವೃತ್ತಿ ಸಂಘಟನೆಗಳ ಸುಮಾರಾಗಿ ಎಲ್ಲ ರಾಷ್ಟ್ರೀಯ ಒಕ್ಕೂಟಗಳೂ ಬೆಂಬಲ ನೀಡಿವೆ. ಕಾರ್ಮಿಕರು ಮತ್ತು ನೌಕರರ ವಿವಿಧ ಪ್ರಾದೇಶಿಕ ಮಟ್ಟಗಳ ಸಂಘಗಳು ಮತ್ತು ವಿವಿಧ ಕಾರ್ಖಾನೆ ಮಟ್ಟದ ಸ್ವತಂತ್ರ ಸಂಘಟನೆಗಳಿಂದಲೂ ಈ ಮುಷ್ಕರಕ್ಕೆ ಬೆಂಬಲ ವ್ಯಕ್ತವಾಗಿದೆ. ಎಡಪಕ್ಷಗಳು ಈ ಕರೆಯೊಂದಿಗೆ ತಮ್ಮ ಸೌಹಾರ್ದವನ್ನು ಮತ್ತು ಬೆಂಬಲವನ್ನು ವ್ಯಕ್ತಪಡಿಸಿವೆ. ಜತೆಗೆ, ರೈತರು, ಯುವಜನರು, ವಿದ್ಯಾರ್ಥಿಗಳು ಮತ್ತು ಮಹಿಳೆಯರ ಸಾಮೂಹಿಕ ಸಂಘಟನೆಗಳು ಕಾರ್ಮಿಕ ವರ್ಗದ ಈ ಐತಿಹಾಸಿಕ, ಅಭೂತಪೂರ್ವ ಕಾರ್ಯಾಚರಣೆಗೆ ಬೆಂಬಲ ವ್ಯಕ್ತಪಡಿಸಿವೆ.

ಈ ಸಾರ್ವತ್ರಿಕ ಮುಷ್ಕರ ನಡೆದಿರುವುದು, ಕಾರ್ಮಿಕ ವರ್ಗ ಮತ್ತು ಇತರ ಶ್ರಮಜೀವಿ ವಿಭಾಗಗಳ ಮೇಲಿನ ದಾಳಿಗಳು ಹೆಚ್ಚುತ್ತ ಸಾಗಿರುವ ಹಿನ್ನೆಲೆಯಲ್ಲಿ. ಕಳೆದ ಎರಡು ದಶಕಗಳಿಗಿಂತಲೂ ಹೆಚ್ಚು ಕಾಲದಿಂದ ಭಾರತೀಯ ಆಳುವ ವರ್ಗಗಳು ಅಂಗೀಕರಿಸಿರುವ ನವ-ಉದಾರವಾದಿ ಆರ್ಥಿಕ ಸುಧಾರಣೆಗಳ ದಿಕ್ಕು-ದಾರಿ ಈ ದಾಳಿಗಳಿಗೆ ಕಾರಣವಾಗಿದೆ. ಕಾರ್ಮಿಕ ಸಂಘಟನೆಗಳು ಮತ್ತು ದುಡಿಮೆಗಾರರ ವಿವಿಧ ಸಂಘಟನೆಗಳು ಎತ್ತಿರುವ ಎಲ್ಲ ನೈಜ ಪ್ರಶ್ನೆಗಳು, ಅವರ ಸಮರಶೀಲ ಪ್ರತಿಭಟನೆಯ ಕಾರ್ಯಾಚರಣೆಗಳು ಮತ್ತು ಮುಷ್ಕರಗಳಿಗೆ ಕಿವಿಗೊಟ್ಟಿಲ್ಲ. ಈ ಸಂದರ್ಭದಲ್ಲೂ ಮುಷ್ಕರದ ಕರೆ ನೀಡಿ ತಿಂಗಳುಗಳೇ ಆಗಿದ್ದರೂ, ಭಾರತದ ಕಾನೂನುಗಳ ಪ್ರಕಾರ ಮುಷ್ಕರದ ನೋಟೀಸುಗಳನ್ನು ಕೊಟ್ಟಿದ್ದರೂ, ಸರಕಾರ ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಮುಖಂಡರನ್ನು ಮಾತುಕತೆಗೆ ಕರೆದದ್ದು ಮುಷ್ಕರದ ಹಿಂದಿನ ದಿನವಷ್ಟೇ, ಅಂದರೆ ಫೆಬ್ರುವರಿ 19ರ ಸಂಜೆ. ಇದು ಒಂದು ಅಪಹಾಸ್ಯ ಮಾಡುವ ಕಸರತ್ತು ಎಂಬುದು ಸ್ಪಷ್ಟ, ಮುಷ್ಕರದ ಕರೆಯನ್ನು ಹಿಂತೆಗೆದುಕೊಳ್ಳುವಂತೆ ಕಾರ್ಮಿಕ ಸಂಘಗಳನ್ನು ಸರಕಾರ ಮನವಿ ಮಾಡಿದೆ ಎಂದು ದಾಖಲಿಸಲು ಮಾತ್ರ. ಕೇಂದ್ರೀಯ ಮಂತ್ರಿಗಳಿಗೆ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಎತ್ತಿರುವ ಬೇಡಿಕೆಗಳನ್ನು ಚರ್ಚಿಸಬೇಕು ಎಂದೂ ಅನಿಸಿದಂತಿಲ್ಲ. ಬದಲಿಗೆ, ಮುಷ್ಕರದ ಕರೆಯನ್ನು ಹಿಂತೆಗೆದುಕೊಂಡ ಮೇಲಷ್ಟೇ ಬೇಡಿಕೆಗಳ ಮೇಲೆ ಏನಾದರೂ ಚರ್ಚೆ ಸಾಧ್ಯ ಎಂದರು!

ಈ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿರುವುದು ಹತ್ತು ಬೇಡಿಕೆಗಳ ಒಂದು ಬೇಡಿಕೆ ಪಟ್ಟಿಯ ಮೇಲೆ. ಎಲ್ಲ ಜೀವನಾವಶ್ಯಕ ಸರಕುಗಳ ಬೆಲೆಗಳ ನಿರಂತರ ಬೆಲೆಯೇರಿಕೆಗಳನ್ನು ನಿಲ್ಲಿಸಲು ತುರ್ತು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸರಕಾರವನ್ನು ಕೇಳಲಾಗಿದೆ; ನಮ್ಮ ಎಲ್ಲ ನಾಗರಿಕರಿಗೆ ಆಹಾರ ಭದ್ರತೆ ಒದಗಿಸುವ ಒಂದು ಸಾರ್ವತ್ರಿಕ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸ್ಥಾಪಿಸುವುದು, ಎಲ್ಲ ಕುಟುಂಬಗಳಿಗೆ ತಿಂಗಳಿಗೆ 35 ಕೆ.ಜಿ. ಆಹಾರಧಾನ್ಯಗಳನ್ನು ಕೆಜಿಗೆ ಎರಡು ರೂ.ಗಳಲ್ಲಿ ಪೂರೈಸುವುದು; ಅಕುಶಲ ಕಾರ್ಮಿಕರಿಗೆ ರೂ.10,000 ಕನಿಷ್ಟ ಕೂಲಿ; ಸಮಾನ ಕೆಲಸಕ್ಕೆ ಸಮಾನ ವೇತನ; ಅಸಂಘಟಿತ ಕಾರ್ಮಿಕರಿಗೆ ಸಾಮೂಹಿಕ ಚೌಕಾಸಿಯ ಮತ್ತು ಕಾರ್ಮಿಕ ಸಂಘಟನೆಯ ಹಕ್ಕುಗಳ ಭರವಸೆ; ಕಾಂಟ್ರಾಕ್ಟ್ ಕಾರ್ಮಿಕರ ಸಮಸ್ಯೆಗಳಿಗೆ ಪರಿಹಾರ ಮುಂತಾದವುಗಳು ಈ ಬೇಡಿಕೆ ಪಟ್ಟಿಯಲ್ಲಿವೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಹೆಚ್ಚುತ್ತಿರುವ ಆರ್ಥಿಕ ಹೊರೆಗಳಿಂದ ನರಳುತ್ತಿರುವ ನಮ್ಮ ವಿಶಾಲ ಜನಸಮೂಹಗಳಿಗೆ ಸ್ವಲ್ಪವಾದರೂ ಪರಿಹಾರವನ್ನು ಒದಗಿಸುವ ಗುರಿ ಹೊಂದಿರುವ ಬೇಡಿಕೆಗಳಿವು.

ಬಜೆಟ್ ಅಧಿವೇಶನ

ಮುಷ್ಕರದ ಎರಡನೇ ದಿನ ಸಂಸತ್ತಿನ ಬಜೆಟ್ ಅಧಿವೇಶನ ಆರಂಭವಾಗುವ ದಿನ.

ಈ ಅಧಿವೇಶನದಲ್ಲಿ ಸಂಸತ್ತು ಹಲವು ಮಹತ್ವದ ಪ್ರಶ್ನೆಗಳನ್ನು ಪರಿಶೀಲಿಸಬೇಕಾಗಿದೆ- ಲೋಕಪಾಲ ಮತ್ತು ಆಹಾರ ಭದ್ರತೆ ಮಸೂದೆಗಳು, ನ್ಯಾಯಮೂರ್ತಿ ವರ್ಮ ವರದಿಯನ್ನು ಶಾಸನವಾಗಿ ಪರಿವರ್ತಿಸುವುದು ಇತ್ಯಾದಿ. ಆದರೆ ಮುಖ್ಯ ಅಜೆಂಡಾ ಬಜೆಟ್ ಪ್ರಸ್ತಾವಗಳನ್ನು ಪರಿಶೀಲಿಸುವುದು ಮತ್ತು ಮಂಜೂರು ಮಾಡುವುದು.



ಈ ವರ್ಷದ ಬಜೆಟ್ ಪ್ರಸ್ತಾವಗಳು ಒಂದು ತೀವ್ರ ಆರ್ಥಿಕ ನಿಧಾನಗತಿಯ ಹಿನ್ನೆಲೆಯಲ್ಲಿ ಬರುತ್ತಿವೆ. ಕಳೆದ ಹಣಕಾಸು ವರ್ಷದಲ್ಲಿ ಜಿಡಿಪಿ ಬೆಳವಣಿಗೆ ದರ 5ಶೇ. ಎಂಬ ಕೇಂದ್ರೀಯ ಸಾಂಖ್ಯಿಕ ಸಂಘಟನೆ(ಸಿಎಸ್ಒ)ಯ ಅಂದಾಜನ್ನೇನೋ ಹಣಕಾಸು ಮಂತ್ರಾಲಯ ಪ್ರಶ್ನಿಸುತ್ತಿದೆ. ಆದರೆ, ಈ ಅಂದಾಜು ಸತ್ಯಕ್ಕೆ ಹೆಚ್ಚು ಹತ್ತಿರವಾಗಿದೆ ಎಂದೇ ವಾಸ್ತವಿಕತೆ ಸೂಚಿಸುತ್ತಿದೆ. ಕೈಗಾರಿಕಾ ಉತ್ಪನ್ನದ ಪ್ರಮಾಣ ನವಂಬರಿನಲ್ಲಿ ಸಂಕುಚಿಸಿದ್ದಲ್ಲದೆ, ಡಿಸೆಂಬರಿನಲ್ಲಿ ಮತ್ತೆ 0.6ಶೇ.ದಷ್ಟು ಸಂಕುಚನಗೊಂಡಿದೆ. ಎಪ್ರಿಲ್-ನವಂಬರ್ 2012ರ ಒಂಭತ್ತು ತಿಂಗಳ ಅವಧಿಯಲ್ಲಿ ಕೈಗಾರಿಕಾ ಉತ್ಪಾದನೆ ಕೇವಲ 0.7 ಶೇ. ದರದಲ್ಲಿ ಹೆಚ್ಚಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಅದು 3.7ಶೇ. ದರದಲ್ಲಿ ಹೆಚ್ಚಿತ್ತು. ಕೈಗಾರಿಕಾ ಸೂಚ್ಯಂಕದ 75ಶೇ.ದಷ್ಟಿರುವ ತಯಾರಿಕಾ ವಲಯದಲ್ಲಂತೂ ಡಿಸೆಂಬರಿನಲ್ಲಿ ಬೆಳವಣಿಗೆಯ ಬದಲು 0.7 ಶೇ. ಇಳಿಕೆಯೇ ಆಗಿದೆ. ಇದರ ಪರಿಣಾಮವಾಗಿ ನಿರುದ್ಯೋಗದೊಂದಿಗೆ ಅವಿರತ ಬೆಲೆಯೇರಿಕೆ, ಆಹಾರದ ಹಣದುಬ್ಬರ ಜನವರಿಯಲ್ಲಿ 10.8ಶೇ. ಆಗಿದೆ. ತರಕಾರಿಗಳ ಬೆಲೆಗಳು 26ಶೇ., ಅಡುಗೆ ತೈಲಗಳದ್ದು 15ಶೇ., ಮಾಂಸ/ಮೊಟ್ಟೆ/ಮೀನುಗಳದ್ದು 14ಶೇ., ಧಾನ್ಯಗಳು ಮತ್ತು ಬೇಳೆಕಾಳುಗಳ ಬೆಲೆಗಳು ಅನುಕ್ರಮವಾಗಿ 14ಶೇ. ಮತ್ತು 15ಶೇ., ಸಕ್ಕರೆಯದ್ದು 13 ಶೇ. ಏರಿವೆ. ಈ ಮುಂದಿನ ಬಜೆಟ್ ಹೆಚ್ಚುತ್ತಿರುವ ಈ ಸಂಕಟಗಳಿಂದ ಸ್ವಲ್ಪವಾದರೂ ಪರಿಹಾರ ಕೊಡಬಹುದು ಎಂಬುದು ಜನಗಳ ನಿರೀಕ್ಷೆ. ಎರಡು ದಿನಗಳ ಕಾರ್ಮಿಕರ ಕಾರ್ಯಾಚರಣೆ ಆಗ್ರಹಿಸಿರುವುದು ಇದನ್ನೇ.

ಹೊರೆ ಹಾಕುವ ಜಾಯಮಾನ

ಆದರೆ ಸರಕಾರ ಜನಗಳಿಗೆ ಸ್ವಲ್ಪ ಪರಿಹಾರ ಒದಗಿಸಿ ಅವರ ಸಂಕಟಗಳನ್ನು ನೀಗುವ ಬದಲು ಇನ್ನಷ್ಟು ಹೊರೆಗಳನ್ನು ಹೇರುವ ಸಂಕೇತಗಳೇ ಕಾಣುತ್ತಿವೆ. ಹಣಕಾಸು ಶಿಸ್ತಿನ ಹೆಸರಿನಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ದರಗಳಲ್ಲಿ ಮಾಸಿಕ ಹೆಚ್ಚಳ ಇರುತ್ತದೆ, ಮತ್ತು ಬಡವರಿಗೆಂದು ಇರುವ ಸಬ್ಸಿಡಿಗಳನ್ನು ದೊಡ್ಡ ಪ್ರಮಾಣದಲ್ಲಿ ಕಡಿತ ಮಾಡುವ ಇಂಗಿತಗಳನ್ನು ಸರಕಾರ ಈಗಾಗಲೇ ಕೊಟ್ಟಿದೆ. ತನ್ನ ಶ್ರೀಮಂತರ-ಪರ ಪಕ್ಷಪಾತದಿಂದಾಗಿ ಅದು ಶ್ರೀಮಂತರಿಗೆ ಮತ್ತು ಕಾರ್ಪೊರೇಟುಗಳಿಗೆ ಸತತವಾಗಿ ಕೊಡುತ್ತಾ ಬಂದಿರುವ ಬೃಹತ್ ಪ್ರಮಾಣದ ತೆರಿಗೆ ರಿಯಾಯ್ತಿಗಳನ್ನು ಕಡಿತ ಮಾಡುವ ಬಗ್ಗೆ ಮಾತ್ರ ಯಾವುದೇ ಇಂಗಿತವನ್ನು ವ್ಯಕ್ತಪಡಿಸಿಲ್ಲ. ಈ ಹಿಂದೆ ಈ ಅಂಕಣದಲ್ಲಿ ಹೇಳಿರುವಂತೆ ಕಳೆದ ಹಣಕಾಸು ವರ್ಷದಲ್ಲಿ ಇಂತಹ ರಿಯಾಯ್ತಿಗಳ ಮೊತ್ತ ಒಟ್ಟು ಹಣಕಾಸು ಕೊರತೆಗಿಂತಲೂ 6000ಕೋಟಿ ರೂ.ಗಳಷ್ಟು ಹೆಚ್ಚಿತ್ತು.

ಭಾರತೀಯ ಜನತೆಯ ಹಿತಗಳನ್ನು ಬಲಿಗೊಟ್ಟು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಅನುಕೂಲ ಕಲ್ಪಿಸುವುದು ನವ-ಉದಾರವಾದಿ ಆರ್ಥಿಕ ಸುಧಾರಣಾ ಪಥವ

ಪುಟ 14ಕ್ಕೆ

ದುಡಿಯುವ ವರ್ಗದ ಅಭೂತಪೂರ್ವ ಮುಷ್ಕರ

ನಿರೀಕ್ಷೆಗೂ ಮೀರಿ ಸಿಕ್ಕಿದ ಸ್ಪಂದನೆ ಜನತೆಯಲ್ಲಿ ಮಡುಗಟ್ಟಿದ ಆಕ್ರೋಶ ಸ್ಫೋಟ

2013 ಫೆಬ್ರವರಿ 20 ಮತ್ತು 21ರಂದು ರಾಷ್ಟ್ರಾದ್ಯಂತ ಮುಷ್ಕರ ನಡೆಸಲು ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳಾದ ಬಿ.ಎಂ.ಎಸ್., ಇಂಟಕ್, ಐಟಕ್, ಎಚ್.ಎಂ.ಎಸ್., ಸಿಐಟಿಯು, ಎಐಯುಟಿಯುಸಿ, ಎಐಸಿಸಿಟಿಯು, ಯುಟಿಯುಸಿ, ಟಿಯುಸಿಸಿ, ಎಸ್‌ಇಡಬ್ಲ್ಯುಎ ಮತ್ತು ಎಲ್‌ಪಿಎಫ್ ನೀಡಿದ್ದ ಕರೆಗೆ ದೇಶಾದ್ಯಂತ ಅಭೂತಪೂರ್ವವಾಗಿ ಸ್ಪಂದಿಸಿದ ದುಡಿಯುವ ವರ್ಗಕ್ಕೆ ಈ ಸಂಘಟನೆಗಳು ಅಭಿನಂದನೆ ಸಲ್ಲಿಸಿದೆ.

ನಿರೀಕ್ಷೆಗೂ ಮೀರಿ ಸಿಕ್ಕಿದ ಸ್ಪಂದನೆ ಡೀಸೆಲ್, ಪೆಟ್ರೋಲ್, ಅಡುಗೆ ಅನಿಲ, ಕಲ್ಲಿದ್ದಲು, ವಿದ್ಯುಚ್ಛಕ್ತಿ ಮೊದಲಾದ ವಸ್ತುಗಳು ಹಾಗೂ ಜನಸಾಮಾನ್ಯರ ಇತರೆ ಜೀವನಾವಶ್ಯಕ ಸಾಮಗ್ರಿಗಳ ಸತತ ಬೆಲೆಯೇರಿಕೆಯಿಂದ ಜನತೆಯಲ್ಲಿ ಮಡುಗಟ್ಟಿದ ನಿಜವಾದ ಆಕ್ರೋಶವನ್ನು ವ್ಯಕ್ತಪಡಿಸಿದೆ. ಹಣದುಬ್ಬರ ಮತ್ತು ಆರ್ಥಿಕತೆಯಲ್ಲಿನ ಮಂದಗತಿಯಿಂದಾಗಿ ಕಾರ್ಮಿಕ ವರ್ಗಕ್ಕೆ ಉಂಟಾಗಿರುವ ಸಮಸ್ಯೆಗಳನ್ನು ನಿವಾರಿಸುವಲ್ಲಿ ಸರಕಾರದ ವೈಫಲ್ಯದ ವಿರುದ್ಧದ ಆಕ್ರೋಶವನ್ನೂ ಇದು ಪ್ರತಿಫಲಿಸಿದೆ. ನವದೆಹಲಿಯ ತಾಲ್‌ಕಟೋರಾ ಸ್ಟೇಡಿಯಮ್‌ನಲ್ಲಿ 2012ರ ಸೆಪ್ಟೆಂಬರ್ 4ರಂದು ನಡೆದ ಅಖಿಲ ಭಾರತ ಸಮಾವೇಶ ಅಂಗೀಕರಿಸಿದ ಕಾರ್ಮಿಕರ 10 ಅಂಶಗಳ ಬೇಡಿಕೆಯ ಆಧಾರದ ಮೇಲೆ ಸಂಯೋಜನೆ ಪಡೆಯುದ ಸಾವಿರಾರು ಸಂಘಗಳ ಬೆಂಬಲದೊಂದಿಗೆ ಎಲ್ಲಾ ಕೇಂದ್ರ ಕಾರ್ಮಿಕ ಸಂಘಗಳು ಎರಡು ದಿನಗಳ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿದ್ದವು. ಮುಸ್ಕರ ಯಶಸ್ವಿಯಾಗಿದ್ದು ಹೆಚ್ಚುಕಮ್ಮಿ ಶಾಂತಿಯುತವಾಗಿತ್ತು. ಆದಾಗ್ಯೂ ಅನೇಕ ಕಡೆ ಕಾರ್ಮಿಕರ ಮೇಲೆ ಆಕ್ರಮಣಗಳು ನಡೆದಿವೆ. ದೆಹಲಿ ಸಮೀಪದ ನೊಯ್ಡಾದಲ್ಲಿ ಲಾಠಿಪ್ರಹಾರ, ಯದ್ವಾತದ್ವಾ ಬಂಧನ ಮಾಡಲಾಗಿದೆ. ಶಾಂತಿಯುತ ಪ್ರದರ್ಶನದ ಮೇಲೆ ಅಮಾನುಷ ಲಾಠಿಪ್ರಹಾರದಲ್ಲಿ ಅನೇಕ ಮಂದಿ ಗಾಯಗೊಡಿದ್ದು ಒಬ್ಬ ಕಾರ್ಮಿಕ ಮೃತಪಟ್ಟಿದ್ದಾರೆ. ಐಟಕ್ ಸಂಯೋಜಿತ ಹರ್ಯಾಣ ರಸ್ತೆ ಸಾರಿಗೆ ನಿಗಮದ ನಾಯಕರೊಬ್ಬರನ್ನು ಮುಷ್ಕರವನ್ನು ಹಾಳುಗೆಡಹುವ ಉದ್ದೇಶದಿಂದ ಹತ್ಯೆ ಮಾಡಲಾಗಿದೆ. ಹರ್ಯಾಣದ ಅಂಬಾಲಾ ಡಿಪೋದಲ್ಲಿ ಈ ಘೋರ ಕೃತ್ಯ ನಡೆದಿದೆ.

ದೇಶದೆಲ್ಲೆಡೆ ಮುಷ್ಕರ ಸಂಪೂರ್ಣವಾಗಿದ್ದು ಎಲ್ಲಾ ಪ್ರಮುಖ ಕ್ಷೇತ್ರಗಳ ಮೇಲೆ ಪರಿಣಾಮ ಬೀರಿ ಜನಜೀವನ ಅಸ್ತವ್ಯಸ್ತಗೊಂಡಿತು. ಬ್ಯಾಂಕಿಂಗ್ ವ್ಯವಸ್ಥೆ ಸಂಪೂರ್ಣ ಸ್ಥಗಿತಗೊಂಡಿತು. ದೆಹಲಿ ಮತ್ತು ಮಹಾರಾಷ್ಟ್ರ ಹೊರತುಪಡಿಸಿ ದೇಶದ ಇತರ ಎಲ್ಲಾ ಕಡೆ ಸಾರಿಗೆ ಕ್ಷೇತ್ರದ ಸ್ಪಂದನೆ ಅಪೂರ್ವವಾಗಿತ್ತು. ಪೆಟ್ರೋಲಿಯಮ್, ಟೆಲಿಕಾಮ್, ಗಣಿ, ಕಲ್ಲಿದ್ದಲು, ರಕ್ಷಣೆ, ಅಣುಶಕ್ತಿ ಯೋಜನೆಗಳ ಸಹಿತ ಇಂಧನ, ಬಂದರುಗಳು, ವಿಮೆ, ಪ್ಲಾಂಟೇಷನ್ ಮತ್ತು ರಾಜ್ಯ ಸರಕಾರಿ ನೌಕರರು ... ಈ ರೀತಿಯಾಗಿ ಎಲ್ಲಾ ರಂಗಗಳಲ್ಲಿ ಮುಷ್ಕರ ಅಭೂತಪೂರ್ವ ಯಶಸ್ಸು ಗಳಿಸಿತು. ಅಂಚೆ ಕಚೇರಿಗಳು ಮುಚ್ಚಿದ್ದವು. ಆದಾಯ ತೆರಿಗೆ ಕಚೇರಿಗಳ ಕೆಲಸವೂ ಬಹುತೇಕ ಬಾಧಿತವಾಯಿತು. ದೇಶಾದ್ಯಂತ ಕೈಗಾರಿಕಾ ಕಾರ್ಮಿಕರು ಉತ್ಪಾದನೆಯನ್ನು ಸ್ಥಗಿತಗೊಳಿಸಿದರು. ಸರಕಾರಿ ಮತ್ತು ಖಾಸಗಿ ವಲಯದ ಕೈಗಾರಿಕೆ ಕೇಂದ್ರಗಳು ಬಾಧಿತವಾದವು.

ಅಸಂಘಟಿತ ವಲಯ, ಕೃಷಿ, ಕೃಷಿಯೇತರ, ಗ್ರಾಮೀಣ ಮತ್ತು ನಗರ, ಅಂಗನವಾಡಿ, ಆಶಾ ಕಾರ್ಯಕರ್ತೆಯರು ಲಕ್ಷಾಂತರ ಸಂಖ್ಯೆಯಲ್ಲಿ ಭಾಗವಹಿಸಿದರು. ಗುತ್ತಿಗೆ ಕಾರ್ಮಿಕರೂ ಅಭೂತಪೂರ್ವ ರೀತಿಯಲ್ಲಿ ಹೋರಾಟದಲ್ಲಿ ಪಾಲ್ಗೊಂಡರು.

ಅರುಣಾಚಲದಿಂದ ಗುಜರಾತ್‌ವರೆಗೆ, ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಮುಷ್ಕರದ ಪರಿಣಾಮ ಗಮನಾರ್ಹವಾಗಿತ್ತು. ಅಸ್ಸಾಂ, ಬಿಹಾರ, ಒರಿಸ್ಸಾ, ಪಂಜಾಬ್, ಹರ್ಯಾಣ, ರಾಜಸ್ತಾನ, ಕೇರಳ, ಆಂಧ್ರಪ್ರದೇಶ, ತಮಿಳುನಾಡು, ಕರ್ನಾಟಕ ರಾಜ್ಯಗಳಲ್ಲಿ ಮುಷ್ಕರ ಭಾರೀ ಯಶಸ್ವಿಯಾಯಿತು. ಪಶ್ಚಿಮ ಬಂಗಾಳದಲ್ಲಿ ರಾಜ್ಯ ಸರಕಾರದ

ಪುಟ 15 ಕ್ಕೆ


ಪಶ್ಚಿಮ ಬಂಗಾಳ


ಹೈದರಾಬಾದ್


ದೆಹಲಿ


ಕೋಲ್ಕತ್ತ


ತಮಿಳುನಾಡು

ಬೆದರಿಕೆ, ಒತ್ತಡಗಳನ್ನು ಮೀರಿ ನಿಂತ ಮುಷ್ಕರ

ಎಸ್.ವರಲಕ್ಷ್ಮಿ

'ರಾಜ್ಯದಲ್ಲಿ ಬಂದ್‌ಗೆ ನೀರಸ ಪ್ರತಿಕ್ರಿಯೆ', 'ವಾರಸುದಾರರು ಇಲ್ಲದ ಬಂದ್', 'ಜನಜೀವನ ಬಾಧಿಸದ ಮುಷ್ಕರ', 'ಮಿಶ್ರ ಪ್ರತಿಕ್ರಿಯೆ' 'ಕರ್ನಾಟಕದಲ್ಲಿ ಬಂದ್ ನೀರಸ' 'ಮುಷ್ಕರ ಒಂದೇ ಪರಿಹಾರವಲ್ಲ'..... ಇವು ಕರ್ನಾಟಕದ ಪ್ರಮುಖ ಕನ್ನಡ ದಿನಪತ್ರಿಕೆಗಳ ಮುಖಪುಟಗಳಲ್ಲಿ ಮತ್ತು ಸಂಪಾದಕೀಯಗಳಲ್ಲಿ ಕಂಡು ಬಂದ ಬರಹಗಳು. ಈ ಬರಹಗಳು ಕಾರ್ಮಿಕ ವಿರೋಧಿ, ಜನವಿರೋಧಿ ನೀತಿಗಳನ್ನು ಬಂಬಲಿಗೆ ಳಿಂಬಂವ ಹೋರಾಟವನ್ನು ಮುಷ್ಕರ ದೇಶದ ಮುಂದೆ ಇಟ್ಟಿರುವ ಜ್ವಲಂತ ಪ್ರಶ್ನೆಗಳನ್ನು ಯಾಕೆ ಗಮನಿಸಲಿಲ್ಲವೋ !!

ಈ ಮುಷ್ಕರ ಯಾಕೆ?

ಕೇಂದ್ರ ಸರ್ಕಾರದ ಉದಾರೀಕರಣದ ನೀತಿಗಳು ಕಾರ್ಮಿಕರ ಮತ್ತು ನೌಕರರನ್ನು ಸಂಪೂರ್ಣವಾಗಿ ಬೀದಿಗೆ ತರುತ್ತಿದೆ. ಕಾರ್ಮಿಕ ಮತ್ತು ನೌಕರರಿಗೆ ಸರ್ಕಾರದಿಂದ ಮತ್ತು ಅವನು ಕೆಲಸ ಮಾಡುವ ಸಂಸ್ಥೆಯಿಂದ ಭದ್ರತೆ ಸಿಗುವ ಪರಿಸ್ಥಿತಿ ಹೋಗಿ ಉದ್ಯೋಗದಲ್ಲಿ ಅತಂತ್ರತೆ ಆತಂಕಗಳು ದುಡಿಯುವ ಜನರನ್ನು ಕಾಡುವಂತಾಗುತ್ತಿದೆ.



ಏನು ಯಾಕೆಂದರೆ 'ಉಪಯೋಗಿಸು, ಬಿಸಾಡು' ಧೋರಣೆಯ ಆಧಾರದಲ್ಲಿ ದುಡಿಯುವವರನ್ನು ನೋಡುತ್ತಿರುವುದರಿಂದ. ಇದು ದೇಶದ ಆರ್ಥಿಕ ಸಂಪತ್ತಿಗೆ, ಸಾಮಾಜಿಕ ಸಂಪತ್ತಿಗೆ ಬಹುದೊಡ್ಡ ಕೊಡುಗೆಯನ್ನು ನೀಡುವವರಿಗೆ ಅಭದ್ರತೆಯನ್ನು ಕಲ್ಪಿಸುತ್ತಿದೆ.

ಇಂತಹ ನೀತಿಗಳು ಕೇಂದ್ರ ಕಾರ್ಮಿಕ ಸಂಘಟನೆಗಳು ತಮ್ಮ ಸೈದ್ಧಾಂತಿಕ ಭಿನ್ನತೆಗಳನ್ನು ಬದಿಗಿಟ್ಟು ದುಡಿಯುವ ವರ್ಗವನ್ನು ರಕ್ಷಿಸುವ ಪಣ ತೊಡುವಂತೆ ಒಂದುಗೂಡಿ ಹೋರಾಡುವಂತೆ ಮಾಡಿವೆ. ಸ್ವಾತಂತ್ರ್ಯದ ನಂತರ 2 ದಿನಗಳ ಮುಷ್ಕರಕ್ಕೆ ಕರೆ ಕೊಟ್ಟಿರುವಂತದ್ದು! ಈ ಕರೆ ತಕ್ಷಣದಲ್ಲಿಯೇ ಕೊಟ್ಟಿರುವಂತಾದ್ದು ಅಲ್ಲ. 2011 ಫೆಬ್ರವರಿಯಲ್ಲಿ ಎಲ್ಲ ಸಂಘಟನೆಗಳಿಂದ ಬೃಹತ್ ಪಾರ್ಲಿಮೆಂಟ್ ಚಲೋ, 2012ರಲ್ಲಿ ಸೆಪ್ಟಂಬರ್‌ನಲ್ಲಿ ರಾಷ್ಟ್ರೀಯ ಜಂಟೀ ಸಮಾವೇಶ, ರಾಜ್ಯ ಸಮಾವೇಶಗಳು, 2012 ನವೆಂಬರ್ ಜೈಲ್ ಭರೋ ಕಾರ್ಯಕ್ರಮಗಳು ನಡೆದಿವೆ. ವ್ಯಾಪಕ ಪ್ರಚಾರವನ್ನು ಮಾಡಲಾಗಿದೆ. ಈ ಎಲ್ಲ ಪ್ರಚಾರ ಹೋರಾಟಗಳ ಸಂದರ್ಭದಲ್ಲಿ ಕಾರ್ಮಿಕರ ಬೇಡಿಕೆಗಳ ಬಗ್ಗೆ ಮಾತನಾಡದೇ ಇದ್ದಂತಹ ಮೌನಿ ಪ್ರಧಾನಮಂತ್ರಿಗಳು ಈಗ ಮಾತಾನಾಡುತ್ತಿದ್ದಾರೆ. ಮುಷ್ಕರ ಸರಿಯಲ್ಲ ಎನ್ನುತ್ತಿದ್ದಾರೆ.

ಮುಷ್ಕರದ ಹಿಂದಿನ ಕೇಂದ್ರ ಸರ್ಕಾರದ ಕಾರ್ಮಿಕ ಮಂತ್ರಿಗಳ ಮತ್ತು ಇತರ ಮಂತ್ರಿಗಳು ಕಾರ್ಮಿಕ ನಾಯಕರ ಬಳಿ ಚರ್ಚಿಸುವ ನಾಟಕವಾಡುತ್ತಿದ್ದಾರೆ.

ಮಾಲೀಕರ ಮತ್ತು ಸರ್ಕಾರಗಳ ಶೋಷಣೆಯಿಂದ ಬಳಲಿ ಬೆಂಡಾದ ಕಾರ್ಮಿಕ ವರ್ಗ ಫೆಬ್ರವರಿ 20 ಮತ್ತು 21 ರಂದು ತನ್ನ ಆಕ್ರೋಶವನ್ನು ಹೊರಗಡೆ ಹಾಕಿದೆ. ಮುಷ್ಕರದ ಕರೆ ವ್ಯಾಪಕ ಬೆಂಬಲ ವ್ಯಕ್ತವಾಗಿದೆ.

ರಾಜ್ಯದಲ್ಲಿ ಸುಮಾರು ಸಿಐಟಿಯು ನಿಂದಲೇ 14 ಲಕ್ಷ ಕರಪತ್ರ, 1 ಲಕ್ಷ ಪೋಸ್ಟರ್ಸ್, ಜೆಸಿಟಿಯುವಿನಿಂದ 1ಲಕ್ಷ ಕರಪತ್ರ, 10 ಸಾವಿರ ಪೋಸ್ಟರ್ಸ್, ಈ ಮುಷ್ಕರ ಯಾಕೆ? ಎಂಬ ಕುರಿತ 40 ಸಾವಿರ ಪುಸ್ತಕಗಳನ್ನು ಮುದ್ರಿಸಿ ವ್ಯಾಪಕವಾಗಿ ಹಂಚಲಾಗಿತ್ತು. ಇಡೀ ರಾಜ್ಯದಾದ್ಯಂತ ಪಂಚಾಯಿತ್ತಿ ಮತ್ತು ವಾರ್ಡ್ ಮಟ್ಟದ ಹೋರಾಟ ಸಮಿತಿಗಳನ್ನು ರಚಿಸಿ, ವಾಹನ ಜಾಥಗಳು, ಕಾಲ್ನಡಿಗೆ ಜಾಥಗಳನ್ನು ಮಾಡಲಾಗಿತ್ತು. ಗೋಡೆ ಬರಹಗಳನ್ನು ಜಿಲ್ಲಾ ಕೇಂದ್ರಗಳಲ್ಲಿ ಬರೆಯಲಾಗಿತ್ತು.

ಕಾರ್ಮಿಕರ ಆಕ್ರೋಶ ಈ ಮುಷ್ಕರ ಯಶಸ್ವಿಯಾಗಲಿಕ್ಕೆ ಕಾರಣವಾಗಿದೆ. ರಾಜ್ಯದಲ್ಲಿ ಬೆಂಗಳೂರಿನ ಅನೇಕಲ್, ದೊಡ್ಡಬಳ್ಳಾಪುರ, ನೆಲಮಂಗಲ, ದ.ಕನ್ನಡ ಜಿಲ್ಲೆಯ ಮಂಗಳೂರು, ಬೆಳ್ತಂಗಡಿ, ಬಂಟ್ವಾಳ ಮತ್ತು ಮೂಡಬಿದರೆ, ಉಡುಪಿ ಜಿಲ್ಲೆಯಲ್ಲಿ ಕುಂದಾಪುರ, ಕಾರ್ಕಳ ಮತ್ತು ಉಡುಪಿ ತಾಲೂಕುಗಳು, ಗುಲ್ಬರ್ಗಾ ಜಿಲ್ಲೆಯ ಗುಲ್ಬರ್ಗಾ ನಗರ, ಅಫಜಲ್ಪುರ ಮತ್ತು ಚಿಂಚೋಳಿ, ಯಾದಗಿರಿ ಜಿಲ್ಲೆಯ ಶಹಾಪುರ, ಕೋಲಾರ ಜಿಲ್ಲೆಯ ಮಾಲೂರು, ಕೋಲಾರ, ಬಂಗಾರಪೇಟೆ ಮತ್ತು ಮುಳಬಾಗಿಲು, ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ, ಗುಡಿಬಂಡೆ, ಚಿಕ್ಕಬಳ್ಳಾಪುರ, ಚಿಂತಾಮಣಿ, ಗೌರಿಬಿದನೂರು, ಶಿಡ್ಲಘಟ, ಮಂಡ್ಯ ಜಿಲ್ಲೆಯ ಮಂಡ್ಯ, ಕೆ.ಆರ್.ಪೇಟೆ, ಮದ್ದೂರು, ನಾಗಮಂಗಲ ಸಂಪೂರ್ಣ ಬಂದ್ ಆಗಿ ಮಳವಳ್ಳಿ ಭಾಗಶ: ಬಂದ್ ಆಗಿವೆ. ಕೊಪ್ಪಳ

ಪುಟ 13 ಕ್ಕೆ



ಬೆಂಗಳೂರಿನಲ್ಲಿ ರಾಜಭವನದತ್ತ ಜೆಸಿಟಿಯು ಮುಖಂಡರೊಂದಿಗೆ ಕಾರ್ಮಿಕರು



ಹಾಸನ



ಕಾರವಾರ



ಕೋಲಾರ



ಬೆಂಗಳೂರಿನ ಎಪಿಎಂಸಿ ಬಂದ್

ಸಂಘರ್ಷ ಸಂದೇಶ ಜಾಥಾ......

ಪುಟ 2 ರಿಂದ

ವಿದ್ಯಾರ್ಥಿವೇತನದ ಹೆಚ್ಚಳವಿಲ್ಲದೆ, ಹಾಸ್ಟೆಲುಗಳ ಸೌಲಭ್ಯವೂ ಸರಿಯಿಲ್ಲದೆ ಬಹುತೇಕರು ಶಾಲೆಗಳನ್ನು ಬಿಡುತ್ತಾರೆ. ಉನ್ನತ ಶಿಕ್ಷಣದ ಕಥೆ ಇನ್ನೂ ನಾಚಿಕೆಗೇಡಿನದು. 12ನೇ ವರ್ಗ ಮುಗಿಸಿದ ನೂರು ವಿದ್ಯಾರ್ಥಿಗಳಲ್ಲಿ ತೊಂಬತ್ತರಷ್ಟು ವಿದ್ಯಾರ್ಥಿಗಳು ಕಾಲೇಜು ಸೇರುವುದಿಲ್ಲ. ಕಾಲೇಜುಗಳು ಸುಲಭದಲ್ಲಿ ಕೈಗೆಟುಕುವಂತೆ ಮಾಡುವ ಬದಲು ಸರಕಾರ ಗುಣಮಟ್ಟ-ಉತ್ಕೃಷ್ಟತೆಯ ಹೆಸರಿನಲ್ಲಿ ಖಾಸಗಿ ವಲಯದವರಿಗೆ ದೊಡ್ಡ ಪಾತ್ರ ನೀಡಿ ಶಿಕ್ಷಣ ಲಾಭಬಡುಕರ ದಂಧೆಯಾಗುವಂತೆ ಮಾಡಲಾಗಿದೆ.

ಉನ್ನತ ಶಿಕ್ಷಣ ಕ್ಷೇತ್ರಕ್ಕೆ ಕಂಪನಿಗಳಿಗೆ ಮತ್ತು ವಿದೇಶಿ ನೇರ ಹೂಡಿಕೆದಾರರಿಗೆ ಪ್ರವೇಶ ನೀಡುವ ಮತ್ತು ಕೇಂದ್ರ ಸರಕಾರಕ್ಕೆ ತನ್ನ ಖಾಸಗೀಕರಣದ ಹುನ್ನಾರಗಳಿಗೆ ಹೆಚ್ಚು ಅಧಿಕಾರ ನೀಡುವ ವಿಷಯದಲ್ಲಿ ಸಂಸತ್ತಿನಲ್ಲಿ ಆರು ಮಸೂದೆಗಳು ಅನುಮೋದನೆಯ ದಾರಿ ಕಾಯುತ್ತಿವೆ.

ಶಿಕ್ಷಣ ಕ್ಷೇತ್ರಕ್ಕೆ ಕನಿಷ್ಠ ಜಿಡಿಪಿಯ ಶೇ.6 ರಷ್ಟು ಹಣಕಾಸನ್ನು ಅತ್ಯಗತ್ಯ. ಈಗ ಅದು ಜಿಡಿಪಿಯ ಶೇ.3 ಮಾತ್ರ ಇದೆ. ಆರ್ ಟಿ ಈ ಕಾಯಿದೆಯ ಪೂರ್ಣ ಅನುಷ್ಠಾನ ಆಗಬೇಕಿದೆ. ಉನ್ನತ ಶಿಕ್ಷಣಧ ವಲಯದಲ್ಲಿ ವಿದೇಶಿ ನೇರ ಹೂಡಿಕೆ ಮತ್ತು ಕಂಪನೀಕರಣಕ್ಕೆ ತಡೆ ಹಾಕಬೇಕಿದೆ.

ಉದ್ಯೋಗದ ಹಕ್ಕು

ಸರಕಾರ ಆರ್ಥಿಕ ಬೆಳವಣಿಗೆಯ ಬಡಾಯಿ ಕೊಚ್ಚುತ್ತದೆ. ಆದರೆ ಅದು ಉದ್ಯೋಗ ರಹಿತಬೆಳವಣಿಗೆ. ಕೆಲವು ಕಡೆ ಉದ್ಯೋಗ ನಾಶದ ಬೆಳವಣಿಗೆ. ಉದಾಹರಣೆಗೆ 1998 ರಲ್ಲಿ ಸಂಘಟಿತ ವಲಯ 28.2 ದಶಲಕ್ಷ ಜನರನ್ನು ನೇಮಿಸಿಕೊಂಡಿತ್ತು. ಅದು 2008 ರಲ್ಲಿ 27.5 ದಶಲಕ್ಷಕ್ಕೆ ಇಳಿಯಿತು. ಅಂದರೆ 7 ಲಕ್ಷ ಉದ್ಯೋಗಗಳ ಹಾನಿ!!

ವಾರ್ಷಿಕ ನೇಮಕಾತಿಯ ದರ 2000–2005 ರಲ್ಲಿ ಶೇ.2.7 ರಷ್ಟಿದ್ದದ್ದು 2005–2010 ರಲ್ಲಿ ಶೇ.08ಕ್ಕೆ ಇಳಿದಿತ್ತು. ಯುವ ಜನತೆಯ ನಿರುದ್ಯೋಗ ಅದರಲ್ಲೂ ಯುವತಿಯರಲ್ಲಿನ ನಿರುದ್ಯೋಗ ದೊಡ್ಡ ಪ್ರಮಾಣದಲ್ಲಿತ್ತು.

ಕೇಂದ್ರ ಸರಕಾರದ ಇಲಾಖೆಗಳಲ್ಲಿ 10 ಲಕ್ಷ ಹುದ್ದೆಗಳು, ರೈಲ್ವೆಯಲ್ಲಿ 2.2 ಲಕ್ಷ ಹುದ್ದೆಗಳು ಖಾಲಿ ಇವೆ. ಅರ್ಧದಷ್ಟು ಖಾಲಿ ಹುದ್ದೆಗಳು ಪ.ಜಾತಿ/ ಪ.ವರ್ಗ ಮತ್ತು ಇತರ ಹಿಂದುಳಿದ ವರ್ಗಗಳದ್ದಾಗಿದೆ. ನೇಮಕಾತಿಗಳ ಮೇಲೆ ನಿಷೇದ ಹೇರಿದ್ದರಿಂದ ಈ ಪರಿಸ್ಥಿತಿ

ಎಲ್ಲಿ ಉದ್ಯೋಗಗಳನ್ನು ನೀಡಲಾಗಿದೆಯೋ ಅಲ್ಲಿ ಗುತ್ತಿಗೆ, ಕೂಲಿ ಆಧಾರದ ಮೇಲೆ ನೀಡಲಾಗಿದೆ. ಸೇವೆಯ ಖಾತರಿ ವೇತನ ಇತರ ಸೌಲಭ್ಯಗಳ ಖಾತರಿ ಇಲ್ಲ. ಖಾಸಗಿ ವಲಯದಲ್ಲಿ ಗುತ್ತಿಗೆ ಕೆಲಸಗಾರರು ಶೇ. 80 ರಷ್ಟಿದ್ದರೆ ಸಾರ್ವಜನಿಕ ವಲಯದಲ್ಲಿ ಅವರ ಪ್ರಮಾಣ ಶೇ 50ರಷ್ಟು! ಒಟ್ಟು ಅಂದಾಜು ಮಾಡಿದರೆ ಸುಮಾರು 5 ಕೋಟಿ ಕೆಲಸಗಾರರು ಹೀನ ಸ್ಥಿತಿಯಲ್ಲಿ ಯಾವುದೇ ಹಕ್ಕುಗಳಿಲ್ಲದೆ ಕೆಲಸ ಮಾಡುತ್ತಿದ್ದಾರೆ.

ಉದ್ಯೋಗದಲ್ಲೂ ಅಲ್ಪ ಸಂಖ್ಯಾತರಾದ ಮುಸ್ಲಿಮರಿಗೆ ನಗಣ್ಯ ಸಂಖ್ಯೆಗಳಲ್ಲಿ ಉದ್ಯೋಗ ನೀಡಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡರಲ್ಲೂ ತಾರತಮ್ಯ ಮಾಡಲಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಸರಕಾರ ಹಣಕಾಸನ್ನು ಕಡಿತಗೊಳಿಸುವ ಮೂಲಕ ನರೇಗ ಯೋಜನೆಯನ್ನು ದುರ್ಬಲಗೊಳಿಸುತ್ತಿದೆ. ಕಳೆದ ಬಜೆಟ್ಟಿನಲ್ಲಿ ನರೆಗಾ ಯೋಜನೆಯ ಹಣದ ಬಳಕೆ ಪೂರ್ತಿ ಆಗದೆ ಇರುವುದು ಕಂಡು ಬಂದಿದೆ. ಕಾನೂನಿನಡಿ ನಿಗದಿಪಡಿಸಿದ 100 ದಿನಗಳ ಅರ್ಧದಷ್ಟೂ ಉದ್ಯೋಗ ಸರಾಸರಿ ಸಿಗದಿರುವುದು ಕಂಡು ಬಂದಿದೆ.

ಹೊಸ ನೇಮಕಾತಿಗಳನ್ನು ಕೈಗೆತ್ತಿಕೊಂಡು ಪ.ಜಾತಿ ಪ.ವರ್ಗ ಮತ್ತು ಇತರ ಹಿಂದುಳಿದ ವರ್ಗಗಳ ಖಾಲಿ ಹುದ್ದೆಗಳ ಭರ್ತಿಗೆ ವಿಶೇಷ ಕ್ರಮ, ನಗರ ಉದ್ಯೋಗ ಖಾತರಿ ಯೋಜನೆಯೊಂದನ್ನು ಜಾರಿಗೆ ತಂದು ಅದರಲ್ಲಿ ಮಹಿಳೆಯರಿಗೆ ಮೂರನೇ ಒಂದರಷ್ಟು ಉದ್ಯೋಗಗಳನ್ನು ಮೀಸಲಿಡುವುದು ಅಗತ್ಯವಾಗಿದೆ. ಮುಸ್ಲಿಮರ ಬಗೆಗೆ ರಂಗನಾಥ್ ಮಿಶ್ರ ಸಮಿತಿಯ ಶಿಫಾರಸ್ಸುಗಳ ಜಾರಿ , ನರೆಗಾದಲ್ಲಿ 100 ದಿನಗಳ ಉದ್ಯೋಗ ಖಾತರಿಯ ಮಿತಿಯನ್ನು ತೆಗೆದು ಕನಿಷ್ಠ ಕೂಲಿ ಜಾರಿ ಆಗಬೇಕಿದೆ.

ಆರೋಗ್ಯ ಮತ್ತು ಅಗ್ಗದ ಔಷಧದ ಹಕ್ಕಿಗಾಗಿ

ದೇಶದ ಆರೋಗ್ಯ ಸೇವೆ ಖಾಸಗಿ ವಲಯದ ಮೇಲೆ ಹೆಚ್ಚೆಚ್ಚು ಅವಲಂಬನೆಗೆ ಒಳಗಾಗುತ್ತಿದೆ. ವೈದ್ಯರು, ಆಸ್ಪತ್ರೆಗಳು, ಕ್ಲಿನಿಕ್‌ಗಳು ಮತ್ತು ಔಷಧ ಉದ್ಯಮ ಹೀಗೆ ಎಲ್ಲದರಲ್ಲೂ ಖಾಸಗಿ ಪಾರಮ್ಯ ಹೆಚ್ಚಾಗುತ್ತಿದೆ. ಜನರ ಅನಾರೋಗ್ಯದಿಂದ ಅಪಾರ ಲಾಭ ಮಾಡುತ್ತಿರುವ ಆರೋಗ್ಯ ವಲಯದ ಮೇಲೆ ಯಾವುದೇ ನಿಯಂತ್ರಣವಿಲ್ಲ. ಆದುದರಿಂದ ಆರೋಗ್ಯ ಸಂಬಂಧಿ ಉದ್ಯಮವು ನವ ಉದಾರೀಕರಣ ನೀತಿಗಳು ಜಾರಿಯಾದ ಕಳೆದ 20 ವರ್ಷಗಳಲ್ಲಿ ಖಾಸಗಿ ವಲಯದಲ್ಲಿ ಅತ್ಯಂತ ಲಾಭದಾಯಕ ಉದ್ಯಮವಾಗಿ ಪರಿಗಣಿತವಾಗಿದೆ. ಇದೇ ವೇಳೆ, ಆರೋಗ್ಯದ ಮೇಲೆ ಮಾಡುವ ಖರ್ಚು ಸಾಲದ ಹೊರೆ ಬೀಳುವ ಎರಡನೇ ಅತಿ ದೊಡ್ಡ ಕೌಟುಂಬಿಕ ಕಾರಣವಾಗಿ ಹೊರಹೊಮ್ಮಿದೆ. ಈ ಕಾರಣದಿಂದಾಗಿ ಲಕ್ಷಾಂತರ ಕುಟುಂಬಗಳು ಅಸ್ತಿಪಾಸ್ತಿ ಮಾರಿ ಬಡತನದ ಕೂಪಕ್ಕೆ ಬಿದ್ದಿವೆ.

ಎಲ್ಲರಿಗೂ ಆರೋಗ್ಯ ಸೇವೆ ಒದಗಿಸುವ ಮಹತ್ವಾಕಾಂಕ್ಷೆಯಿಂದ ಆರಂಭಿಸಲಾದ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ಎಂಬ ಯೋಜನೆ ಸರ್ಕಾರದಿಂದಲೇ ನಿರ್ಲಕ್ಷ್ಯಕ್ಕೊಳಗಾಗಿ ವೈಫಲ್ಯ ಕಂಡಿದೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಬಲಪಡಿಸುವ ಮೂಲಕ ಪ್ರತಿ ಪ್ರಜೆಗೂ ಸಾರ್ವಜನಿಕ ಆರೋಗ್ಯ ಸೇವೆ ಒದಗಿಸುವ ಬದಲು ಈ ಸೇವಾ ಯೋಜನೆಯ ವ್ಯವಸ್ಥೆಯನ್ನೇ ಕೇಂದ್ರ ಸರ್ಕಾರ ಸೂಕ್ತ ಅನುದಾನ ಕೊಡದೆ ಕತ್ತು ಹಿಸುಕಿ ಕೊಲ್ಲುತ್ತಿದೆ. ಸಾರ್ವಜನಿಕ ಆರೋಗ್ಯಕ್ಕೆ ಜಿಡಿಪಿಯ ಶೇಕಡಾ ಒಂದರಷ್ಟು ಮಾತ್ರ ಖರ್ಚು ಮಾಡಲಾಗುತ್ತಿದೆ. ಇದು ನೀಡಲಾದ ಭರವಸೆಯ ಶೇಕಡಾ 5ಕ್ಕಿಂತ ಕಡಿಮೆಯಾಗಿದೆ. ಅದಕ್ಕೆ ಬದಲಾಗಿ ಖಾಸಗಿ ಆಸ್ಪತ್ರೆಗಳು ಮತ್ತು ವೈದ್ಯರನ್ನು ಅವಲಂಬಿತವಾದ ವಿಮಾ ಯೋಜನೆಯತ್ತ ಕೇಂದ್ರ ಸರ್ಕಾರ ಒಲವು ತೋರಿಸುತ್ತಿದೆ. ಈ ವಿಮಾ ಯೋಜನೆ ಆರೋಗ್ಯ ಸೇವೆಯ ಸೀಮಿತತೆ ಇರುವುದರಿಂದ ಸಾರ್ವಜನಿಕ ಹಣವು ವಿಮಾ ಪಾಲಿಸಿಗಳ ಮೂಲಕ ಖಾಸಗಿ ಕಂಪೆನಿಗಳ ಬೊಕ್ಕಸ ಸೇರುತ್ತದೆ.

ದೇಶದಲ್ಲಿ ಇಂದು ಕನಿಷ್ಟ ಮೂಲಭೂತ ಸೇವೆಯ ಕೊರತೆಯಿಂದ ದೊಡ್ಡ ಪ್ರಮಾಣದಲ್ಲಿ ಸಾವುಗಳು ಸಂಭವಿಸುತ್ತಿವೆ. ಉದಾಹರಣೆಗೆ

ಗ್ರಾಮೀಣ ಪ್ರದೇಶದಲ್ಲಿ ಪ್ರತಿ 10 ನಿಮಿಷಕ್ಕೊಮ್ಮೆ ಓರ್ವ ಮಹಿಳೆ ಹೆರಿಗೆ ಸಂದರ್ಭದಲ್ಲಿ ಸಾವನ್ನಪ್ಪುತ್ತಿದ್ದಾರೆ.

ಈಗ ತಾನೇ ಹುಟ್ಟಿದ ಮಕ್ಕಳಿಂದ ಐದು ವರ್ಷದ ವರೆಗಿನ ಮಕ್ಕಳ ಪೈಕಿ ಪ್ರತಿ ಗಂಟೆಗೆ 218 ಮಕ್ಕಳು ಸಾವನ್ನಪ್ಪುತ್ತಿವೆ.

ಗುಡ್ಡಗಾಡು ಪ್ರದೇಶಗಳಲ್ಲಿ ಹಾಗೂ ಈಶಾನ್ಯ ರಾಜ್ಯಗಳಲ್ಲಿ ಸಾವಿರಾರು ಮಂದಿ ಮಲೇರಿಯಾಕ್ಕೆ ಬಲಿಯಾಗುತ್ತಾರೆ. ಶುದ್ಧ ಕುಡಿಯುವ ನೀರಿನ ಕೊರತೆ ಹಾಗೂ ಶೌಚದ ವ್ಯವಸ್ಥೆ ಇಲ್ಲದಿರುವುದರಿಂದ ನೀರಿನಿಂದ ಹರಡುವ ಖಾಯಿಲೆಗಳು ವ್ಯಾಪಕವಾಗಿ ಹೆಚ್ಚುತ್ತಿವೆ. ಆದುದರಿಂದ ಆರೋಗ್ಯದ ಹಕ್ಕು ಶುದ್ಧ ಕುಡಿಯುವ ನೀರು ಮತ್ತು ಶೌಚದ ವ್ಯವಸ್ಥೆಯ ಹಕ್ಕಿನೊಂದಿಗೆ ತಾಳೆ ಹಾಕಿಕೊಂಡಿದೆ.

ಆದರೆ, 33 ಕೋಟಿ ಮನೆಗಳ ಸರ್ವೇ ಪ್ರಕಾರ, 57 ಶೇಕಡಾ ಮನೆಗಳಿಗೆ ನಳ್ಳಿ ನೀರಿನ ಸಂಪರ್ಕ ಇಲ್ಲ, 39 ಶೇಕಡಾ ಮನೆಗಳಿಗೆ ಅಡುಗೆ ಮನೆ ಇಲ್ಲ. 53 ಶೇಕಡಾ ಮನೆಗಳಿಗೆ ಶೌಚದ ವ್ಯವಸ್ಥೆ ಇಲ್ಲ.

ಜೀವನಾವಶ್ಯಕ ಔಷಧಿಗಳ ಬೆಲೆಗಳು ಗಗನಕ್ಕೇರುತ್ತಿವೆ. ಔಷಧಿ ಉದ್ಯಮವನ್ನು ಬಹುರಾಷ್ಟ್ರೀಯ ಕಂಪೆನಿಗಳು ಮತ್ತು ಕಾರ್ಪೊರೇಟ್ ಕಂಪೆನಿಗಳು ನಿಯಂತ್ರಿಸುವುದೇ ಇದಕ್ಕೆ ಮುಖ್ಯ ಕಾರಣ. ಔಷಧ ತಯಾರಿಸುವ ಐದು ಬಹುರಾಷ್ಟ್ರೀಯ ಕಂಪೆನಿಗಳ ಪೈಕಿ ಮೂರು ಹೇರಳ ಲಾಭವನ್ನು ಮಾಡುತ್ತಿವೆ. ಜೀವನಾವಶ್ಯಕ ಔಷಧ ಬೆಲೆಗಳನ್ನು ನಿಯಂತ್ರಿಸುವುದನ್ನು ಬಿಟ್ಟು, ಇಂತಹ ಕಂಪೆನಿಗಳಿಗೆ ಪೂರಕವಾದ ನೀತಿಗಳನ್ನು ಕೇಂದ್ರ ಸರ್ಕಾರ ಜಾರಿಗೆ ತರುತ್ತಿದೆ.

ಆರೋಗ್ಯ ಸೇವೆಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಬಜೆಟ್ ಅನುದಾನ ಹೆಚ್ಚಳ, ಖಾಸಗಿ ಆರೋಗ್ಯ ವಲಯವನ್ನು ನಿಯಂತ್ರಿಸಲು ಕಠಿಣ ಕ್ರಮ, ಜೀವನಾವಶ್ಯಕ ಔಷಧಗಳ ಬೆಲೆಯನ್ನು ನಿಯಂತ್ರಣ ಅಗತ್ಯವಾಗಿದೆ. ಜನರ ಜೀವನ ಗುಣಮಟ್ಟವನ್ನು ಉತ್ತಮಗೊಂಡಲ್ಲಿ ಜನರ ಆರೋಗ್ಯ ಮಟ್ಟವೂ ಸುಧಾರಿಸುತ್ತದೆ.

ಸಾಮಾಜಿಕ ನ್ಯಾಯ

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರು ಮತ್ತು ಮಹಿಳೆಯರಿಗೆ ಸಾಮಾಜಿಕ ನ್ಯಾಯ ಒದಗಿಸಲು ಸೂಕ್ತ ವೇದಿಕೆ ನಿರ್ಮಿಸಬೇಕಿದೆ. ಈ ಜನವಿಭಾಗದ ಅಭಿವೃದ್ಧಿಯಾಗದೆ ದೇಶದ ಪ್ರಗತಿ ಸಾಧ್ಯವಿಲ್ಲ. ರೈತ-ಕಾರ್ಮಿಕ ವರ್ಗಕ್ಕೆ ಮೂಲಭೂತವಾಗಿ ಈ ಜನವಿಭಾಗ ಬೆನ್ನೆಲುಬಾಗಿದೆ. ಆರ್ಥಿಕ ಶೋಷಣೆಯ ಜೊತೆಗೆ ಇವರು ಸಾಮಾಜಿಕವಾಗಿಯೂ ತಾರತಮ್ಯಕ್ಕೆ ಒಳಗಾಗುತ್ತಿದ್ದಾರೆ.

ಮಹಿಳೆಯರು, ಅದರಲ್ಲೂ ಮಹಿಳಾ ಕಾರ್ಮಿಕರು ಹೆಚ್ಚಾಗಿ ಬರ್ಬರ ಲೈಂಗಿಕ ದೌರ್ಜನ್ಯಕ್ಕೆ ಗುರಿಯಾಗುತ್ತಿದ್ದಾರೆ. ಮಹಿಳೆಯರ ಸಮಾನತೆ ಮತ್ತು ಸ್ವಾತಂತ್ರ್ಯದ ಹಕ್ಕುಗಳಿಗಾಗಿ ಮತ್ತು ದೌರ್ಜನ್ಯ-ಶೋಷಣೆಗಳ ವಿರುದ್ಧ ನಡೆಯುತ್ತಿರುವ ಹೋರಾಟಕ್ಕೆ ಸೌಹಾರ್ದ ಬೆಂಬಲ ಅಗತ್ಯವಾಗಿದೆ.

ಭ್ರಷ್ಟಾಚಾರ ತೊಲಗಿಸಿ

ಭ್ರಷ್ಟ ರಾಜಕಾರಣಿಗಳು, ಅಧಿಕಾರಶಾಹಿಗಳು ಮತ್ತು ಕಾರ್ಪೊರೇಟ್ ಜಗತ್ತಿನ ನಡುವಿನ ವಿಷಕಾರಿ ನಂಟನ್ನು ಬೆಳೆಸಲು ಸರ್ಕಾರದ ನೀತಿಗಳು ಪೂರಕವಾದ ವಾತಾವರಣ ನಿರ್ಮಾಣ ಮಾಡಿವೆ. ಭ್ರಷ್ಟಾಚಾರದ ಮೂಲಕ ಲಕ್ಷಾಂತರ ಕೋಟಿ ರೂಪಾಯಿಗಳನ್ನು ಲೂಟಿ ಮಾಡಲಾಗಿದೆ. 2 ಜಿ ಹಗರಣ ಮತ್ತು ಕಲ್ಲಿದ್ದಲು ಹಗರಣಗಳು ಸರ್ಕಾರದ ಖಜಾನೆಯಿಂದ 3.56 ಲಕ್ಷ ಕೋಟಿ ರೂಪಾಯಿಗಳನ್ನು ಲೂಟಿ ಮಾಡಿವೆ. ಇದಲ್ಲದೆ ಕಾಮನ್‌ವೆಲ್ತ್ ಗೇಮ್ಸ್ ಹಗರಣ, ಭೂ ಹಗರಣ, ಗಣಿ ಹಗರಣ ಇತ್ಯಾದಿ ಹಗರಣಗಳು. ಹೆಚ್ಚಿನ ಗಣಿ ಹಗರಣಗಳು ಬಿಜೆಪಿ ಆಡಳಿತದಲ್ಲಿರುವ ಕರ್ನಾಟಕ, ಮಧ್ಯಪ್ರದೇಶ ಮತ್ತು ಜಾರ್ಖಂಡ್‌ನಲ್ಲಿ ನಡೆದಿವೆ ಎಂಬುದೂ ಗಮನಾರ್ಹ.

ಇದಲ್ಲದೆ, ಕಳೆದ ಒಂದು ದಶಕದಲ್ಲಿ 5.7 ಲಕ್ಷ ಕೋಟಿ ರೂಪಾಯಿಗಳನ್ನು ಅಕ್ರಮವಾಗಿ ಭಾರತದಿಂದ ಹೊರಕ್ಕೆ ಕೊಂಡೊಯ್ಯಲಾಗಿದೆ ಎಂದು ಅಂದಾಜಿಸಲಾಗಿದೆ. ತೆರಿಗೆ ವಂಚಕರು, ಕಪ್ಪು ಹಣ ಹೊಂದಿರುವವರಿಂದಾಗಿ ದೇಶದ ಜನರಿಗೆ ಸೇರಿದ ಈ ಹಣ ಸ್ವಿಸ್ ಹಾಗೂ ಇತರ ರಾಷ್ಟ್ರದ ಬ್ಯಾಂಕ್‌ಗಳಲ್ಲಿ ಕೊಳೆಯುತ್ತಿವೆ. ಆದರೆ, ಸರ್ಕಾರ ಈ ಕಪ್ಪು ಹಣವನ್ನು ದೇಶಕ್ಕೆ ಮತ್ತೆ ತರುವ ಪ್ರಯತ್ನ ನಡೆಸಿಲ್ಲ. ಅಲ್ಲದೆ, ಇಂತಹ ಕ್ರಿಮಿನಲ್‌ಗಳ ವಿರುದ್ಧ ಕಠಿಣ ಕ್ರಮಕ್ಕೂ ಮುಂದಾಗುತ್ತಿಲ್ಲ. ದೊಡ್ಡ ಪ್ರಮಾಣದ ಮೊತ್ತವು ಶ್ರೀಮಂತರ ತೆರಿಗೆ ಬಾಕಿಯಾಗಿ ಉಳಿದುಬಿಟ್ಟಿದೆ.

ಭ್ರಷ್ಟಾಚಾರ ದೇಶದಲ್ಲಿ ಎಗ್ಗಿಲ್ಲದಂತೆ ಹೆಚ್ಚಾಗುತ್ತಿದೆ. ಆದರೆ, ಕೇಂದ್ರ ಸರ್ಕಾರವು ಪ್ರಬಲ ಲೋಕಪಾಲ್ ಮಸೂದೆಯನ್ನು ತರಲು ನಿರಾಕರಿಸುತ್ತಿದೆ. "ಸರ್ಕಾರಿ ಮಸೂದೆ" ಸರ್ಕಾರದ ನಿಯಂತ್ರಣದಲ್ಲಿದೆ ಎಂಬುದನ್ನು ದೃಢಪಡಿಸುತ್ತಿದೆ. ಇದು ದೇಶದ ಜನರ ಹಿತಾಸಕ್ತಿಗೆ

ಕೈಗಾರಿಕಾ ಉತ್ಪಾದನೆಯಲ್ಲಿ ತೀವ್ರ ಹಿಂಜರಿತ : ಕೃಷಿ ಉತ್ಪಾದನೆಯಲ್ಲಿ ತೀವ್ರ ಕುಸಿತ

ಬಿಜೆಪಿ ದರ್ಬಾರ್‌ನಲ್ಲಿ ರಾಜ್ಯ ಸರ್ವತೋಮುಖ ಅವನತಿಯತ್ತ



ಆರ್.ರಾಮಕೃಷ್ಣ

ನಾಡಿನ ಸಮಸ್ತ ಸಮಸ್ಯೆಗಳಿಗೂ ಬಿಜೆಪಿಯೇ ಪರಿಹಾರ. ಬಿಜೆಪಿ ಅಧಿಕಾರಕ್ಕೆ ಬಂದರೆ ಊರಿನ ರಸ್ತೆಗಳು ಥಳಥಳಿಸುವವು. ವಿದ್ಯುತ್ ಉತ್ಪಾದನೆ ಹೆಚ್ಚುವುದು. ಭ್ರಷ್ಟಾಚಾರವನ್ನು ಉಚ್ಚಾಟಿಸಿ ನಿರ್ಮೂಲನ ಮಾಡಲಾಗುವುದು. ರಾಜ್ಯದಲ್ಲಿ ರೈತಪರ ಸರ್ಕಾರವನ್ನು ಪ್ರತಿಷ್ಠಾಪಿಸಲಾಗುವುದು. ನಾಡಿನಲ್ಲಿ ಸಮೃದ್ಧಿಯು ಉಕ್ಕಿ ಹರಿಯುವುದು.

ದಕ್ಷಿಣ ಭಾರತದ ಮೊದಲ ಬಿಜೆಪಿ ಸರ್ಕಾರವನ್ನು ಕಂಡ ಕರ್ನಾಟಕದ ಅಭಿವೃದ್ಧಿ, ಸಮೃದ್ಧಿಯನ್ನು ಕಂಡು ಕರುಬಿ ಅಕ್ಕಪಕ್ಕದ ರಾಜ್ಯದ ಜನರೂ ಬಿಜೆಪಿ ಪಕ್ಷದ ಕಡೆಗೆ ವಾಲುವರು. ದಕ್ಷಿಣ ಭಾರತದಲ್ಲಿ ಬಿಜೆಪಿ ದಂಡಯಾತ್ರೆಗೆ ಕರ್ನಾಟಕವೇ ಹೆಬ್ಬಾಗಿಲು ಎಂಬ 2008 ರ ಸುಮಾರು 5 ವರ್ಷಗಳ ಹಿಂದಿನ ಬೊಬ್ಬೆಗಳನ್ನೆಲ್ಲ ಈಗ ನೆನಪಿಸಿಕೊಳ್ಳಬೇಕಾದ ಸಮಯ ಬರುತ್ತಿದೆ.

ಈಗ ಐದು ವರ್ಷಗಳ ಕಾಲ ಬಿಜೆಪಿ ಸರ್ಕಾರ ರಾಜ್ಯದಲ್ಲಿ ಅಧಿಕಾರ ನಡೆಸಿದ ಮೇಲೆ ಕರ್ನಾಟಕ ರಾಜ್ಯದ ಜನರ ಬದುಕು ಏನಾಗಿದೆ ರಾಜ್ಯ ಎಂಥಾ ಅಭಿವೃದ್ಧಿ ಅಂತ ಕೊಂಚ ಪರಿಶೀಲನೆ ನಡೆಸಬೇಕಾಗಿದೆ.

ನಾಚಿಕೆಗೆಟ್ಟ ಬಿಜೆಪಿ ಸಚಿವರು, ಮುಖ್ಯಮಂತ್ರಿಗಳು ಮುಂದಿನ ಚುನಾವಣೆಯನ್ನು ಬಿಜೆಪಿಯು ತನ್ನ ಸರ್ಕಾರದ ಸಾಧನೆಯ ಆಧಾರದಲ್ಲಿ ಎದುರಿಸುವುದು ಎಂದು ಈಗಲೂ ಹೇಳಿಕೊಂಡು ತಿರುಗುತ್ತಿದ್ದಾರೆ. ಇರಲಿ. ರಾಜ್ಯದಲ್ಲಿ ಬಿಜೆಪಿ ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ ಕೃಷಿಕ್ಷೇತ್ರ, ಕೈಗಾರಿಕಾ ಕ್ಷೇತ್ರ ಮತ್ತು ಸೇವಾಕ್ಷೇತ್ರಗಳಲ್ಲಿ ರಾಜ್ಯದಲ್ಲಿ ಆಗಿರುವ 'ಪ್ರಗತಿ' ಏನೆಂದು ನೋಡಿ.

ಕೃಷಿ ಬೆಳವಣಿಗೆ ಅಧೋಗತಿಗೆ:

2005–06 ರ ಸಾಲು ಮತ್ತು 2007–08 ರ ಸಾಲಿನ ನಡುವೆ ಅಂದರೆ ಮೂರು ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿ ಕೃಷಿ ಬೆಳವಣಿಗೆ ದರವು ಶೇ. ಸರಾಸರಿ 14.20 ರಷ್ಟು ಇತ್ತು. ಆದರೆ ಬಿಜೆಪಿ ಪಕ್ಷದ್ದೇ ಸರ್ಕಾರ ಬಂದ ಮೇಲಿನ ಐದು ವರ್ಷಗಳ ಅವಧಿಯಲ್ಲಿ ಅಂದರೆ 2008–09 ರಿಂದ 2011–12 ರ ಅವಧಿಯಲ್ಲಿ ಈ ಬೆಳವಣಿಗೆ ದರವು ವಾರ್ಷಿಕ ಸರಾಸರಿ ಶೇ. 11.35 ಕ್ಕೆ ಕುಸಿದಿದೆ. ಪ್ರತ್ಯೇಕ ಕೃಷಿ ಬಜೆಟ್, ಸುವರ್ಣಭೂಮಿ ಯೋಜನೆ, ರೈತರ ಸಾಲ ಮನ್ನಾ, ರೈತರಿಗೆ ಅತಿ ಕಡಿಮೆ ಬಡ್ಡಿದರದ ಸಾಲ ಯೋಜನೆ, ಸಾವಯವ ಕೃಷಿಗೆ ನೆರವು ಅಂತ ಏನೆಲ್ಲ ಮಂತ್ರ ಜಪಿಸಿದರೂ ಕೂಡ ಅನುದಾನ ನಿಜವಾದ ಅರ್ಥದಲ್ಲಿ ತಲುಪ ಬೇಕಾದ ಉದ್ದೇಶಕ್ಕೆ ಎಷ್ಟು ತಲುಪಿದೆ. ಘೋಷಿಸಿದ ನೆರವುಗಳು ನಿಜಕ್ಕೂ ರೈತರಿಗೆ ಎಷ್ಟರ ಮಟ್ಟಿಗೆ ನೆರವಾಗಿವೆ ಎಂಬುದಕ್ಕೆ ಈ ಕೃಷಿ ಬೆಳವಣಿಗೆ ಅಧೋಗತಿಯೇ ಸಾಕ್ಷಿ. ಕೃಷಿ ಅಭಿವೃದ್ಧಿ ಹೆಸರಿನಲ್ಲಿ ಈ ಸರ್ಕಾರ 'ಜಾಗತಿಕ ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶ' ನಡೆಸಿದ್ದನ್ನು ಇಲ್ಲಿ ನೆನಪು ಮಾಡಿಕೊಳ್ಳಬಹುದು.

ಕೈಗಾರಿಕಾ ಉತ್ಪಾದನೆಯಲ್ಲಿ ತೀವ್ರ ಹಿಂಜರಿತ

ಬಿಜೆಪಿ ಸರ್ಕಾರ ತನ್ನ ಅವಧಿಯಲ್ಲಿ ಎರಡು ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶಗಳನ್ನು ಮಾಡಿದೆ. ಕೈಗಾರಿಕಾ ಅಭಿವೃದ್ಧಿ , ಉದ್ಯೋಗ ಸೃಷ್ಟಿಯ ಅಲ್ಲಿ ಬಗೆಗೆ ಉದ್ದುದ್ದ ಭಾಷಣಗಳನ್ನು ಬಿಗಿಯಲಾಗಿದೆ. ನೋಂದಾಯಿತ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ) ಉತ್ಪಾದನಾ ವಲಯದಲ್ಲಿ ಇದೇ 2005–06 ಮತ್ತು 2007–08ರ ನಡುವಿನ ಅವಧಿಯಲ್ಲಿ ವಾರ್ಷಿಕ ಸಾರಾಸರಿ ಶೇ. 17.63 ರಷ್ಟಿದ್ದ ಬೆಳವಣಿಗೆ ದರವು ಬಿಜೆಪಿ ಅವಧಿಯಲ್ಲಿ ವಾರ್ಷಿಕ ಸರಾಸರಿ ಶೇ. 9.55 ಕ್ಕೆ ಕುಸಿದಿದೆ. ನೋಂದಾಯಿಸದ (ಸಣ್ಣ ಉದ್ದಿಮೆಗಳ) ಉತ್ಪಾದನಾ ವಲಯದಲ್ಲಿ ಮಾತ್ರ ಬೆಳವಣಿಗೆ ದರ 14.07 ರಿಂದ 14.28 ಕ್ಕೆ ತಲುಪಿದೆ. ಅಂದರೆ ಕೊಂಚ ಮಾತ್ರ ಪ್ರಗತಿ. ಸಹಜವಾಗಿಯೇ ಹೆಚ್ಚಿನ ಬೆಳವಣಿಗೆ ದಾಖಲಾಗಬೇಕಾಗಿದ್ದ ಮತ್ತೊಂದು ಕ್ಷೇತ್ರ ಸೇವಾ ವಲಯ. ಅಂದರೆ ಶಿಕ್ಷಣ ಸೇವೆ, ಆರೋಗ್ಯ ಸೇವೆ, ಕಾನೂನು ಸೇವೆ ಮುಂತಾದವುಗಳನ್ನೊಳಗೊಳ್ಳುವ ಈ ವಲಯದಲ್ಲಿ ಬೆಳವಣಿಗೆ ದರವು ಶೇ.17.63 ಇದ್ದದ್ದು ಬಿಜೆಪಿ ಅವಧಿಯಲ್ಲಿ ಇಳಿಕೆಯಾಗಿ 17.35ಕ್ಕೆ ಕುಸಿದಿದೆ.

ಈ ಮೇಲೆ ವಿವರಿಸಿದ ಎಲ್ಲ ವಲಯದ ಒಟ್ಟು ಬೆಳವಣಿಗೆಯನ್ನು ಒಳಗೊಳ್ಳುವ 'ರಾಜ್ಯದ ಒಟ್ಟು ಆಂತರಿಕ ಉತ್ಪಾದನೆ'(ಜಿಎಸ್‌ಡಿಪಿ)ಯು ಹಿಂದಿನ ಅವಧಿಯಲ್ಲಿ ಶೇ. 16.20 ಇದ್ದದ್ದು ಬಿಜೆಪಿ ಅವಧಿಯಲ್ಲಿ 13.33 ಕುಸಿದಿದೆ.

ಆರ್ಥಿಕ ಹಿನ್ನಡೆಗೆ 2008ರಲ್ಲಿ ಕಂಡು ಬಂದ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಕೊಡುಗೆಯೂ ಒಂದಷ್ಟು ಇದೆ ಎಂಬ ವಿಷಯವನ್ನು ನಾವು ಇಲ್ಲಿ ಮರೆಮಾಚಬೇಕಿಲ್ಲ. ಆದರೆ ಬಿಕ್ಕಟ್ಟಿನ ಪರಿಣಾಮದಿಂದ ಸಂಕಷ್ಟಕ್ಕೊಳಗಾದ ಜನರ ನೆರವಿಗೆ ಧಾವಿಸಿ ಸೂಕ್ತ ಪರಿಹಾರ ಕ್ರಮಗಳು ಜನಪರ ಕಾರ್ಯಯೋಜನೆಯ ಮೂಲಕ ರಾಜ್ಯದ ಆರ್ಥಿಕ–ಅಭಿವೃದ್ಧಿ, ಮಾನವ ಅಭಿವೃದ್ಧಿಯನ್ನು ಮುಂದಕ್ಕೊಯ್ಯುವ ಗಂಭೀರ ಜವಾಬ್ದಾರಿ ರಾಜ್ಯದ ಅಧಿಕಾರದ ಚುಕ್ಕಾಣಿ ಹಿಡಿದ ಬಿಜೆಪಿ ಸರ್ಕಾರದ ಮೇಲಿತ್ತು. ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಕುರ್ಚಿ ಕಿತ್ತಾಟ, ಭಿನ್ನಮತ, ಚೆಲ್ಲಾಟಗಳಲ್ಲೇ ಕಾಲ ಕಳೆದ ಬಿಜೆಪಿ ಸರ್ಕಾರ ರಾಜ್ಯದ ಆರ್ಥಿಕತೆಯನ್ನು ಅಧೋಗತಿಗೆ ತಳ್ಳಿ ಜನತೆ ಇಟ್ಟ ವಿಶ್ವಾಸಕ್ಕೆ ದ್ರೋಹ ಬಗೆದಿದೆ.

ಮಾನವ ಅಭಿವೃದ್ಧಿ ಬೆಳವಣಿಗೆ

ಹತ್ತೊಂಬತ್ತು ಪ್ರಮುಖ ರಾಜ್ಯಗಳ ಮಾನವ ಅಭಿವೃದ್ಧಿ ವರದಿ–2011 ಅನ್ನು ಕೈಲಿ ಹಿಡಿದು ಕೊಂಡು ಪರಿಶೀಲಿಸಿ ನೋಡಿದರೂ ಕೂಡ ಕರ್ನಾಟಕದ್ದು ನಿರಾಶಾದಾಯಕ ಪರಿಸ್ಥಿತಿ. ಎಂದಿನಂತೆ ಮಾನವ ಅಭಿವೃದ್ಧಿಯಲ್ಲಿ ಕೇರಳ ರಾಜ್ಯ ಮುಂಚೂಣಿಯಲ್ಲಿದೆ. ಕೇರಳದ್ದು ಮೊದಲ ಸ್ಥಾನವಾದರೆ, ನೆರೆಯ ತಮಿಳು ನಾಡಿನದ್ದು ಆರನೇ ಸ್ಥಾನ. ಕರ್ನಾಟಕಕ್ಕೆ ಮಾತ್ರ 10 ನೇ ಸ್ಥಾನ. ಕರ್ನಾಟಕದ ಘನತೆಗೆ ಇದು ಖಂಡಿತ ಶೋಭೆ ತರುವ ವಿಚಾರವಲ್ಲ. ಏಕೆಂದರೆ ಕರ್ನಾಟಕ ರಾಜ್ಯವು ಸ್ವಾತಂತ್ರ್ಯಪೂರ್ವ ಕಾಲದಿಂದಲೂ ಶೈಕ್ಷಣಿಕ ಮತ್ತು ಕೈಗಾರಿಕಾ ಅಭಿವೃದ್ಧಿಯ ವಿಷಯದಲ್ಲಿ ಇತರ ಹಲವು ರಾಜ್ಯಗಳಿಗಿಂತ ಮುಂದೆ ಇದ್ದ ರಾಜ್ಯ. ಇಂತಹ ಅನುಕೂಲವನ್ನು ಬಳಸಿಕೊಂಡು ರಾಜ್ಯದಲ್ಲಿ ಮಾನವ ಅಭಿವೃದ್ಧಿಯನ್ನು ಸಾಧಿಸುವಲ್ಲಿ ರಾಜ್ಯ ಬಿಜೆಪಿ ಸರ್ಕಾರ ದಯನೀಯವಾಗಿ ಸೋತಿದೆ ಎಂದು ಈ ಮಾನವ ಅಭಿವೃದ್ಧಿ ವರದಿ ಹೇಳುತ್ತಿದೆ. ಇಂಥ ಒಂದು ಜನದ್ರೋಹಿ ರಾಜಕೀಯ ಪಕ್ಷಕ್ಕೆ ಯಾವ ರೀತಿ ಪಾಠವನ್ನು ಕಲಿಸಬೇಕೆಂದು ಜನ ಈಗಿನಿಂದಲೇ ಯೋಜಿಸಿ ಸಿದ್ಧವಾಗಿಬೇಕಿದೆ.

➡

ವಿರುದ್ಧವಾಗಿದೆ. ಭ್ರಷ್ಟಾಚಾರಕ್ಕೆ ಅಂತ್ಯವಾಡುವುದು ಮತ್ತು ಪ್ರಬಲ ಲೋಕಪಾಲ್ ಮಸೂದೆ ಜಾರಿ ದೇಶದ ತುರ್ತು ಅಗತ್ಯವಾಗಿದೆ. ಇದೇ ವೇಳೆ, ಭ್ರಷ್ಟಾಚಾರವು ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯ ಕಾರ್ಯನಿರ್ವಹಣೆಯಲ್ಲೂ ಪ್ರಭಾವ ಬೀರಿದೆ. ಚುನಾವಣೆ ಸಮಯದಲ್ಲಿ ದೊಡ್ಡ ಪ್ರಮಾಣದ ಕಪ್ಪು ಹಣದ ಬಳಕೆಯಿಂದಾಗಿ ಪ್ರಜಾಸತ್ತಾತ್ಮಕ ವ್ಯವಸ್ಥೆ ಬುಡಮೇಲಾಗುತ್ತಿದೆ. ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ರಕ್ಷಿಸಲು ಕಪ್ಪು ಹಣದ ಬಳಕೆಯನ್ನು ನಿಗ್ರಹಿಸುವ ಸಮಗ್ರ ಚುನಾವಣಾ ಸುಧಾರಣೆಗಳನ್ನು ಜಾರಿಗೆ ತರಬೇಕಾಗಿರುವುದು ತೀರಾ ಅಗತ್ಯವಾಗಿದೆ.

ಮುಂದಿನ ಹಾದಿ

ತನ್ನ ಬಳಿ ಇದಕ್ಕೆಲ್ಲ ಹಣವಿಲ್ಲ ಎಂದು ಹೇಳಿ ಜನರ ಈ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ನಿರಾಕರಿಸುತ್ತಿದೆ. ಇದು ಬರೀ ಬೊಗಳೆ, ಶುದ್ಧ ಶುಳ್ಳು. ಶ್ರೀಮಂತರಿಗೆ ಸಬ್ಸಿಡಿ ನೀಡಲು ಧಾವಂತ ತೋರುವ ಸರ್ಕಾರ ಬಡವರಿಗೆ ಸಿಗುತ್ತಿರುವ ಸಬ್ಸಿಡಿಗಳಿಗೆ ಕತ್ತರಿ ಹಾಕಲು ಹೊರಟಿದೆ. 2009 ರಿಂದ ಇಲ್ಲಿಯವರೆಗೆ ಕೇಂದ್ರ ಸರ್ಕಾರ 20,000 ಲಕ್ಷ ಕೋಟಿ ರೂಪಾಯಿ ತೆರಿಗೆ ರಿಯಾಯಿತಿಗಳನ್ನು ಪ್ರಕಟಿಸಿದೆ. ಇದು ಮುಖ್ಯವಾಗಿ ಶ್ರೀಮಂತರಿಗೆ ನೀಡಿದ ನೇರ ಲಾಭವಾಗಿದೆ.

ದೇಶದಲ್ಲಿ ಸಂಪನ್ಮೂಲಗಳಿಗೆ ಯಾವುದೇ ಕೊರತೆ ಇಲ್ಲ. ಆದರೆ ಅವನ್ನು ಶ್ರೀಮಂತರ ಪರವಾಗಿ ಬಳಸಲಾಗುತ್ತಿದೆ. ಇದರಿಂದ ಜನಸಾಮಾನ್ಯರ ಮೂಲಭೂತ ಹಕ್ಕುಗಳನ್ನು ಈಡೇರಿಸಲು ಆಗುತ್ತಿಲ್ಲ.

ಶ್ರೀಮಂತರು ಮತ್ತು ಅತಿ ಶ್ರೀಮಂತರಿಗೆ ನೀಡಲಾಗುತ್ತಿರುವ ತೆರಿಗೆ ವಿನಾಯಿತಿಗಳಿಗೆ ತಡೆ ಬೀಳಬೇಕಿದೆ. ಭ್ರಷ್ಟಾಚಾರಿಗಳನ್ನು ಕಠಿಣವಾಗಿ ಶಿಕ್ಷಿಸಿ; ಭ್ರಷ್ಟತೆಯಿಂದ ಆದ ನಷ್ಟವನ್ನು ಅವರಿಂದಲೇ ಭರಿಸಲು ಕ್ರಮ ಕೈಗೊಳ್ಳುವಂತೆ ಮಾಡಲು ಮತ್ತು ಸ್ವಿಸ್ ಬ್ಯಾಂಕ್‌ನಲ್ಲಿ ಇರುವ ಕಪ್ಪು ಹಣವನ್ನು ಮರಳಿ ದೇಶಕ್ಕೆ ತರುವಂತೆ ಮಾಡಲು ಜನತೆ ಒತ್ತಡ ಹೇರಬೇಕಿದೆ.

ಹೀಗೆ ಹರಿದು ಬಂದ ಹಣವನ್ನು ಅಥವಾ ಸಂಪನ್ಮೂಲವನ್ನು ದೇಶದ ಜನರ ಜೀವನದ ಮೂಲಭೂತ ಹಕ್ಕುಗಳನ್ನು ಪೂರೈಸಲು ಬಳಸಬೇಕೆಂದು ಆಗ್ರಹಿಸಬೇಕಿದೆ.

ನಾಲ್ಕು ದೇಶವ್ಯಾಪಿ ಜಾಥಾಗಳು

ದೇಶದಲ್ಲಿ ನಾಲ್ಕು ಮೂಲೆಗಳಿಂದ ನಾಲ್ಕು ಸಂಘರ್ಷ ಸಂದೇಶ ಜಾಥಾಗಳನ್ನು ಹಮ್ಮಿಕೊಳ್ಳಲಾಗಿದೆ. ಈ ನಾಲ್ಕು ಜಾಥಾಗಳು ದೇಶದ ಎಲ್ಲ ರಾಜ್ಯಗಳಲ್ಲೂ ಸಂಚರಿಸಲಿವೆ. ಈ ಸಂದರ್ಭದಲ್ಲಿ ಆಯಾ ರಾಜ್ಯದ ಗ್ರಾಮ, ಪಟ್ಟಣಗಳಿಂದ ಆರಂಭವಾಗುವ ಜಾಥಾಗಳೂ ಈ ಮುಖ್ಯ ಜಾಥಾಕ್ಕೆ ಬೆಸೆದುಕೊಳ್ಳಲಿವೆ. ಮಾರ್ಚ್ 19ರಂದು ಈ ನಾಲ್ಕೂ ಜಾಥಾಗಳೂ ದೆಹಲಿಯಲ್ಲಿ ಬೃಹತ್ ರ್‍ಯಾಲಿಯ ಮೂಲಕ ಸಮ್ಮಿಳಿತಗೊಳ್ಳಲಿವೆ.

ಈ ಜಾಥಾಗಳು ದೇಶದ ಜನರ ಐಕ್ಯತೆ ಮತ್ತು ಮೂಲಭೂತ ಹಕ್ಕುಗಳ ಸಂಕೇತವಾಗಿವೆ. ಜಾತ್ಯತೀತ ಆಶಯಗಳ ಪರವಾಗಿ, ಕೋಮುವಾದದ ವಿರುದ್ಧದ ಧ್ವನಿಯಾಗಿ, ಕಾಂಗ್ರೆಸ್ ಮತ್ತು ಬಿಜೆಪಿ ಸರ್ಕಾರಗಳು ಅನುಸರಿಸುತ್ತಿರುವ ಜನವಿರೋಧಿ ಆರ್ಥಿಕ ನೀತಿಗಳ ವಿರುದ್ಧದ ಆಕ್ರೋಶದ ಕೂಗಾಗಿ, ಈ ನೀತಿಗಳನ್ನು ಬದಲಾಯಿಸುವ ಹಕ್ಕೊತ್ತಾಯವಾಗಿ ಈ ಜಾಥಾ ಮೂಡಿಬರಲಿದೆ

ಬೆದರಿಕೆ, ಒತ್ತಡಗಳನ್ನು ಮೀರಿದ ಮುಷ್ಕರ...

ಪುಟ 1 ರಿಂದ

ಜಿಲ್ಲೆಯ ಗಂಗಾವತಿ, ಕೊಪ್ಪಳ, ಕುಷ್ಟಗಿ ಮತ್ತು ಯಲಬುರ್ಗಾ ಸಂಪೂರ್ಣ ಬಂದ್ ಆಗಿದೆ. ದಾವಣಗೆರೆ ಹೊನ್ನಳಿ, ಹರಿಹರ, ಚನ್ನಗಿರಿ, ಹರಪನಳ್ಳಿ ಮತ್ತು ದಾವಣಗೆರೆ ತಾಲ್ಲೂಕುಗಳು ಸಂಪೂರ್ಣ ಬಂದ್ ಆಗಿದೆ.

ಕೊಡಗು ಜಿಲ್ಲೆಯ ವೀರಾಜಪೇಟೆ, ಸಿದ್ದಾಪುರ, ಮಡಿಕೇರಿ ಸಂಪೂರ್ಣ ಬಂದ್ ಆಗಿವೆ. ಬಿಜಾಪುರ ಜಿಲ್ಲೆಯ ಬಿಜಾಪುರ, ಮುದ್ದೇಬಿಹಾಳ, ಇಂಡಿ ಮತ್ತು ಸಿಂಧಗಿ ಸಂಪೂರ್ಣ ಬಂದ್ ಆಗಿದೆ. ಹಾಸನ ಜಿಲ್ಲೆಯ ಹಾಸನ, ಅರಕಲಗೂಡು, ಬೇಲೂರು ಮತ್ತು ಹೊಳೆನರಸೀಪುರ ತಾಲೂಕುಗಳು ಸಂಪೂರ್ಣ ಬಂದ್ ಆಗಿದೆ. ಚಿತ್ರದುರ್ಗಾ ಜಿಲ್ಲೆಯ ಹಿರಿಯೂರು, ಚಳ್ಳಕೆರೆ, ಚಿತ್ರದುರ್ಗಾ ಬಂದ್ ಆಗಿದೆ.

ಬಳ್ಳಾರಿ ಜಿಲ್ಲೆಯ ಬಳ್ಳಾರಿ, ಹೊಸಪೇಟೆ, ಹಗರಿಬೊಮ್ಮನಳ್ಳಿ, ಶಿರುಗುಪ್ಪ, ಸಂಡೂರು, ಕೂಡ್ಲಿಗಿ, ಹಡಗಲಿ ತಾಲ್ಲೂಕುಗಳು ಸಂಪೂರ್ಣ ಬಂದ್ ಆಗಿದೆ. ರಾಯಚೂರು ಜಿಲ್ಲೆಯ ರಾಯಚೂರ, ಸಿಂಧನೂರು, ದೇವದುರ್ಗಾ, ಲಿಂಗಸುಗೂರು, ಮಾನ್ವಿ ತಾಲ್ಲೂಕುಗಳು ಸಂಪೂರ್ಣ ಬಂದ್ ಆಗಿದೆ. ತುಮಕೂರು ಜಿಲ್ಲೆಯ ತುಮಕೂರು, ಕುಣಿಗಲ್ ಮತ್ತು ಕೊರಟಗೆರೆ ತಾಲ್ಲೂಕು ಸಂಪೂರ್ಣ ಬಂದ್ ಆಗಿದೆ. ಮೈಸೂರು ಜಿಲ್ಲೆಯ ಮೈಸೂರು, ಹುಣಸೂರು ಮತ್ತು ನಂಜನಗೂಡು ತಾಲೂಕುಗಳು ಸಂಪೂರ್ಣ ಬಂದ್ ಆಗಿದೆ.

ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕು ಸಂಪೂರ್ಣ ಬಂದ್ ಆಗಿದೆ ಅಂದರೆ ರಾಜ್ಯದಲ್ಲಿ 69 ತಾಲ್ಲೂಕು ಕೇಂದ್ರಗಳು, 14 ಜಿಲ್ಲಾ ಕೇಂದ್ರಗಳು ಬಂದ್ ಆಗಿದೆ. ರಾಜ್ಯದ ಹೆಚ್ಚು ಕಡಿಮೆ 176 ತಾಲೂಕು ಕೇಂದ್ರಗಳಲ್ಲಿ ತೀವ್ರ ಪ್ರತಿಭಟನೆಗಳು ನಡೆದಿವೆ.

ಕೈಗಾರಿಕಾ ರಂಗ : ಸಾರ್ವಜನಿಕ ಕೈಗಾರಿಕೆಗಳಲ್ಲಿ ಬಿಇಎಂಎಲ್ ನ 4 ಘಟಕಗಳು ಒಂದು ದಿನ ಸಂಪೂರ್ಣ ಬಂದ್ ಆಗಿವೆ. ಬಿಇಎಲ್‌ನಲ್ಲಿ ಸಿಐಟಿಯು ವಿನ ಸದಸ್ಯರು ಮುಷ್ಕರದಲ್ಲಿ ಭಾಗವಹಿಸಿದ್ದಾರೆ.

ಬೆಂಗಳೂರಿನ ಐಟಿಸಿ, ಜಿಂದಾಲ್, ವಿಡಿಯಾ, ಬಾಷ್(ಮೈಕೋ) ನಾಗನಾಥಪುರ ಬಾಷ್, ಎಲ್&ಟಿ, ಫೆಡರಲ್ ಮೊಘಲ್, ಐಟಿ-ಬಿಟಿ ಕೈಗಾರಿಕೆಗಳು, ವೋಲ್ವೋ ಕಂಪನಿಗಳು ಸಂಪೂರ್ಣ ಬಂದ್ ಆಗಿವೆ.

ಬೆಂಗಳೂರು ಜಿಲ್ಲೆಯ ಪೀಣ್ಯ-ದಾಸರಹಳ್ಳಿ, ನೆಲಮಂಗಲ, ಬೊಮ್ಮನಳ್ಳಿ, ಎಲೆಕ್ಟ್ರಾನಿಕ್ ಸಿಟಿ, ಹೊಸೂರು, ಹೊಸಕೋಟೆ, ದೊಡ್ಡಬಳ್ಳಾಪುರ ಮತ್ತು ಕುಂಬಳಗೋಡು ಕೈಗಾರಿಕಾ ಪ್ರದೇಶಗಳು ಸಂಪೂರ್ಣ ಬಂದ್ ಆಗಿವೆ.

ಮೈಸೂರು ಮತ್ತು ನಂಜನಗೂಡಿನಲ್ಲಿ 90% ಕೈಗಾರಿಕೆಗಳು ಮುಷ್ಕರದಲ್ಲಿ ಪಾಲ್ಗೊಂಡಿವೆ. ವಿಕ್ರಾಂತ್ ಟೈರ್ಸ್, ರೀಡ್ ಅಂಡ್ ಟೇಲರ್, ಬೆಳಗಾಂ ಹಿಂದುಸ್ಥಾನ ಲೇಟೆಕ್ಸ್, ಗುಲ್ಬರ್ಗಾದ ರಾಜಶ್ರೀ, ಹಟ್ಟಿ ಗೋಲ್ಡ್ ಮೈನ್ಸ್, ರಾಯಚೂರಿನ ಶಕ್ತಿನಗರ (ಆರ್‌ಟಿಪಿಸಿಎಲ್) ಸಂಪೂರ್ಣ ಬಂದ್ ಆಗಿದೆ.

ರಸ್ತೆ ಸಾರಿಗೆ : ರಾಜ್ಯದಲ್ಲಿ 60% ಬಸ್‌ಗಳು ಬೀದಿಗಿಳಿದಿಲ್ಲ, ಬೆಂಗಳೂರಿನಲ್ಲಿ ಬಿಎಂಟಿಸಿ ಬಸ್‌ಗಳು 25% ರಿಂದ 40% ರಷ್ಟು ಓಡಾಡಿವೆ.

ಆದರೆ ಬಸ್ ಹತ್ತುವ ಜನರ ಸಂಖ್ಯೆ ಬಹಳ ವಿರಳವಾಗಿತ್ತು. ಆಟೋಗಳು ಸುಮಾರು 63 ತಾಲೂಕು ಮತ್ತು ಹೋಬಳಿ ಕೇಂದ್ರಗಳಲ್ಲಿ ಮುಷ್ಕರ ನಡೆಸಿದ್ದಾರೆ. ಸುಮಾರು 2 ಲಕ್ಷ ಆಟೋಗಳು ಬೀದಿಗೆ ಇಳಿದಿಲ್ಲ. ಬೆಂಗಳೂರು ನಗರದಲ್ಲಿ 99% ರಷ್ಟು ಆಟೋಗಳು ಮುಷ್ಕರದಲ್ಲಿ ಪಾಲ್ಗೊಂಡಿವೆ. 146 ಎಪಿಎಂಸಿಗಳಲ್ಲಿ 90% ವ್ಯವಹಾರ ಸ್ಥಗಿತವಾಗಿ ಸಂಪೂರ್ಣ ಬಂದ್ ಆಗಿದೆ. ಕಟ್ಟಡ ಕಾರ್ಮಿಕರು ಕೆಲಸ ಸ್ಥಗಿತ ಗೊಳಿಸಿದ್ದಾರೆ. 5,600 ಪಂಚಾಯ್ತಿಗಳಲ್ಲಿ 5,000 ಪಂಚಾಯತಿಗಳು ಕೆಲಸ ಮಾಡಿಲ್ಲ. 60 ಸಾವಿರ ಅಂಗನವಾಡಿ ಕೇಂದ್ರಗಳು ಸಂಪೂರ್ಣ ಬಂದ್ ಆಗಿದೆ. ಸಾವಿರಾರು ಜನ ಬಿಸಿಯೂಟ ನೌಕರರು ಬೀಡಿ ಕಾರ್ಮಿಕರು ಮುಷ್ಕರದಲ್ಲಿ ಪಾಲ್ಗೊಂಡಿದ್ದಾರೆ. ಮುನ್ಸಿಪಲ್ ಚುನಾವಣೆಗಳು ಇದ್ದರೂ ಕೂಡಾ 50 ಮುನ್ಸಿಪಾಲಿಟಿಗಳಲ್ಲಿ ಗುತ್ತಿಗೆ ಕಾರ್ಮಿಕರು ಕೆಲಸ ನಿರ್ವಹಿಸಿಲ್ಲ.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಬೆಂಬಲ ಕೊಡದಿದ್ದರೂ ಅದರ ಸದಸ್ಯರು ಬೆಂಬಲ ಕೊಟ್ಟದರ ಫಲವಾಗಿ ವಿಧಾನಸೌದ, ವಿಕಾಸಸೌಧ, ಬಹುಮಹಡಿಗಳ ಕಟ್ಟಡ ಮತ್ತು ರಾಜ್ಯದ ಹಲವಾರು ರಾಜ್ಯ ಸರ್ಕಾರದ ಕಛೇರಿಗಳಲ್ಲಿ ಕೆಲಸ ನಡೆಯಲಿಲ್ಲ. ರಾಜ್ಯದಲ್ಲಿ 40,000 ಬ್ಯಾಂಕ್ ನೌಕರರರು 6,000 ಜನ ವಿಮಾ ಮತ್ತು ಸಾಮಾನ್ಯ ವಿಮಾ ನೌಕರರು. ಕೇಂದ್ರ ಸರ್ಕಾರದ ಇಲಾಖೆಗಳಾದ ಅಂಚೆ, ಆದಾಯ ತೆರಿಗೆ, ಗ್ರೌಂಡ್ ವಾಟರ್, ಸಿಜಿಹೆಚ್‌ಎಸ್ ಇನ್ನು ಮುಂತಾದ ಇಲಾಖೆಗಳ ನೌಕರರು 30 ಸಾವಿರಕ್ಕಿಂತಲೂ ಹೆಚ್ಚು ನೌಕರರರು ಈ ಮುಷ್ಕರದಲ್ಲಿ ಪಾಲ್ಗೊಂಡಿದ್ದಾರೆ. ಬಿಎಸ್‌ಎನ್‌ಎಲ್ ನ ಸುಮಾರು 7 ಸಾವಿರ ಜನರು ಭಾಗವಹಿಸಿದ್ದಾರೆ. ಫೆಬ್ರವರಿ 21 ರಂದು ಕುಂದಾಪುರ, ಚಳ್ಳಕೆರೆ ಸಂಪೂರ್ಣ ಬಂದ್ ಆಗಿ ಬಸವಕಲ್ಯಾಣ, ರಾಮದುರ್ಗಾ, ಹೊಸಪೇಟೆ, ಹಗರಿಬೊಮ್ಮನಹಳ್ಳಿ ಗೋಕಾಕ್‌ಗಳಲ್ಲಿ ಅರ್ಧ ದಿನ ಬಂದ್ ಆಗಿದೆ.

ರಾಜ್ಯದ ಎಲ್ಲ ಜಿಲ್ಲೆ ಮತ್ತು ತಾಲ್ಲೂಕಗಳಲ್ಲಿ ಕನಿಷ್ಠ 500 ರಿಂದ 2500 ಜನರ ಮೆರವಣಿಗೆ, ರಸ್ತೆತಡೆ, ರೈಲುತಡೆಗಳು ನಡೆದಿವೆ. ಮಂಗಳೂರಿನ ವಿಮಾನ ನಿಲ್ದಾಣದ ಗುತ್ತಿಗೆ ಕಾರ್ಮಿಕರು ಕೆಲಸ ನಿಲ್ಲಿಸಿ ಈ ಬಂದ್‌ನಲ್ಲಿ ಪಾಲ್ಗೊಂಡಿದ್ದಾರೆ. ಈ ಮುಷ್ಕರವನ್ನು ಮುರಿಯಲು ದೇಶದ ಪ್ರಧಾನ ಮಂತ್ರಿಗಳಿಂದ ಹಿಡಿದು ತಾಲ್ಲೂಕಿನ ತಹಶೀಲ್ದಾರರ ತನಕ ಯತ್ನಿಸಿದ್ದಾರೆ. ಮುಷ್ಕರದಲ್ಲಿ ಪಾಲ್ಗೊಂಡ ಕೇಂದ್ರ ಸರ್ಕಾರಿ ನೌಕರರ ಹೆಸರುಗಳನ್ನು ಕೊಡಬೇಕೆಂದೂ ಬೆದರಿಸಿದ್ದಾರೆ. ರಾಜ್ಯದಲ್ಲಿ ಮುನ್ಸಿಪಾಲಿಟಿ ಮತ್ತು ಮಹಾನಗರ ಪಾಲಿಕೆ ಚುನಾವಣೆಗಳು ಇರುವುದರಿಂದ ತಾಲೂಕು ಕೇಂದ್ರಗಳಲ್ಲಿ ಬಂದ್ ಮಾಡಬಾರದು, ಪ್ರತಿಭಟನೆ ಮಾಡಬಾರದು. ನಿಮ್ಮದು ಕೆಂಪು ಬಾವುಟ, ಇದು ಕಮ್ಯುನಿಸ್ಟ್ ಪಕ್ಷದ್ದು ಎಂದೆಲ್ಲಾ ಕೆಲವು ತಾಲ್ಲೂಕಿನ ಅಧಿಕಾರಿಗಳು ಮತ್ತು ಪೋಲಿಸ್ ಅಧಿಕಾರಿಗಳು ಬೆದರಿಸಿದ್ದಾರೆ. ಚಿತ್ತಾಪುರ ತಾಲೂಕಿನಲ್ಲಿ ಅಂಗನವಾಡಿ ಮತ್ತು ಬಿಸಿಯೂಟದವರು ಯಾರು ಮುಷ್ಕರದಲ್ಲಿ ಪಾಲ್ಗೊಂಡಿದ್ದೀರೋ ಅವರನ್ನು ಕೆಲಸದಿಂದ ವಜಾ ಮಾಡುತ್ತೇವೆಂದೂ ಬೆದರಿಸಿದ್ದಾರೆ.

ಹಲವು ಜಿಲ್ಲಾ ಪೋಲಿಸ್ ಅಧಿಕಾರಿಗಳು ಜೆ.ಸಿ.ಟಿ.ಯು. ಪಿನ ನಾಯಕರ ಚರ್ಚೆ ಮಾಡಿ ಬಹಳಷ್ಟು ಷರತ್ತುಗಳನ್ನು ವಿಧಿಸಿದ್ದಾರೆ. ಆದರೆ ಕಾರ್ಮಿಕ ವರ್ಗ ಇದ್ಯಾವ ಬೆದರಿಕೆಗೂ ಜಗ್ಗದೆ ರಾಜ್ಯದಲ್ಲಿ ಸುಮಾರು 2.5 ಕೋಟಿ ಕಾರ್ಮಿಕರು ಮತ್ತು ದೇಶದಲ್ಲಿ ಹತ್ತಾರು ಕೋಟಿ ಕಾರ್ಮಿಕರು ಮತ್ತು ನೌಕರರು ಈ ಮುಷ್ಕರದಲ್ಲಿ ಪಾಲ್ಗೊಂಡಿದ್ದಾರೆ. ಕೈಗಾರಿಕೆಗಳ ಮಹಾಸಂಘ (ಅಸೋಚಾಂ) ಮತ್ತು ಸರ್ಕಾರದ ಪ್ರತಿನಿಧಿಗಳು ಕಾರ್ಮಿಕರು ಮುಷ್ಕರ ಹೂಡಿದರೆ 26 ಸಾವಿರ ಕೋಟಿ ನಷ್ಟ ಎಂದಿದ್ದಾರೆ. ಹಾಗಿದ್ದರೆ ಕಾರ್ಮಿಕರು, ದುಡಿಯುವ ಜನರ ದುಡಿಮೆಯಿಂದ ಮಾಲೀಕರಿಗೆ ಸರ್ಕಾರಗಳಿಗೆ ಯಾವ ಅಗಾಧ ಪ್ರಮಾಣದಲ್ಲಿ ಲಾಭ ದೊರೆಯುತ್ತಿದೆ ಎಂದು ಇದರಿಂದ ಗೊತ್ತಾಗುತ್ತದೆ. ಪ್ರತಿ 2 ದಿನಕ್ಕೆ 26 ಸಾವಿರ ಕೋಟಿಯನ್ನು ಉತ್ಪಾದನೆಯನ್ನು ಮಾಡುವ ಕಾರ್ಮಿಕರನ್ನು ಮತ್ತು ನೌಕರರನ್ನು ಏಕೆ ಸರ್ಕಾರ ಕಡೆಗಣಿಸುತ್ತದೆ ಎಂಬ ಪ್ರಶ್ನೆ ಇಲ್ಲಿ ಮುಖ್ಯವಾಗುತ್ತದೆ. ಈ ಹಣದಲ್ಲಿ ಕಾರ್ಮಿಕರಿಗೆ ಆಹಾರ ಭದ್ರತೆ, ಪಿಂಚಣಿ ಭದ್ರತೆ, ಕೂಲಿಯ ಮತ್ತು ಕೆಲಸದ ಭದ್ರತೆಯನ್ನು ಏಕೆ ಕೊಡಬಾರದು. ಈ ಹಣದಿಂದ ಸಾಮಾನ್ಯ ಜನತೆಯ ಅಭಿವೃದ್ಧಿಯ ಕೆಲಸಗಳನ್ನು ಏಕೆ ಮಾಡಿಸಬಾರದು?)

ಇಷ್ಟು ತಾಲೂಕು ಮತ್ತು ಜಿಲ್ಲೆಗಳಲ್ಲಿ, ಕೈಗಾರಿಕಾ ರಂಗಗಳಲ್ಲಿ ಬ್ಯಾಂಕ್, ವಿಮೆ, ಕೇಂದ್ರಸೇವೆ, ರಾಜ್ಯಸೇವೆ, ಬಿ.ಎಸ್.ಎನ್.ಎಲ್, ಸಾರಿಗೆ, ಆಟೋ, ವಾಣಿಜ್ಯ ವ್ಯಾಪಾರಗಳು ಸ್ಥಗಿತ ಆಗಿದ್ದರೂ ಕೂಡಾ ಪತ್ರಿಕೆಗಳು ಹೀಗೆ ಬರೆಯುವುದರ ಅರ್ಥವೇನು ? ನಾವು ಅರ್ಥಮಾಡಿಕೊಳ್ಳಬೇಕಿದೆ.

‘ಅಧಿಕಾರದಾಹದಲ್ಲೇ ಕಾಲ ಕಳೆದ ಬಿಜೆಪಿ...’

ಪುಟ 4 ರಿಂದ

ಅನೇಕಲ್ ಸೇರಿದಂತೆ ರಾಜ್ಯದಾದ್ಯಂತ ಕುಡಿಯುವ ನೀರಿನ ಅಭಾವ ಹೆಚ್ಚುತ್ತಿದೆ. ನಿವೇಶನ ಮತ್ತು ವಸತಿಗಳಿಲ್ಲದೆ ಜನತೆ ನಿರ್ಗತಿಕರಾಗುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸ್ಥಳೀಯ ರಾಜಕೀಯ ಪಕ್ಷಗಳು ಹುಟ್ಟಿಕೊಳ್ಳುತ್ತಿವೆ. ಮುಂದಿನ ಚುನಾವಣೆಯಲ್ಲಿ ಕೆಲವು ಸೀಟುಗಳನ್ನು ಪಡೆದು, ಬಹುಮತ ವಿಲ್ಲದ ಪಕ್ಷಗಳ ಜೊತೆ ಕೈಜೋಡಿಸಿ, ಮತ್ತಷ್ಟು ಹಣವನ್ನು ಲೂಟಿ ಮಾಡಲು ಈ ಪಕ್ಷಗಳು ಹವಣಿಸುವೆಯಷ್ಟೆ. ಅನೇಕಲ್ಲಿನ ಜನತೆಯೂ ಸೇರಿದಂತೆ ರಾಜ್ಯ-ದೇಶದಲ್ಲಿ ಕಿತ್ತು ತಿನ್ನುತ್ತಿರುವ ಬಡತನ ಮತ್ತು ಭ್ರಷ್ಟಾಚಾರ, ರೇಷನ್ ಸಾರ್ವತ್ರಿಕರಣ, ಶಿಕ್ಷಣ ಆರೋಗ್ಯ ಹಾಗೂ ನಿರುದ್ಯೋಗ ಮುಂತಾದ ಸಮಸ್ಯೆಗಳ ಪರಿಹಾರಕ್ಕಾಗಿ ಆಳುವ ಸರ್ಕಾರಗಳ ಆರ್ಥಿಕ ವಿರುದ್ಧ ಜನ ಜಾಗೃತಿ ಮೂಡಿಸಲು ಅಖಿಲ ಭಾರತ ಜಾಥವನ್ನು ಸಿಪಿಐ(ಎಂ) ಹಮ್ಮಿಕೊಂಡಿದೆ. ಅನೇಕಲ್ ತಾಲ್ಲೂಕಿಗೂ ಜಾಥ ಬರಲಿದೆ. ಇಂತಹ ದೇಶಪ್ರೇಮಿ ಹೋರಾಟವನ್ನು ಬೆಂಬಲಿಸಬೇಕಾಗಿ ಮನವಿ ಮಾಡುತ್ತೇವೆಂದರು. ಮುಂಬರುವ ವಿಧಾನ ಸಭಾ ಚುನಾವಣೆಗೆ ನಮ್ಮ ಪಕ್ಷದಿಂದ ಅನೇಕಲ್ ವಿಧಾನ ಸಭಾ ಕ್ಷೇತ್ರದಲ್ಲೂ ಸ್ಪರ್ಧಿಸುತ್ತಿದ್ದು ಜನತೆ ಬೆಂಬಲಿಸಬೇಕೆಂದರು.

ಮತ್ತೊಬ್ಬ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ, ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯರಾದ ಪ್ರಸನ್ನ ಕುಮಾರ್ ಮಾತಾಡಿ, ಅನೇಕಲ್ಲು ತಾಲ್ಲೂಕಿನಲ್ಲಿ ಸಿಪಿಐ(ಎಂ) ಕಾರ್ಯಕರ್ತರು ಜನತೆಯ ಸಮಸ್ಯೆಗಳ ಮತ್ತು ಪರಿಹಾರಗಳ ಕುರಿತು ಜಾಗ್ರತಿ ಮೂಡಿಸಲು ಪಾಲ್ಗೊಂಡು ತ್ಯಾಗ ಮತ್ತು ಬದ್ಧತೆಯನ್ನು ಪ್ರದರ್ಶಿಸಿದ್ದಾರೆ ಎಂದರು.


ಸಮಾವೇಶದ ಅಧ್ಯಕ್ಷತೆಯನ್ನು ವಹಿಸಿದ್ದ ಮಾದೇಶ್ ಮಾತಾಡಿ ನಮ್ಮ ಪಕ್ಷದಿಂದ ಹಮ್ಮಿಕೊಂಡಿದ್ದ ಜಾಥಾದ ಸಂದರ್ಭದಲ್ಲಿ ಜನತೆ ತಮ್ಮ ಕಷ್ಟ ಕಾರ್ಪಣ್ಯಗಳನ್ನು ಹಂಚಿಕೊಂಡಿದ್ದಾರೆ. ಸರಿಯಾದ ರಸ್ತೆಗಳಿಲ್ಲ. ಕುಡಿಯುವ ನೀರಿಲ್ಲ. ವಸತಿ ಮುಂತಾದ ಸೌಕರ್ಯಗಳಿಲ್ಲ. ರೈತರು ತಲೆ ತಲೆಮಾರುಗಳಿಂದ ಆಶ್ರಯಿಸಿರುವ ಬಗರ್ ಹುಕುಂ ಸಾಗುವಳಿ ಭೂಮಿಯನ್ನು ರಾಜ್ಯ ಸರ್ಕಾರ ಕಿತ್ತುಕೊಳ್ಳಲು 6 ಸಾವಿರ ರೈತರ ಮೇಲೆ ಕೇಸುಗಳನ್ನು ದಾಖಲಿಸಿದೆ. ಇಂತಹ ಜನ ಸಮಸ್ಯೆಗಳಿಗೆ ಅನೇಕಲ್‌ನ ಶಾಸಕರು ಸಚಿವರೂ ಆದ ನಾರಾಯಣಸ್ವಾಮಿ ಸ್ಪಂದಿಸುತ್ತಿಲ್ಲ. ಇಂತಹ ಸಮಸ್ಯೆಗಳ ವಿರುದ್ಧ ನಮ್ಮ ಹೋರಾಟ ತೀವ್ರಗೊಳ್ಳುತ್ತದೆಂದರು.

ಪ್ರಾರಂಭದಲ್ಲಿ ಪ್ರಸ್ತಾವಿಕ ಭಾಷಣ ಮಾಡಿದ ಸಿಪಿಐ(ಎಂ) ತಾಲ್ಲೂಕು ಕಾರ್ಯದರ್ಶಿ ಬಿ.ಎನ್. ಮಂಜುನಾಥ್ ಅನೇಕಲ್ ತಾಲ್ಲೂಕಿನ ಜನ ಸಾಮಾನ್ಯರ ಮತ್ತು ಕಾರ್ಮಿಕರ ಸಮಸ್ಯೆ ಮತ್ತು ಸವಾಲುಗಳ ಕುರಿತು ಮಾತಾಡಿದರು. ಹಾಗೂ ಮುಂದಿನ ದಿನಗಳಲ್ಲಿ ಜನತೆಯ ಸಮಸ್ಯೆಗಳ ಪರಿಹಾರಕ್ಕಾಗಿ ಬಲಿಷ್ಠ ಚಳುವಳಿಯನ್ನು ಕಟ್ಟಲಾಗುವುದೆಂದರು.

ವರದಿ : ಬಿ. ರಾಜಶೇಖರ ಮೂರ್ತಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ಜನಗಳಿಗೆ ಮತ್ತೆ ಪೆಟ್ರೋಲ್, ಡೀಸೆಲ್ ದರ ಏರಿಕೆ –ಸರಕಾರಕ್ಕೆ ಮತ್ತಷ್ಟು ತೆರಿಗೆ ಆದಾಯ


ವೇದರಾಜ ಎನ್.ಕೆ.


ಕಳೆದ ವಾರ ಪೆಟ್ರೋಲ್ ಬೆಲೆಗಳನ್ನು ಲೀಟರಿಗೆ ರೂ.1.50 ರಷ್ಟು ಹೆಚ್ಚಿಸಲಾಗಿದೆ, ಜತೆಗೆ ಈಗಾಗಲೇ ಹೇರಿರುವ ಡೀಸೆಲ್ ಬೆಲೆಯೇರಿಕೆಯ ಈ ತಿಂಗಳ ಕಂತು–ಲೀಟರಿಗೆ 45ಪೈಸೆ ಏರಿಕೆಯ ಕಂತು ಬೇರೆ. ಕಳೆದ ತಿಂಗಳು, ಜನವರಿ 18ರಂದು ಈ ಬೆಲೆಯೇರಿಕೆಯ ಮೊದಲ ಕಂತಿನೊಂದಿಗೆ ಈ ಪ್ರಕ್ರಿಯೆ ಆರಂಭವಾಗಿತ್ತು.

ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ದರಗಳು ಏರಿದ್ದರಿಂದ ಆ ಏರಿಕೆಯ ಸ್ವಲ್ಪ ಭಾಗವನ್ನಷ್ಟೇ 'ಅನಿವಾರ್ಯ'ವಾಗಿ ಜನಗಳ ಮೇಲೆ ದಾಟಿಸಬೇಕಾಗಿ ಬಂದಿದೆ, ಆದ್ದರಿಂದ ಯಾವ ಕಾರಣಕ್ಕೂ ಈ ಏರಿಕೆಯನ್ನು ಹಿಂತೆಗೆದುಕೊಳ್ಳುವುದಿಲ್ಲ ಎಂದು ಯುಪಿಎ–2 ಪೆಟ್ರೋಲಿಯಂ ಮಂತ್ರಿಗಳು ಘೋಷಿಸಿದ್ದಾರೆ. ವಾಸ್ತವವಾಗಿ ಈ ಏರಿಕೆಯ ಮೂಲಕ ಬಜೆಟ್ ಮಂಡಿಸುವ ಮೊದಲು ಸರಕಾರ ತನ್ನ ತೆರಿಗೆ ಆದಾಯವನ್ನು ಹೆಚ್ಚಿಸಿಕೊಂಡಿದೆ, ಅತ್ತ ತೈಲ ಮಾರಾಟ ಕಂಪನಿಗಳು ಜನಗಳ ಮೇಲೆ ಹೊರೆ ಹಾಕಿ ತಮ್ಮ ಲಾಭಗಳನ್ನು ಹೆಚ್ಚಿಸಿಕೊಳ್ಳಲು ನೆವ ದಕ್ಕಿಸಿಕೊಂಡಿವೆ.

ಇದಾದ ಒಂದೇ ವಾರದೊಳಗೆ ಕೃಷಿ ಕೂಲಿಕಾರರ ಜೀವನ ವೆಚ್ಚ ಸೂಚ್ಯಂಕವನ್ನು ಆಧರಿಸಿದ ಹಣದುಬ್ಬರ ದರ ಜನವರಿ ತಿಂಗಳಲ್ಲಿ 12.30ಕ್ಕೇರಿದೆ; ಈ ಏರಿಕೆ ಬಂದದ್ದು ಆಹಾರ ಬೆಲೆಗಳು ಮತ್ತು ಬಸ್ ದರಗಳ ಏರಿಕೆಯಿಂದ ಎಂದು ಹೇಳಲಾಗಿದೆ. ಇದು ಕಳೆದ ತಿಂಗಳ ಡೀಸೆಲ್ ದರ ಏರಿಕೆಯ ಪರಿಣಾಮ. ಈ ಬಾರಿ ಪೆಟ್ರೋಲ್ ಮತ್ತು ಡೀಸೆಲ್ ಎರಡೂ ತುಟ್ಟಿಯಾಗಿರುವುದರ ಪರಿಣಾಮಗಳಿಗೂ ಜನ ಮುಂದಿನ ಸೂಚ್ಯಂಕ ಬರುವವರೆಗೆ ಕಾಯಬೇಕಾಗಿಲ್ಲ.

ಗಮನಿಸಬೇಕಾದ ಸಂಗತಿಯೆಂದರೆ ಗ್ರಾಮೀಣ ಪ್ರದೇಶದಲ್ಲಿ ಹಣದುಬ್ಬರ ದರ ಒಟ್ಟಾರೆ ಹಣದುಬ್ಬರ ದರಕ್ಕಿಂತಲೂ(ಕಳೆದ ಸಂಚಿಕೆಯಲ್ಲಿ ಹೇಳಿರುವಂತೆ 10.79ಶೇ.) ಹೆಚ್ಚು. ಆದ್ದರಿಂದಲೇ ಕಾರ್ಮಿಕರ ಎರಡು ದಿನಗಳ ಸಾರ್ವತ್ರಿಕ ಮುಷ್ಕರದೊಂದಿಗೆ ಕೃಷಿ ಕಾರ್ಮಿಕರೂ ದೇಶವ್ಯಾಪಿಯಾಗಿ ಹರತಾಳದಲ್ಲಿ ಭಾಗವಹಿಸಿದ್ದಾರೆ. ಆಮ್ ಆದ್ಮಿಯ ಮಂತ್ರ ಜಪಿಸುವ ಸರಕಾರ, ಈ ಮುಷ್ಕರದ ನಿರ್ಧಾರವನ್ನು 5 ತಿಂಗಳ ಹಿಂದೆಯೇ ತಿಳಿಸಲಾಗಿದ್ದರೂ, ಮುಷ್ಕರದ ಕೇವಲ ಎರಡು ದಿನಗಳ ಮೊದಲು ಮಾತುಕತೆಗೆ ಕರೆಯಿತು, ಆದರೆ ಬೆಲೆಯೇರಿಕೆಯನ್ನು ತಡೆಯುವ ಬಗ್ಗೆ ಮಾತ್ರ ಯಾವ ಭರವಸೆಯನ್ನೂ ಕೊಡಲಿಲ್ಲ.

ಸಿವಿಸಿ, ಸಿಬಿಐ ಕೇಳಿದರೂ ವರದಿ ಕೊಡದ ಸರಕಾರ



ಕೃಪೆ : ದಿ ಹಿಂದೂ

ಯುಪಿಎ–2 ಆಳ್ವಿಕೆಯ ಹೊಚ್ಚಹೊಸ ಹೆಲಿಕಾಪ್ಟರ್ ಹಗರಣದಲ್ಲಿ ಈಗ ಸಿಬಿಐ ತನಿಖೆಗೆ ಆದೇಶ ನೀಡಿ ತನಗೆ ಮುಚ್ಚಿಡುವಂತದ್ದೇನೂ ಇಲ್ಲ ಎಂದು ಸರಕಾರ ಹೇಳುತ್ತಿರುವಂತೆಯೇ ಅದರ ನಿಷ್ಕ್ರಿಯತೆಯ ಸಾಕ್ಷ್ಯಗಳಂತೂ ಒಂದರ ಮೇಲೊಂದರಂತೆ ಬರುತ್ತಲೇ ಇವೆ. ಕೇಂದ್ರೀಯ ಜಾಗೃತಾ ಆಯೋಗ(ಸಿವಿಸಿ) ಕಳೆದ ಅಕ್ಟೋಬರಿನಲ್ಲಿಯೇ ಈ ವ್ಯವಹಾರದ ಬಗ್ಗೆ ರಕ್ಷಣಾ ಮಂತ್ರಾಲಯದಿಂದ ವರದಿ ಕೇಳಿತ್ತಂತೆ. ಆದರೆ ರಕ್ಷಣಾ ಮಂತ್ರಾಲಯ ತೆಪ್ಪಗೆ ಕೂತಿತ್ತು. ಈ ವಾರ ಸಿವಿಸಿ ರಕ್ಷಣಾ ಮಂತ್ರಾಲಯಕ್ಕೆ ಇದನ್ನು ನೆನಪಿಸಿ ವರದಿ ಕೊಡುವಂತೆ ಮತ್ತೆ ಕೇಳಿರುವುದಾಗಿ ವರದಿಯಾಗಿದೆ.

ವಾಸ್ತವವಾಗಿ ಸರಕಾರ ಕಳೆದ ಫೆಬ್ರುವರಿಯಲ್ಲೇ ಸಿಬಿಐ ತನಿಖೆಗೆ ಆದೇಶ ನೀಡಬಹುದಿತ್ತು ಎಂದು ತಜ್ಞರು ಅಭಿಪ್ರಾಯ ಪಡುತ್ತಿದ್ದಾರೆ. ಈ ಹಗರಣದಲ್ಲಿ ಭಾಗಿಯಾಗಿದ್ದ ಭಾರತೀಯರ ಬಗ್ಗೆ ಸಾಕ್ಷಿಗಳಿಲ್ಲದ್ದರಿಂದ ಅದು ಸಾಧ್ಯವಾಗಲಿಲ್ಲ ಎಂದು ಸರಕಾರ ನೀಡುತ್ತಿರುವ ಕಾರಣ. ರಾಜತಾಂತ್ರಿಕ ಮೂಲಗಳಿಂದ ಅವರು ಇಟಲಿಯಿಂದ ಮಾಹಿತಿ ಪಡೆಯುವುದಕ್ಕೆ ತಮ್ಮನ್ನು ಸೀಮಿತಗೊಳಿಸುವ ಬದಲು ಕೋರ್ಟಿನಿಂದ 'ಲೆಟರ್ ರೊಗೇಟರಿ'(ಪ್ರಾರ್ಥನಾ ಪತ್ರ) ಪಡೆದು ಮುಂದುವರೆದಿದ್ದರೆ, ಈಗ ಆರಂಭಿಸಿರುವ ತನಿಖೆಯ ಕೆಲಸವನ್ನು ಅದು ಒಂದು ವರ್ಷದ ಹಿಂದೆಯೇ ಆರಂಭಿಸಬಹುದಿತ್ತು, ಈ ಮೂಲಕ ಒಂದು ವರ್ಷವನ್ನು ವ್ಯರ್ಥಗೊಳಿಸಿದಂತೆ ಕಾಣುತ್ತದೆ, ಏಕೆಂದರೆ ವಿದೇಶಿ ಸರಕಾರಗಳು ಒಂದು ತನಿಖೆ ನಡೆಯುತ್ತಿರುವಾಗ ರಾಜತಾಂತ್ರಿಕ ಕೋರಿಕೆಯನ್ನು ಮನ್ನಿಸಬೇಕಾಗಿಲ್ಲ, ಆದರೆ ಲೆಟರ್ ರೊಗೇಟರಿಯನ್ನು ಕಡೆಗಣಿಸುವಂತಿಲ್ಲ ಎಂದು ಮಾಜಿ ಸಿಬಿಐ ನಿರ್ದೇಶಕರೊಬ್ಬರು ಅಭಿಪ್ರಾಯ ಪಟ್ಟಿದ್ದಾರೆ.

ಭ್ರಷ್ಟಾಚಾರ ನಿಗ್ರಹದ ಬಗ್ಗೆ ಯುಪಿಎ–2 ಸರಕಾರದ ಪ್ರಾಮಾಣಿಕತೆಯನ್ನು ಪ್ರಶ್ನಾರ್ಹಗೊಳಿಸುವ ಇನ್ನೊಂದು ಸುದ್ದಿಯೂ ಈ ವಾರ ಬಂದಿದೆ. 1.86 ಲಕ್ಷ ಕೋಟಿ ರೂ.ಗಳ ನಷ್ಟವಾಗಿದೆ ಎಂದು ಸಿಎಜಿ ಲೆಕ ಹಾಕಿರುವ ಕಲ್ಲಿದ್ದಲು ಹಗರಣದ ಸಿಬಿಐ ತನಿಖೆ ಮಂದಗತಿಯಿಂದ ಸಾಗಿದೆ. ಸಂಸತ್ತಿನ ಸಾರ್ವಜನಿಕ ಲೆಕ್ಕಪತ್ರ ಸಮಿತಿ(ಪಿಎಸಿ) ಈ ಬಗ್ಗೆ ಸಿಬಿಐ ನಿರ್ದೇಶಕರನ್ನು ಕೇಳಿದಾಗ ಸರಕಾರ ಕಲ್ಲಿದ್ದಲು ಗಣಿ ನೀಡಿಕೆ ಕುರಿತ 35 ಕಡತಗಳು ಇನ್ನೂ ಕೊಡದಿರುವುದು ಈ ವಿಳಂಬಕ್ಕೆ ಕಾರಣ ಎಂದಿರುವುದಾಗಿ ವರದಿಯಾಗಿದೆ. ಇದರಿಂದಾಗಿ ಸುಮಾರು 40ಶೇ.ರಷ್ಟು ಪ್ರಕರಣಗಳ ತನಿಖೆ ಮುಂದುವರೆಯದೆ ನಿಂತಿದೆಯಂತೆ.


ಸೂರ್ಯನೆಲ್ಲಿ ಪ್ರಕರಣ: ಯುಪಿಎ ಗೋಸುಂಬೆತನ

ದಿಲ್ಲಿಯ ಸಾಮೂಹಿಕ ಅತ್ಯಾಚಾರದ ಹೀನ ಘಟನೆ ದೇಶದಲ್ಲಿ ಎಬ್ಬಿಸಿದ ಆಕ್ರೋಶದ ಹಿನ್ನೆಲೆಯಲ್ಲಿ ಯುಪಿಎ–2 ಸರಕಾರ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿ ಈ ವಿಷಯದಲ್ಲಿ ತನ್ನ ಪ್ರಾಮಾಣಿಕತೆಯ ಮೇಲೆ ಪ್ರಶ್ನೆ ಚಿಹ್ನೆ ಬೀಳುವಂತೆ ಮಾಡಿದೆ. ಇದು ಸಾಲದೆಂಬಂತೆ ಕೇರಳದ ಸೂರ್ಯನೆಲ್ಲಿ ಸಾಮೂಹಿಕ ಅತ್ಯಾಚಾರದ ಪ್ರಕರಣದ ಬಗ್ಗೆ ನಿಷ್ಕ್ರಿಯತೆಯೊಂದಿಗೆ ತನ್ನ ಗೋಸುಂಬೆತನವನ್ನು ಬಯಲು ಮಾಡಿಕೊಳ್ಳುತ್ತಿದೆ.

ಇದರಲ್ಲಿ ಭಾಗಿಯಾಗಿದ್ದರೆಂಬ ಆರೋಪವಿರುವ, ಈಗ ರಾಜ್ಯಸಭೆಯ ಉಪಾಧ್ಯಕ್ಷರಾಗಿರುವ ಪ್ರೊ.ಪಿ.ಜೆ. ಕುರಿಯನ್ ಆ ಸ್ಥಾನವನ್ನು ತೆರವು ಮಾಡಬೇಕು ಎಂಬ ಬೇಡಿಕೆಯ ಬಗ್ಗೆ ಯುಪಿಎ ಮುಖ್ಯಸ್ಥರುಗಳು ಮೌನವಾಗಿದ್ದಾರೆ. ಕುರಿಯನ್ ಮತ್ತು ಕೇರಳ ಸರಕಾರ ಅವರನ್ನು ಮೂರು ನ್ಯಾಯಾಲಯಗಳು ಈ ಆರೋಪದಿಂದ ಮುಕ್ತಗೊಳಿಸಿವೆಯಾದ್ದರಿಂದ ಅವರು ರಾಜೀನಾಮೆ ನೀಡುವ ಅಗತ್ಯವಿಲ್ಲ ಎನ್ನುತ್ತಿದ್ದಾರೆ. ಆದರೆ ವಾಸ್ತವವಾಗಿ ಮೂರು ನ್ಯಾಯಾಲಯಗಳು ಆತನ ಶಾಮೀಲಿನ ವಿಚಾರಣೆಯಾಗಬೇಕು ಎಂದಿದ್ದವು ಎಂಬುದನ್ನು ಇಲ್ಲಿ ಮರೆಮಾಚಲಾಗುತ್ತಿದೆ.

ಜನವರಿ 1996ರಲ್ಲಿ ಒಂದು 17 ವರ್ಷದ ಬಾಲಕಿಯನ್ನು ಅಪಹರಿಸಿ 40 ಮಂದಿ ಹಲವು ದಿನಗಳ ವರೆಗೆ ಆಕೆಯ ಮೇಲೆ ಅತ್ಯಾಚಾರ ನಡೆಸಿದ ಘೋರ ಪ್ರಕರಣವಿದು. ಇದರಲ್ಲಿ ಎರಡು ಮೊಕದ್ದಮೆಗಳಿವೆ. ಕೇರಳ ರಾಜ್ಯ ಸರಕಾರ 35 ಮಂದಿಯ ಮೇಲೆ ದಾಖಲು ಮಾಡಿದ್ದು ಒಂದು, ಮತ್ತು ಇನ್ನೊಂದು ಕುರಿಯನ್‌ರನ್ನು ಕೂಡ ಆರೋಪಿಯಾಗಿಸಬೇಕು ಎಂದು ಸ್ವತಃ

ಮಟ 14ಕ್ಕೆ



ಕೃಪೆ : ದಿ ಹಿಂದೂ

ಕಾರ್ಮಿಕ ವರ್ಗ ಎಚ್ಚರಿಕೆ ನೀಡಿದೆ....

ಪುಟ 7 ರಿಂದ

ಜಾಯಮಾನ. ಇದನ್ನನುಸರಿಸಿ, ದೊಡ್ಡ ಪ್ರಮಾಣದಲ್ಲಿ ಅಂತರ್ರಾಷ್ಟ್ರೀಯ ಹಣಕಾಸನ್ನು ಆಕರ್ಷಿಸುವ ಮೂಲಕ ಬೆಳವಣಿಗೆಯನ್ನು ಉತ್ತೇಜಿಸಲು ಪ್ರಯತ್ನಿಸುವುದು ಈ ಸರಕಾರದ ಅಧಿಕೃತ ಯೋಜನೆಯಿದ್ದಂತಿದೆ. ಆಗಲೇ ನಮ್ಮ ಆರ್ಥಿಕವನ್ನು ಚಿಲ್ಲರೆ ವ್ಯಾಪಾರದಲ್ಲಿ, ವಿಮೆ, ಬ್ಯಾಂಕಿಂಗ್, ಪೆನ್ಷನ್ ನಿಧಿ ಮುಂತಾದವುಗಳಲ್ಲಿ ವಿದೇಶಿ ನೇರ ಹೂಡಿಕೆ(ಎಫ್‌ಡಿಐ)ಗಳಿಗೆ ತೆರೆಯಲಾಗಿದೆ. 'ಸಾಮಾನ್ಯ ತೆರಿಗೆ ತಪ್ಪಿಕೆ ನಿರೋಧಕ ನಿಯಮಗಳು'(ಜಿಎಎಆರ್) ವಿದೇಶಿ ಹೂಡಿಕೆದಾರರಿಗೆ ಒಂದು ಮಹಾ ಪರಿಹಾರವಾಗಿ ಎರಡು ವರ್ಷಗಳ ವರೆಗೆ ಮುಂದೂಡಲ್ಪಟ್ಟಿದೆ. ಇದರಿಂದ ಹೂಡಿಕೆಯ ಮಟ್ಟಗಳು ಏರಿ ಫಲವಾಗಿ ಉನ್ನತ ಬೆಳವಣಿಗೆ ಕಾಣಬರಬಹುದು ಎಂಬ ನಿರೀಕ್ಷೆ ಸರಕಾರದ್ದು. ಆದರೆ ಇಂತಹ ಕಾರ್ಯತಂತ್ರ ಕೆಲಸ ಮಾಡದು. ಏಕೆಂದರೆ ಉತ್ಪಾದಿಸಿದುದನ್ನು ಜನತೆ ಬಳಕೆ ಮಾಡಲಾಗದಿದ್ದರೆ ಎಷ್ಟೇ ಹೂಡಿಕೆಗಳು ಬಂದರೂ ಅದರಿಂದ ಬೆಳವಣಿಗೆ ಉಂಟಾಗಲಾರದು. ಈಗಿನ ವಾಸ್ತವ ಪರಿಸ್ಥಿತಿಗಳಲ್ಲಿ ಜನರಲ್ಲಿ ಇಷ್ಟು ಮಟ್ಟದ ಬಳಕೆ ಸಾಮರ್ಥ್ಯ ಇಲ್ಲವೇ ಇಲ್ಲ.

ಇನ್ನೂ ಮುಖ್ಯ ಸಂಗತಿಯೆಂದರೆ, ಮುಂದುವರೆಯುತ್ತಿರುವ ಜಾಗತಿಕ ಬಿಕ್ಕಟ್ಟಿಗೆ ಭಾರತ ಹೇಗೆ ಸ್ಪಂದಿಸುತ್ತದೆ ಎಂಬುದನ್ನು ಕೂಡ ಬಜೆಟ್ ಬಿಂಬಿಸಲಿದೆ. ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘಟನೆ(ಐಎಲ್‌ಒ) 2013ರ ಜಾಗತಿಕ ಉದ್ಯೋಗ ಪ್ರವೃತ್ತಿ ಕುರಿತ ವಿಶೇಷ ವರದಿಯಲ್ಲಿ ಜಾಗತಿಕ ಹಣಕಾಸು ಬಿಕ್ಕಟ್ಟು ಉದ್ಭವಿಸಿದ ನಂತರದ ಐದನೇ ವರ್ಷದಲ್ಲಿ ಜಾಗತಿಕ ಬೆಳವಣಿಗೆ ದರ ಇಳಿಯಲಿದೆ ಮತ್ತು ನಿರುದ್ಯೋಗ ನಾಗಾಲೋಟ ಹೂಡಲಿದೆ ಎಂದು ಗಮನಿಸಿದೆ. 2014 ರ ವೇಳೆಗೆ 20.5 ಕೋಟಿ ಉದ್ಯೋಗಾರ್ಥಿಗಳು ನಿರುದ್ಯೋಗಿಗಳಾಗಿಯೇ ಉಳಿಯಲಿದ್ದಾರೆ, ಇನ್ನೂ 10 ಕೋಟಿ ಮಂದಿ ಶ್ರಮ ಮಾರುಕಟ್ಟೆಯಿಂದ ಹೊರಗಾಗುತ್ತಾರೆ ಎಂದು ಐಎಲ್‌ಒ ಅಂದಾಜುಗಳು ಹೇಳುತ್ತವೆ. ಯುವಜನರಲ್ಲಿ 35ಶೇ.ಕ್ಕೂ ಹೆಚ್ಚು ಮಂದಿಗೆ ಯಾವುದೇ ಉದ್ಯೋಗ ಮಾರುಕಟ್ಟೆಯನ್ನು ಪ್ರವೇಶಿಸಲಾಗಿಲ್ಲ. "ಆದಾಯಗಳ ಬೆಳವಣಿಗೆ ಎದುರಿಸಬೇಕಾಗಿರುವ ಏರುತ್ತಿರುವ ನಿರುದ್ಯೋಗದ ಒತ್ತಡ (ಭಾರತದ ಸಂದರ್ಭದಲ್ಲಿ ಹಣದುಬ್ಬರದ ಒತ್ತಡ ಕೂಡ) ನಿಜವೇತನಗಳನ್ನು ಕೆಳಕ್ಕೆ ತಳ್ಳುತ್ತಿದೆ" ಎಂಬ ತೀರ್ಮಾನಕ್ಕೆ ಈ ವರದಿ ಬರುತ್ತದೆ. ಇದು ಜನಗಳ ಕೆಳಮಟ್ಟದ ಬಳಕೆ ಸಾಮರ್ಥ್ಯದಿಂದಾಗಿ ಆರ್ಥಿಕ ಚಟುವಟಿಕೆಯ ಮಟ್ಟವನ್ನೂ ಗಮನಾರ್ಹವಾಗಿ ಕೆಳಕ್ಕೆ ಇಳಿಸುತ್ತದೆ ಎಂದೂ ಅದು ಹೇಳುತ್ತದೆ.

ಹಂತ-ಹಂತವಾಗಿ ಬಿಕ್ಕಟ್ಟುಗಳು

ಜನತೆಯ ಬೇಡಿಕೆ ಮತ್ತು ಬಳಕೆ ಸಾಮರ್ಥ್ಯವನ್ನು ಮೇಲೆತ್ತುವ ಬದಲು, ಜಾಗತಿಕ ಬಂಡವಾಳಶಾಹಿ ತನ್ನ ಬಿಕ್ಕಟ್ಟನ್ನು ಮೀರಿ ನಲ್ಲಲು ಹೇಗೆ ಪ್ರಯತ್ನಿಸುತ್ತಿದೆಯೆಂದರೆ ಅದರ ಫಲಿತಾಂಶವಾಗಿ ಹೊಸದೊಂದು ಬಿಕ್ಕಟ್ಟು ಬರುತ್ತದಷ್ಟೇ. ಜನತೆಯ ಖರೀದಿ ಸಾಮರ್ಥ್ಯದಲ್ಲಿ ತೀವ್ರ ಇಳಿಕೆಯ ಪ್ರಶ್ನೆಯಿಂದ ಪಾರಾಗಲು 'ಅನರ್ಹ ಸಾಲ'(ಸಬ್ ಪ್ರೈಮ್)ಗಳ ಮೂಲಕ ಅಗ್ಗದ ಸಾಲಗಳನ್ನು ಒದಗಿಸಲಾಯಿತು. ಆ ಸಾಲಗಳನ್ನು ತೀರಿಸಲಾಗದಿದ್ದಾಗ ಜಾಗತಿಕ ಹಣಕಾಸು ಕುಸಿತದೊಂದಿಗೆ ಬಿಕ್ಕಟ್ಟಿನ ಎರಡನೇ ಘಟ್ಟ ಬಂತು. ಈ ಬಿಕ್ಕಟ್ಟಿನಿಂದ ಹೊರ ಬರಲು ಈ ಬಿಕ್ಕಟ್ಟನ್ನು ನಿರ್ಮಿಸಿದ ಹಣಕಾಸು ದೈತ್ಯರನ್ನೇ ಅಪಾರ ಸರಕಾರೀ ಹಣಕಾಸು ಪ್ಯಾಕೇಜುಗಳ ಮೂಲಕ ಪಾರು ಮಾಡಲಾಯಿತು. ಇದು ಬಿಕ್ಕಟ್ಟಿನ ಮೂರನೇ ಹಂತಕ್ಕೆ ದಾರಿ ಮಾಡಿ ಕೊಟ್ಟು ಕಾರ್ಪೊರೇಟ್ ದಿವಾಳಿಗಳನ್ನು ಸಾರ್ವಭೌಮ ದಿವಾಳಿಗಳಾಗಿ ಪರಿವರ್ತಿಸಲಾಯಿತು. ಇಧರ ಪರಿಣಾಮವಾಗಿ ಹಲವು ಮುಂದುವರೆದ ದೇಶಗಳು ದಿವಾಳಿಯಾದವು. ಇದರ ಪರಿಣಾಮವಾಗಿ ಸರಕಾರೀ ಖರ್ಚುಗಳನ್ನು ಇಳಿಸಲಿಕ್ಕಾಗಿ ಇವುಗಳಲ್ಲಿ ಹಲವು ದೇಶಗಳು 'ಸಂಯಮ'ದ ಹೆಸರಿನಲ್ಲಿ ತೀವ್ರ ಕಡಿತದ ಕ್ರಮುಗಳನ್ನು ಹೇರಿದವು. ಇದರ ಪರಿಣಾಮವೆಂದರೆ ಜನತೆಯ ಬಳಕೆ ಸಾಮರ್ಥ್ಯ ಇನ್ನಷ್ಟು ಕುಂಠಿತಗೊಂಡಿತು. ಇದು ಬಿಕ್ಕಟ್ಟಿನ ನಾಲ್ಕನೇ ಹಂತಕ್ಕೊಯ್ದು ಬೆಳವಣಿಗೆ ಮತ್ತು ಉದ್ಯೋಗ ನಿರ್ಮಾಣ ಇವೆರಡರ ದರಗಳನ್ನೂ ನಿಧಾನಗೊಳಿಸಿತು. ಇತ್ತೀಚೆಗೆ ಬ್ರಿಟನ್ನಿನ ದೈನಿಕ 'ದಿ ಗಾರ್ಡಿಯನ್' ಬ್ರಿಟನ್ನಿನಲ್ಲಿ 70 ವರ್ಷಗಳ ಕಾಲ (ತಮಾಷೆಯೆಂದರೆ, ಇದು ಬೈಬಲ್‌ನಲ್ಲಿ ನಮೂದಿಸಿರುವ ಮಾನವ ಜೀವನದ ಅವಧಿ ಕೂಡ) ಅಸ್ತಿತ್ವದಲ್ಲಿದ್ದ ಒಂದು ಕಲ್ಯಾಣ ಪ್ರಭುತ್ವಕ್ಕೆ ಸಾವು ಬಂದಿದೆ ಎಂದು ವರದಿ ಮಾಡುತ್ತ 'ಕಲ್ಯಾಣ ಪ್ರಭುತ್ವ'ಕ್ಕೆ ಒಂದು 'ಶ್ರದ್ಧಾಂಜಲಿ'ಯನ್ನು ಪ್ರಕಟಿಸಿತು. ಅದರಲ್ಲಿ "ಸಂತಾಪಗಳ ಪುಸ್ತಕದ ಬದಲು 'ಗಾರ್ಡಿಯನ್'ನ ಪತ್ರಗಳ ಪುಟದ ಒಂದು ವಿಶೇಷ ಆವೃತ್ತಿ ಇರುತ್ತದೆ" ಎಂದಿತು.

ಬಿಕ್ಕಟ್ಟಿನ ಐದನೇ ಹಂತ ಇನ್ನೇನು ಕಾಣಿಸಿಕೊಳ್ಳಲಿದೆ. ಅಮೆರಿಕಾ ತನ್ನ ಸಾಲಮಿತಿಯನ್ನು ಮೂರು ತಿಂಗಳ ವರೆಗೆ ವಿಸ್ತರಿಸಿ 'ಹಣಕಾಸು ಪ್ರಪಾತ'ಕ್ಕೆ ಬೀಳುವುದನ್ನು ತಾತ್ಕಾಲಿಕವಾಗಿ ತಪ್ಪಿಸಿಕೊಂಡಿದೆ. ಇದೊಂದು ಮುಂದೂಡಿಕೆಯಷ್ಟೇ, ಇದರಲ್ಲಿ ಕೂಡ ಜಿಡಿಪಿಯ 1ರಿಂದ 1.5ಶೇ.ದಷ್ಟು ಹಣಕಾಸು ಹಿಂಡಿಕೆ ಆಗಿದೆ, ಅದರಿಂದ ದೇಶದ ದೀರ್ಘಾವಧಿ ಸಾಲಕ್ಕೇನೂ ಪರಿಹಾರ ಸಿಕ್ಕಿಲ್ಲ. ಅಮೆರಿಕಾದ ಪ್ರಸಕ್ತ ಸಾಲ ಅದರ ಒಟ್ಟು ಆಂತರಿಕ ಉತ್ಪನ್ನ(ಜಿಡಿಪಿ)ಕ್ಕಿಂತ ಹೆಚ್ಚಿದೆ. ಸದ್ಯಕ್ಕೆ ಅದರ ಜಿಡಿಪಿ ಬೆಳವಣಿಗೆ ದರ ಸುಮಾರು 2ಶೇ.ದ ಸುತ್ತಲೇ ಗಿರಕಿ ಹೊಡೆಯುತ್ತಿರುವುದರಿಂದ, ಈ ಹಣಕಾಸು ಹಿಂಡಿಕೆಯ ಅರ್ಥವೆಂದರೆ ಒಂದು ತೀವ್ರ ಕುಸಿತವೇ. ಅಟ್ಲಾಂಟಿಕ್ ಮಹಾಸಾಗರದ ಈಚೆಗೆ ಯುರೋವಲಯದ ಆರ್ಥಿಕ ಈ ವರ್ಷ 0.2ಶೇ.ದಷ್ಟು ಕುಂಠಿತಗೊಳ್ಳುತ್ತದೆ ಎಂಬುದು ಐಎಂಎಫ್ ನಿರೀಕ್ಷೆ. ಹೀಗೆ ಜಾಗತಿಕ ಆರ್ಥಿಕವು ಬಿಕ್ಕಟ್ಟುಗಳ ಈ ಘಟ್ಟಗಳನ್ನು ಆರಂಭಿಸಿದ ಚಕ್ರದ ಮೂಲಕ್ಕೆ ಮತ್ತೆ ತಲುಪುತ್ತಿದೆ.

ಏಕೈಕ ದಾರಿ

ಈ ಹಿನ್ನೆಲೆಯಲ್ಲಿ, ನಮ್ಮ ಆಂತರಿಕ ಬೇಡಿಕೆಯನ್ನು ಬೃಹತ್ ಪ್ರಮಾಣದಲ್ಲಿ ವಿಸ್ತರಿಸಲು ಗಮನ ಕೇಂದ್ರೀಕರಿಸುವ ಮೂಲಕವಷ್ಟೇ ಭಾರತೀಯ ಆರ್ಥಿಕವನ್ನು ಮತ್ತೆ ಜ್ವಲಿಸುವಂತೆ ಮಾಡಲು ಸಾಧ್ಯ. ಇದು ನಮಗೆ ಬಹಳ ಅಗತ್ಯವಾಗಿರುವ ಮೂಲರಚನೆಗಳನ್ನು ಕಟ್ಟಲು ಸಾರ್ವಜನಿಕ ಹೂಡಿಕೆಗಳನ್ನು ಗಮನಾರ್ಹವಾಗಿ ಹೆಚ್ಚಿಸಿದಾಗ ಮಾತ್ರ ಸಾಧ್ಯ. ಇದು ದೊಡ್ಡ ಪ್ರಮಾಣದಲ್ಲಿ ಉದ್ಯೋಗಗಳನ್ನು ನಿರ್ಮಿಸಿ, ಆಮೂಲಕ ಒಟ್ಟು ಆಂತರಿಕ ಬೇಡಿಕೆಯ ವಿಸ್ತರಣೆಗೆ ಒತ್ತಾಸೆ ನೀಡಬಲ್ಲದು. ಸದ್ಯದ ಜಾಗತಿಕ ಸ್ಥಿತಿ-ಗತಿಗಳಲ್ಲಿ ಲಭ್ಯವಿರುವುದು ಇದೊಂದೇ ದಾರಿ.

ಈ ಅಂಕಣದಲ್ಲಿ ಈ ಮೊದಲು ಮತ್ತೆ-ಮತ್ತೆ ಗಮನಿಸಿದಂತೆ, ಸಾರ್ವಜನಿಕ ಹೂಡಿಕೆಗಳಲ್ಲಿ ಇಂತಹ ದೊಡ್ಡ ಪ್ರಮಾಣದ ಹೆಚ್ಚಳಕ್ಕೆ ಸಂಪನ್ಮೂಲಗಳ ಕೊರತೆಯೇನೂ ಇಲ್ಲ. ವ್ಯಾಪಕ ಭ್ರಷ್ಟಾಚಾರವನ್ನು ನಿಗ್ರಹಿಸಿದರೆ, ಮತ್ತು ಶ್ರೀಮಂತರಿಗೆ ಕೊಡುವ ಬೃಹತ್ ತೆರಿಗೆ ರಿಯಾಯ್ತಿಗಳನ್ನು ನಿಲ್ಲಿಸಿದರೆ, ಹೀಗೆ ಉಳಿಯುವ ಸಂಪನ್ಮೂಲಗಳನ್ನು ಸಾರ್ವಜನಿಕ ಹೂಡಿಕೆಗಳನ್ನು ಹೆಚ್ಚಿಸಲು ಬಳಸಬಹುದು. ಇದು ನಮ್ಮ ಆರ್ಥಿಕವನ್ನು ಒಂದು ತಾಳಿಕೆಯ ಬೆಳವಣಿಗೆಯ ಪಥದಲ್ಲಿಟ್ಟು ನಮ್ಮ ಜನತೆಯ ಬದುಕನ್ನು ಉತ್ತಮಗೊಳಿಸ ಬಲ್ಲುದು.

ನಮ್ಮ ವಿಶಾಲ ಜನಸಮೂಹಗಳ ಹಿತದೃಷ್ಟಿಯಿಂದ, ಬಜೆಟ್ ಇಂತಹ ಒಂದು ದಾರಿಯನ್ನು ಅಂಗೀಕರಿಸಬೇಕಾಗಿದೆ. ಇಲ್ಲವಾದರೆ, ಜನತೆಯ ಕ್ರೋಧವನ್ನು ಮತ್ತು ಭವಿಷ್ಯದಲ್ಲಿ ಜನಗಳ ಇನ್ನೂ ಬಲಿಷ್ಠ ಹೋರಾಟಗಳನ್ನು ಎದುರಿಸಬೇಕಾಗಬಹುದು ಎಂದು ಆಳುವ ವರ್ಗಗಳನ್ನು ಎಚ್ಚರಿಸಬೇಕಾಗಿದೆ.

ಗುತ್ತಿಗೆ ನರ್ಸ್‌ಗಳ ವಜಾ ಖಂಡನೀಯ

ಪುಟ 3 ರಿಂದ

ಗುತ್ತಿಗೆದಾರರಿಂದ ಕಾರ್ಮಿಕರಿಗೆ ಅನ್ಯಾಯ ಆಗುತ್ತಿರುವುದು ಗೊತ್ತಿದ್ದರೂ ಸರ್ಕಾರವಾಗಲಿ, ಇಲಾಖೆಗಳ ಅಧಿಕಾರಿಗಳಾಗಲಿ ಕಾರ್ಮಿಕರ ಶೋಷಣೆಯನ್ನು ತಡೆಗಟ್ಟಲು ಮುಂದಾಗುತ್ತಿಲ್ಲ. ಸರ್ಕಾರವೇ ತನ್ನ ಇಲಾಖೆಗಳಲ್ಲಿ ಇಂತಹ ಅಕ್ರಮ ಗುತ್ತಿಗೆ ಪದ್ಧತಿಯನ್ನು ಅನುಸರಿಸುತ್ತಿರುವುದರಿಂದ ಖಾಸಗಿ ಸಂಸ್ಥೆಗಳ ಮಾಲೀಕರೂ ಸಹ ಗುತ್ತಿಗೆ ಆಧಾರದಲ್ಲಿ ಕಾರ್ಮಿಕರನ್ನು ನೇಮಿಸಿಕೊಂಡು ಹೊಟ್ಟೆಪಾಡಿಗಾಗಿ ದುಡಿಯಲೇ ಬೇಕಾಗಿರುವ ಬಡ ಕಾರ್ಮಿಕರ ಶೋಷಣೆಯನ್ನು ರಾಜಾರೋಷವಾಗಿ ಮಾಡುತ್ತಾರೆ.

ಸರ್ಕಾರ ಖಾಸಗಿ ಮಾಲೀಕರಿಗೆ ಆದರ್ಶವಾಗಿರಬೇಕು. ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವ ನಿಯಮವನ್ನು ಸರ್ಕಾರ ಜಾರಿಮಾಡಬೇಕು. ಕಾಯಂ ಸ್ವರೂಪದ ಕೆಲಸಗಳಿಗೆ ಗುತ್ತಿಗೆ ಆಧಾರದಲ್ಲಿ ಕಾರ್ಮಿಕರನ್ನು ನೇಮಿಸಿ ದುಡಿಸುವುದನ್ನು ಸರ್ಕಾರವೇ ಮಾಡುತ್ತಿದ್ದರೆ ಲಾಭಕೋರ ಖಾಸಗಿ ಮಾಲೀಕರು ಅದಕ್ಕಿಂತ ನೂರುಪಟ್ಟು ಹೆಚ್ಚು ಶೋಷಣೆ ಮಾಡುತ್ತಾರೆ. ಭ್ರಷ್ಟಾಚಾರವನ್ನು ಸಾಂಸ್ಥಿಕಗೊಳಿಸುವ ಖ್ಯಾತಿಯ ಬಿಜೆಪಿ ಸರ್ಕಾರಕ್ಕೆ ಕಾರ್ಮಿಕರ ಶೋಷಣೆಯನ್ನು ತಡೆಯುವುದು ಆದ್ಯತೆಯ ಪ್ರಶ್ನೆಯೇ ಅಲ್ಲ. ಕಾರ್ಮಿಕರಿಗೆ ಇಂತಹ ಸರ್ಕಾರಗಳ ಧೋರಣೆಗಳನ್ನು ಬದಲಾಯಿಸಲು ಸಾಧ್ಯವಾಗದೆ ಹೋದಾಗ ಅಂತಹ ಸರ್ಕಾರಗಳನ್ನೇ ಬದಲಾಯಿಸಲು ಅವರು ಮುಂದಾಗಬೇಕಾಗಿದೆ.

ಸೇವೆಯಿಂದ ಅಕ್ರಮವಾಗಿ ವಜಾಗೊಂಡಿರುವ ಬೆಂಗಳೂರಿನ ನರ್ಸ್‌ಗಳು ಕಾನೂನು ಸಮರ ನಡೆಸಲು ಮುಂದಾಗಿದ್ದಾರೆ ಎನ್ನಲಾಗಿದೆ. ಅವರ ಅತ್ಯಂತ ನ್ಯಾಯ ಸಮ್ಮತ ಹೋರಾಟಕ್ಕೆ ಬೆಂಗಳೂರಿನ ಕಾರ್ಮಿಕ ವರ್ಗ ಹಾಗೂ ಪ್ರಜ್ಞಾವಂತ ನಾಗರಿಕರು ಬೃಹತ್ ಬೆಂಬಲ ನೀಡಿ ಸರ್ಕಾರ ನರ್ಸ್‌ಗಳ ಸೇವೆಯನ್ನು ವಜಾಮಾಡಿದ ಕ್ರಮವನ್ನು ಹಿಂಪಡೆಯುವಂತೆ ಒತ್ತಾಯ ಹೇರಬೇಕು.

ಕಾಂಗ್ರೆಸ್ ಬಿ.ಜೆ.ಪಿ.

ಆರು ದಶಕಗಳ ಕಾಲ ಕಾಂಗ್ರೆಸ್ಸು ಆಳಿ
ಹಸಿದೊಡಲ ಬೆಂಕಿಗೇ ಹಾಕಿಹುದು ಗಾಳಿ
ಬಿ.ಜೆ.ಪಿ. ಇತಿಹಾಸ ತಿರುಚುತ್ತ ದಿವಸ
ಮಾಡಿಹುದು ಸತ್ಯಕ್ಕೆ ಮಸಿ ಬಳಿವ ಕೆಲಸ

ಬಿಜೆಪಿ ಸೂತ್ರ

ಕೂಳು ಇಲ್ಲದೆ ಸಾವು ರೈತರ ಆತ್ಮಹತ್ಯೆ
ಈ ರಗಳೆ ನಮ್ಮಲ್ಲಿ ಇದ್ದದ್ದೇ ನಿತ್ಯ
ಉಳ್ಳವರ ಮೈ ಗುಡಿಯ ವೈಭವವು ಮಾತ್ರ
ಅಗತ್ಯ ಇದು ನೋಡಿ ಬಿ.ಜೆ.ಪಿ. ಸೂತ್ರ.

– ವಿಡಂಬಾರಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆ

ಪುಟ 5 ರಿಂದ

ನಾಣ್ಯದ ಎರಡು ಮುಖಗಳಂತಿರುವ ಈ ಎರಡು ಪ್ರಮುಖ ಪಕ್ಷಗಳು ಪರಸ್ಪರ ಸಹಕಾರದಿಂದ ಸ್ಥಳೀಯ ಸಂಸ್ಥೆಗಳಿಗೆ ಹರಿದು ಬರುವ ಸಾರ್ವಜನಿಕ ಹಣವನ್ನು ಲೂಟಿ ಮಾಡಿವೆ. ಸ್ಥಳೀಯ ಸಂಸ್ಥೆಗಳಲ್ಲಿ ಬಿಜೆಪಿ ಅಧಿಕಾರದಲ್ಲಿದ್ದರೆ ಕಾಂಗ್ರೆಸ್ ವಿರೋಧ ಪಕ್ಷವಾಗಿರುತ್ತದೆ. ಕಾಂಗ್ರೆಸ್ ಬಹುಮತ ಹೊಂದಿದ ಪಕ್ಷವಾಗಿದ್ದರೆ ಬಿಜೆಪಿ ವಿರೋಧ ಪಕ್ಷದ ಸ್ಥಾನದಲ್ಲಿರುತ್ತದೆ. ಕೆಲವು ಕಡೆ ಜೆಡಿ(ಎಸ್) ಸಹ ಕಣದಲ್ಲಿರುತ್ತದೆ. ಇತ್ತೀಚೆಗೆ ಕೆಲವು ಕಡೆ ಬಿಎಸ್‌ಆರ್ ಪಕ್ಷವೂ ಸಹ ಅಧಿಕಾರ ಹಂಚಿಕೊಂಡಿದೆ. ಸ್ಥಳೀಯ ಸಂಸ್ಥೆಗಳನ್ನು ಭ್ರಷ್ಟಾಚಾರದ ಕೂಪದಿಂದ ಹೊರ ತರಬಯಸುವವರು ಈ ಪಕ್ಷಗಳ ಅಭ್ಯರ್ಥಿಗಳಿಗೆ ಮತ ನೀಡಲಾರರು.

ಸ್ಥಳೀಯ ಸಂಸ್ಥೆಗಳಲ್ಲಿ ಭ್ರಷ್ಟಾಚಾರದ ವಿರುದ್ಧ ರಾಜಿ ಇಲ್ಲದ ಹೋರಾಟ ನಡೆಯಬೇಕಾಗಿದೆ. ಭ್ರಷ್ಟಾಚಾರದ ವಿರುದ್ಧ ಜನತೆಯ ಹೋರಾಟ ಪರಿಣಾಮಕಾರಿಯಾಗಬೇಕಾದರೆ ಜನಪರ ಹೋರಾಟಗಾರರನ್ನು ಚುನಾಯಿಸಿ ಕಳುಹಿಸುವುದು ಸಾಧ್ಯವಾಗಬೇಕು. ಎಡಪಕ್ಷಗಳು ಇಂತಹ ಹೋರಾಟಗಾರರನ್ನು ಚುನಾವಣಾ ಕಣಕ್ಕೆ ಇಳಿಸುತ್ತವೆ. ಅಂತಹ ಹೋರಾಟಗಾರರನ್ನು ಅಧಿಕ ಸಂಖ್ಯೆಯಲ್ಲಿ ಗೆಲ್ಲಿಸುವುದರಲ್ಲಿ ಮತದಾರರ ಹಿತವಿದೆ.

ಮುಂದಿನ ದಿನಗಳಲ್ಲಿ ಎಲ್ಲಾ ಕಡೆ ಕುಡಿಯುವ ನೀರಿನ ಪ್ರಶ್ನೆ ಗಂಭೀರವಾಗಲಿದೆ. ಪುರಸಭೆ-ನಗರಸಭೆಗಳ ವ್ಯಾಪ್ತಿಯಲ್ಲಿ ಸ್ವಂತ ಮನೆಗಳಿಲ್ಲದ ಸಾಮಾನ್ಯ ಕುಟುಂಬಗಳು ಲ್ಯಾಂಡ್ ಮಾಫಿಯಾಗಳ ಹಾವಳಿಯಿಂದಾಗಿ ಮನೆ ಕಟ್ಟಿಕೊಳ್ಳಲು ಒಂದು ಚಿಕ್ಕ ನಿವೇಶನವನ್ನು ಸಹ ಕೊಂಡುಕೊಳ್ಳಲಾಗದ ಸ್ಥಿತಿ ನಿರ್ಮಾಣವಾಗಿದೆ. ಅಂತಹ ನಿವೇಶನರಹಿತರ ಪ್ರಶ್ನೆ ಇತ್ಯರ್ಥವಾಗಬೇಕಾಗಿದೆ. ನಗರಗಳಲ್ಲಿ ಒಳರಸ್ತೆಗಳು ಬಹುತೇಕವಾಗಿ ಪಾಳುಬಿದ್ದಿವೆ. ಅವುಗಳ ದುರಸ್ತಿ ಆಗಬೇಕಾಗಿದೆ. ಚರಂಡಿ ಅವ್ಯವಸ್ಥೆಯನ್ನು ಸರಿಪಡಿಸುವುದಾಗಬೇಕಾಗಿದೆ. ಮಹಿಳೆಯರಿಗೆ ಅಗತ್ಯವಿರುವಷ್ಟು ಕಡೆ ಸಾರ್ವಜನಿಕ ಶೌಚಾಲಯಗಳ ನಿರ್ಮಾಣ ಹಾಗೂ ಅವುಗಳ ವ್ಯವಸ್ಥಿತ ನಿರ್ವಹಣೆ ಆಗಬೇಕಾಗಿದೆ. ನಗರ ಪ್ರದೇಶಗಳಿಗೂ ಉದ್ಯೋಗ ಖಾತ್ರಿ ಯೋಜನೆಯನ್ನು ವಿಸ್ತರಿಸಿ ನಗರದ ಕೂಲಿಕಾರರಿಗೆ ವರ್ಷದಲ್ಲಿ 250 ದಿನ ಕೆಲಸ ಒದಗಿಸಬೇಕಾಗಿದೆ. ಅಗತ್ಯ ವಸ್ತುಗಳ ಬೆಲೆ ಏರಿಕೆ ನಿಯಂತ್ರಣಕ್ಕೆ ಸಿಗದಂತಾಗುತ್ತಿರುವುದರಿಂದ ಎಪಿಎಲ್-ಬಿಪಿಎಲ್ ಎಂಬ ಭೇದವನ್ನು ತೆಗೆದು ಹಾಕಿ ಎಲ್ಲರಿಗೂ ಒಂದೇ ರೀತಿಯ ರೇಷನ್ ಕಾರ್ಡುಗಳನ್ನು ವಿತರಿಸಿ ಕೆ.ಜಿ.ಗೆ. 2ರೂ. ಮೀರದ ದರಗಳಲ್ಲಿ ಅಕ್ಕಿ ಮತ್ತು ಇತರ ಆಹಾರ ಧ್ಯಾನ್ಯಗಳನ್ನು ವಿತರಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರಬೇಕಾಗಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಅವರ ಜನಸಂಖ್ಯೆಯ ಆಧಾರದಲ್ಲಿ ವಿಶೇಷ ಘಟಕ ಯೋಜನೆ-ಉಪಯೋಜನೆಗಳಿಗಾಗಿ ಹೆಚ್ಚು ಹಣವನ್ನು ಪಡೆದು ಅದರ ಪ್ರಯೋಜನ ನಗರದ ದಲಿತ ಸಮುದಾಯಗಳಿಗೆ ಲಭಿಸುವಂತೆ ಮಾಡಬೇಕಾಗಿದೆ. ಇವು ಹಾಗೂ ಇಂತಹ ಇತರ ಪ್ರಮುಖ ಪ್ರಶ್ನೆಗಳು ಇತ್ಯರ್ಥ ಆಗಬೇಕಾದರೆ ವಿವಿಧ ಜನಸಮೂಹಗಳು ಸಂಘಟಿತರಾಗಿ ಹೋರಾಡುವುದೊಂದೇ ದಾರಿಯಾಗಿದೆ. ಇಂತಹ ಹೋರಾಟಗಳಲ್ಲಿ ಆಸಕ್ತಿ ಹೊಂದಿರುವ, ಪ್ರಾಮಾಣಿಕ ಹೋರಾಟಗಾರರನ್ನು ಈ ಸಲದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಸ್ಪರ್ಧೆಗಿಳಿಸಿ ಗೆಲ್ಲಿಸಲು ಸಾಧ್ಯವಾದರೆ ಇದುವರೆಗೆ ಮತದಾರರಿಗೆ ಮೋಸಮಾಡುತ್ತಾ ಬಂದಿರುವ ಭ್ರಷ್ಟ ರಾಜಕೀಯ ಪಕ್ಷಗಳಿಗೆ ನೈಜ ಪರ್ಯಾಯವನ್ನು ಕಟ್ಟಿ ಬೆಳೆಸಲು ಸಾಧ್ಯವಾಗುವುದು.

ಅಭೂತಪೂರ್ವ ಮುಷ್ಕರ

ಪುಟ 8 ರಿಂದ

ಬೆದರಿಕೆಯ ಹೊರತಾಗಿಯೂ ಮುಷ್ಕರಕ್ಕೆ ಸಿಕ್ಕ ಪ್ರತಿಕ್ರಿಯೆ ಅಮೋಘವಾಗಿತ್ತು. ಗುಜರಾತ್, ಚತ್ತೀಸ್‌ಗಢ, ಮಧ್ಯಪ್ರದೇಶದಲ್ಲಿ ಕೂಡ ಮುಷ್ಕರ ನಡೆಯಿತು. ಗೋವಾದಲ್ಲಿ ಮುಷ್ಕರ ಸ್ಫೂರ್ತಿದಾಯಕ ಆಗಿತ್ತು. ಮೇಘಾಲಯದಲ್ಲಿ 23ರಂದು ಚುನಾವಣೆ ನಡೆಯುವುದಿದ್ದರೂ ಷಿಲ್ಲಾಂಗ್‌ನಲ್ಲಿ ಮುಷ್ಕರ ನಡೆಯಿತು.

ಸರಕಾರ ತನ್ನ ನೀತಿಯಲ್ಲಿ ಬದಲಾವಣೆ ತರುವಂತೆ ಹಾಗೂ 10 ಅಂಶಗಳ ಬೇಡಿಕೆಯನ್ನು ಈಡೇರಿಸುವಂತೆ ಒತ್ತಡ ಹೇರಲು ಹೋರಾಟವನ್ನು ಮುಂದುವರಿಸಬೇಕಾಗಿದೆ.

ಮುಷ್ಕರದ ಹಕ್ಕು ಒಂದು ಸಾಂವಿಧಾನಿಕ ಹಕ್ಕು. ರಾಜ್ಯ ಯಂತ್ರವನ್ನು ಸಿಕ್ಕಾಪಟ್ಟೆ ಬಳಸಿಕೊಂಡು ಶಾಂತಿಯುತ ಮುಷ್ಕರವನ್ನು ಮುರಿಯುವ ಅಧಿಕಾರ ಯಾವುದೇ ರಾಜ್ಯ ಸರಕಾರಕ್ಕೆ ಇಲ್ಲ. ಪರಿಸ್ಥಿತಿಯ ಗಹನತೆಯನ್ನೂ ಜನರಲ್ಲಿ ಮಡುಗಟ್ಟಿರುವ ಅಭೂತಪೂರ್ವ ಆಕ್ರೋಶವನ್ನೂ ಅರ್ಥ ಮಾಡಿಕೊಂಡು ತಪ್ಪು ನೀತಿಗಳನ್ನು ಸರಿಪಡಿಸಿಕೊಳ್ಳಲು ಟ್ರೇಡ್ ಯೂನಿಯನ್‌ಗಳೊಂದಿಗೆ ಅರ್ಥಪೂರ್ಣ ಮಾತುಕತೆ ನಡೆಸಿ ಕ್ರಮಗಳನ್ನು ಕೈಗೊಳ್ಳಲು ನಾವು ಆಗ್ರಹಿಸುತ್ತೇವೆ.

ಸೂರ್ಯನೆಲ್ಲಿ ಪ್ರಕರಣ....

ಪುಟ 13 ರಿಂದ

ಅತ್ಯಾಚಾರಕ್ಕೆ ಬಲಿಯಾದಾಕೆ ದಾಖಲಿಸಿರುವ ದೂರು.

ಮುಖ್ಯ ಮೊಕದ್ದಮೆಯಲ್ಲಿ ಒಂದು ವಿಶೇಷ ನ್ಯಾಯಾಲಯ 35 ಮಂದಿ ತಪ್ಪಿತಸ್ಥರು ಎಂದು ತೀರ್ಪು ನೀಡಿತು. ಅವರು ಹೈಕೋರ್ಟಿಗೆ ಮನವಿ ಮಾಡಿದರು. ಹೈಕೋರ್ಟ್ ಅವರ ಮನವಿಯನ್ನು ಎತ್ತಿ ಹಿಡಿದು ಅದಾಗಲೇ ಜಾಮೀನಿನ ಮೇಲೆ ಹೊರಗಿದ್ದ ಅವರನ್ನೆಲ್ಲ 2005ರಲ್ಲಿ ಬಿಡುಗಡೆ ಮಾಡಿತು. ಇದರ ವಿರುದ್ಧ ಕೇರಳ ರಾಜ್ಯಸರಕಾರ ಸುಪ್ರಿಂ ಕೋರ್ಟಿಗೆ ಅಪೀಲು ಹೋಯಿತು.

ಬಾಲಕಿಯ ಖಾಸಗೀ ಮೊಕದ್ದಮೆಯಲ್ಲಿ ಕೆಳಗಿನ ನ್ಯಾಯಾಲಯ ಕುರಿಯನ್ ಹೆಸರು ಸೇರಿಸಲು ಆಧಾರಗಳು ಕಾಣುತ್ತಿವೆಯಾದ್ದರಿಂದ ಆತನ ಹೆಸರನ್ನು ಆರೋಪಿಗಳ ಪಟ್ಟಿಯಲ್ಲಿ ಸೇರಿಸಬೇಕು ಎಂದಿತು. ಇದರ ವಿರುದ್ಧ ಕುರಿಯನ್ ಹೈಕೋರ್ಟ್ ಮೊರೆ ಹೋದರು. ಆದರೆ ಅದು ಅವರಿಗೆ ಯಾವುದೆ ಪರಿಹಾರ ನೀಡಲು ನಿರಾಕರಿಸಿ ಕೆಳಗಿನ ಕೋರ್ಟಿಗೆ ಹಿಂದಿರುಗುವಂತೆ ಹೇಳಿತು. 2006ರಲ್ಲಿ ಅಡಿಶನಲ್ ಸೆಶನ್ಸ್ ಕೋರ್ಟು ಆರೋಪ ಸ್ಪಷ್ಟವಾಗಿದೆ, ನಿರ್ದಿಷ್ಟವಾಗಿದೆ, ಆದ್ದರಿಂದ ಮೊಕದ್ದಮೆ ಹೂಡಿರುವವರು ತಮ್ಮ ಆರೋಪವನ್ನು ಸಾಬೀತು ಪಡಿಸಲು ಅವಕಾಶ ನೀಡಬೇಕು ಎಂದಿತು. ನಂತರ ಹೈಕೋರ್ಟ್ ಮತ್ತು ಸುಪ್ರಿಂ ಕೋರ್ಟ್ ಕುರಿಯನ್‌ರವರ ಅಪೀಲನ್ನು ಎತ್ತಿ ಹಿಡಿದಿದ್ದರೆ ಅದು ಮುಖ್ಯ ಕೇಸಿನಲ್ಲಿ ಹೈಕೋರ್ಟ್ ಆರೋಪಿಗಳನ್ನು ಬಿಡುಗಡೆ ಮಾಡಿದ್ದ ತೀರ್ಪಿನ ಹಿನ್ನೆಲೆಯಲ್ಲಿ. ತಮಾಷೆಯೆಂದರೆ ಕೇರಳ ಸರಕಾರವೇ ಈ ತೀರ್ಪನ್ನು ಪ್ರಶ್ನಿಸಿದೆ.


ಈಗ ದಿಲ್ಲಿಯ ಘೋರ ಕೃತ್ಯದ ಹಿನ್ನೆಲೆಯಲ್ಲಿ, ಸುಪ್ರಿಂ ಕೋರ್ಟಿನಲ್ಲಿ ಕೇರಳ ಸರಕಾರದ 2005 ರ ಮನವಿಯ ವಿಚಾರಣೆ ನಡೆಸಿದ ಸುಪ್ರಿಂ ಕೋರ್ಟ್ 17 ವರ್ಷದ ಬಾಲಕಿಯ ಸಮ್ಮತಿಯೊಂದಿಗೆ ನಡೆದ ಪ್ರಕರಣವಿದು ಎಂದು 35 ಜನರನ್ನು ಬಿಡುಗಡೆ ಮಾಡುವ ಕೇರಳ ಹೈಕೋರ್ಟಿನ ತೀರ್ಪು ದೋಷಪೂರ್ಣವಾಗಿದೆ ಎನ್ನುತ್ತ ಪ್ರಕರಣದ ಮರುವಿಚಾರಣೆ ನಡೆಸುವಂತೆ ಹೇಳಿದೆ. ಇದರೊಂದಿಗೆ ಅತ್ಯಾಚಾರ ಕ್ಕೊಳಗಾಗಿರುವಾಕೆ ಕೂಡ ಕುರಿಯನ್‌ರ ಮೇಲಿನ ಆರೋಪದ ಮರುತನಿಖೆಯೂ ಆಗಬೇಕು ಎಂದು ಕೋರಿದ್ದಾರೆ. ಆದರೆ ಬಹಳ ಹಿಂದೆಯೇ ಸುಪ್ರಿಂ ಕೋರ್ಟ್‌ನಲ್ಲಿ ಕೂಡ ಸೇರಿದಂತೆ ನ್ಯಾಯಾಂಗ ಪ್ರಕ್ರಿಯೆಯಲ್ಲಿ ಇತ್ಯರ್ಥಗೊಂಡಿರುವ ದಶಕಗಳ ಹಿಂದಿನ ಕೇಸುಗಳನ್ನು ಮತ್ತೆ ತೆರದಿರುವ ಕೇರಳದ ಕಾಂಗ್ರೆಸ್ ನೇತೃತ್ವದ ಸರಕಾರ ಕುರಿಯನ್ ಕೇಸನ್ನು ಮಾತ್ರ ಈಗಾಗಲೇ ಇತ್ಯರ್ಥಗೊಂಡಿರುವ ಹಳೆಯ ಕೇಸ್ ಎಂದು ಮರುತನಿಖೆಯ ಕೋರಿಕೆಯನ್ನು ತಿರಸ್ಕರಿಸಿದೆ.

ಕವನ

ದೆಹಲಿ ಅತ್ಯಾಚಾರ!

ಅದೇ ಸ್ವಾಮಿ ನಾನೂ ಕೇಳ್ತಾ
ಇರೋದು
ಅದೇ ಆ ದೆಹಲಿಯಲ್ಲಿ
ತೀರ ಈಚೆಗೆ ಆ ಯುವತಿಯ ಮೇಲೆ
ಸಾಮೂಹಿಕ ಅತ್ಯಾಚಾರವಾಯ್ತು
ತಾನೆ?
ಆ ಬರ್ಬರ ಕೃತ್ಯದಿಂದಾಗಿ ಆ
ಯುವತಿಯ ಜೀವವೂ ಕಳೆದು
ಹೋಯ್ತು ತಾನೆ?
ದೇಶಕ್ಕೆ ದೇಶವೇ ಆ ಅತ್ಯಾಚಾರಿಗಳಿಗೆ
ಕ್ಯಾಕರಿಸಿ ಕ್ಯಾಕರಿಸಿ ಉಗಿಯಿತು
ತಾನೆ?
ಪೋಲೀಸರೂ ಕೂಡ ಆ
ಅತ್ಯಾಚಾರಿಗಳನ್ನು
ಹಿಡಿದು ಒಳಗೆ ಹಾಕಿದರು ತಾನೆ?
ನಾಳೆ ಆಕ್ರೂರಿಗಳಿಗೆ ಗಲ್ಲು
ಶಿಕ್ಷೆಯಾಗಬಹುದು!
ಆಗಬೇಕು ಕೂಡ ; ಆ ಮಾತು ಬೇರೆ.
ಆದರೆ ! ಆದರೆ !
ಅದೇ ಆ ದೆಹಲಿಯೂ ಕೂಡ
ಇಡೀ ದೇಶದ ಬಡಪಾಯಿಗಳ ಮೇಲೆ
ಅತ್ಯಾಚಾರವೆಸುಗುತ್ತಲೇ ಇದೆಯಲ್ಲಾ !
ಸೀಮೆ ಎಣ್ಣೆಯ ಬೆಲೆ ಏರಿಸಿ
ಅಕ್ಕಿಯ ಬೆಲೆ ಏರಿಸಿ
ಔಷಧಿಯನ್ನೂ ಕೂಡ ಸಿಗದಂತೆ
ಮಾಡಿ
ಬಡಪಾಯಿಗಳ ಬದುಕನ್ನು
ನಿತ್ಯವೂ ಬೆತ್ತಲುಗೊಳಿಸುತ್ತಿದೆಯಲ್ಲಾ !
ಈ ದುರ್ಭರ ಕೃತ್ಯದಿಂದಾಗಿ
ಸಾಲು ಸಾಲು ರೈತರು ದೆಹಲಿ ಕುಣಿಕೆಗೆ
ತಲೆಯೊಡ್ಡುತ್ತಲೇ ಇದ್ದಾರಲ್ಲಾ !
ಆದರೆ ಆ ದೆಹಲಿಯನ್ನು ಮಾತ್ರ
ಈವರೆಗೂ
ಯಾರಿಂದಲೂ ಬಂಧಿಸಲಾಗಿಲ್ಲವಲ್ಲಾ !
ನ್ಯಾಯವೇ ಸ್ವಾಮಿ ? ಇದು
ನ್ಯಾಯವೇ ?!

– ಹುರುಕಡ್ಲಿ ಶಿವಕುಮಾರ



RNI No. KARKAN /2006/17926 Posted on every Satua
JANASHAKTHI KANNADA VARA PATRIKE MAR 03, 2013 Price : Rs. 10/- Licensed to Post without prepayment License No. WPP
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO

ಕಾರ್ಮಿಕ ನಾಯಕರಾಗಿ ಮಾವೋ



ಜಿ.ಎನ್.ನಾಗರಾಜ್ 23

ಚೀನಾ ಕಮ್ಯುನಿಸ್ಟ್ ಪಕ್ಷದ ಮೊದಲ ಅಧಿವೇಶನ ಚೀನಾದಲ್ಲಿ ಕಾರ್ಮಿಕರ ಸಂಘಟನೆಗೆ ಒತ್ತು ನೀಡಲು ಕರೆ ನೀಡಿತ್ತು. ಈ ಅಧಿವೇಶನದ ಮೊದಲ ವಾಕ್ಯವೇ " ಕಮ್ಯುನಿಸ್ಟ್ ಪಕ್ಷದ ಮೂಲಭೂತ ಕೆಲಸವೇ ಕೈಗಾರಿಕಾ ಕಾರ್ಮಿಕರ ಸಂಘಗಳನ್ನು ಸ್ಥಾಪಿಸುವುದು. ಕಾಮಿಕರನ್ನು ಸಂಘಟಿಸುವ ಕೆಲಸದ ಒಂದು ಹಂತವಾಗಿ ಅವರಿಗೆ ರಾತ್ರಿ ಶಾಲೆಗಳನ್ನು ಪ್ರತಿಯೊಂದು ಕೈಗಾರಿಕೆಯಲ್ಲಿಯೂ ಸಂಘಟಿಸುವುದು ತುರ್ತು ಕೆಲಸವಾಗಿದೆ. ಇದು ಅವರನ್ನ ಪ್ರಜ್ಞಾವಂತರನ್ನಾಗಿಸಲು ಸಹಾಯಕ ವಾಗುವುದು". ಈ ಅಧಿವೇಶನದಿಂದ ಮರಳಿದ ಮಾವೋರವರು ತಕ್ಷಣವೇ ಕಾರ್ಮಿಕರನ್ನು ಸಂಘಟಿಸಲು ಆರಂಭಿಸಿದರು. ಈ ಲೇಖನ ಮಾಲೆಯ ಓದುಗರು ಗಮನಿಸಿರುವಂತೆ ಮಾವೋರವರಿಗೆ ಇದೇನೂ ಕಷ್ಟದ ಕೆಲಸವಾಗಿರಲಿಲ್ಲ. ವಿದ್ಯಾರ್ಥಿ ದೆಸೆಯಿಂದಲೇ ಕಾರ್ಮಿಕರಿಗೆ ರಾತ್ರಿ ಶಾಲೆಗಳನ್ನು ನಡೆಸುತ್ತಾ ಅವರೊಡನೆ ಬೆರೆತಿದ್ದ ಮಾವೋರವರು ಹುನಾನ್‌ನಲ್ಲಿ ಕಮ್ಯುನಿಸ್ಟ್ ಚಳುವಳಿಯನ್ನು ಹುಟ್ಟುಹಾಕುವ ಪ್ರಯತ್ನದ ಭಾಗವಾಗಿ ತಮ್ಮ ಪತ್ನಿಯ ಜೊತೆಗೂಡಿ ಸಾಮೂಹಿಕ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಿದ್ದರು. (ಈ ಲೇಖನ ಮಾಲೆಯ ಮಾವೋ–19, ಜನವರಿ 13 ನೋಡಿ). ಈ ಕೇಂದ್ರಗಳು ವಿವಿಧ ಕೈಗಾರಿಕೆಗಳ ಕಾರ್ಮಿಕರು, ಕಸಬುದಾರರನ್ನು ಒಂದೇ ಕಟ್ಟಿನಲ್ಲಿ ಕೂಡಿಸಲು ನೆರವಾಗಿದ್ದುವು ಹಾಗೂ ಮೇ ನಾಲ್ಕರ ಚಳುವಳಿಯ ಮುಂದುವರಿಕೆಗಳಲ್ಲಿ ಅವರು ಭಾಗವಹಿಸಲು ಕಾರಣವಾಗಿದ್ದವು.

ಹೀಗೆ ಹುನಾನ್‌ನಲ್ಲಿ ಕಾರ್ಮಿಕ ಚಳುವಳಿ ಆರಂಭಿಸುವುದಕ್ಕೆ ಬುನಾದಿ ಹಾಕಲ್ಪಟ್ಟಿತ್ತು. ಅದರಿಂದಾಗಿ ಪಕ್ಷ ಕಾರ್ಮಿಕ ಸಂಘಗಳನ್ನು ಸ್ಥಾಪಿಸಬೇಕೆಂದು ತೀರ್ಮಾನ ತೆಗೆದುಕೊಂಡ ಒಂದೇ ತಿಂಗಳಿನಲ್ಲಿ ಹುನಾನ್‌ನಲ್ಲಿ ಹಲವು ಕಾರ್ಮಿಕ ಸಂಘಗಳು ಆರಂಭವಾದವು. ಒಂದು ವರ್ಷದ ವೇಳೆಗೆ 20 ಕ್ಕೂ ಹೆಚ್ಚು ಸಂಘಗಳು ಸ್ಥಾಪನೆಗೊಂಡವು. ಮೊದಲ ಅಖಿಲ ಚೀನಾ ಕಾರ್ಮಿಕ ಮಹಾಧಿವೇಶನ ನಡೆದ ಮೇಲೆ ಇವೆಲ್ಲವನ್ನೂ ಸೇರಿಸಿ ಹುನಾನ್ ಕಾರ್ಮಿಕ ಸಂಘಗಳ ಒಕ್ಕೂಟ ಸ್ಥಾಪನೆಗೊಂಡಿತು. ಮಾವೋರವರು ಅದರ ಅಧ್ಯಕ್ಷರಾಗಿ ಆಯ್ಕೆಯಾದರು. ಅವರ ನಾಯಕತ್ವದಲ್ಲಿ ಗಣಿ, ರೈಲ್ವೆ, ಮುದ್ರಣಾಲಯಗಳು, ನೋಟುಗಳ ಮುದ್ರಣಾಲಯ, ಕಟ್ಟಡ ಕಾರ್ಮಿಕರು, ಪೌರ ಕಾರ್ಮಿಕರುಗಳ ಸಂಘಟನೆ, ಚಳುವಳಿ ಬೆಳೆದುವು. ನಾಲ್ಕು ಸಾವಿರ ಕಟ್ಟಡ ಕಾರ್ಮಿಕರ ಮುಷ್ಕರ ನಡೆಯಿತು. ಮೇ ಒಂದರಂದು ಹುನಾನ್ ರಾಜ್ಯದ ಕಾರ್ಮಿಕರ ಸಾರ್ವತ್ರಿಕ ಮುಷ್ಕರವನ್ನೂ ಸಂಘಟಿಸಿದರು. ಹುನಾನ್‌ನ ಕಾಮಿಕರ ನಡುವೆ ಅರಾಜಕತಾವಾದಿಗಳು ಪ್ರಭಾವ ಹೊಂದಿದ್ದರು. ಅನೇಕ ಆತುರದ, ಪ್ರಯೋಜನಕಾರಿಯಲ್ಲದ ಹೋರಾಟಗಳಿಗೆ ಕೈ ಹಾಕಿ ಕಾರ್ಮಿಕರನ್ನು ಬಳಲಿಸುತ್ತಿದ್ದರು. ಅವರ ಜೊತೆಗೆ ನಿರಂತರ ಸಂಪರ್ಕವನ್ನಿಟ್ಟುಕೊಂಡು ಇಂತಹ ಅನೇಕ ಕ್ರಮಗಳನ್ನು ತಪ್ಪಿಸುವುದಕ್ಕೆ ಕಾರಣವಾದರು.



ಕಲ್ಲಿದ್ದಲ ಗಣಿ ಕಾರ್ಮಿಕರ ಸಂಘಟನೆ

ಹುನಾನ್ ರಾಜ್ಯದ ದಕ್ಷಿಣದಲ್ಲಿ ಅಪಾರ ಕಲ್ಲಿದ್ದಲ ನಿಕ್ಷೇಪಗಳಿದ್ದವು. 1898 ರಿಂದಲೇ ಜರ್ಮನಿ ಹಾಗೂ ಜಪಾನ್ ದೇಶಗಳು ಅಲ್ಲಿ ಗಣಿಗಾರಿಕೆ ಆರಂಭಿಸಿ ಚೀನಾದ ನೈಸರ್ಗಿಕ ಸಂಪತ್ತನ್ನು ಸೂರೆ ಮಾಡುತ್ತಿದ್ದವು. ಚೀನಾವನ್ನು ಕೊಳ್ಳೆ ಹೊಡೆಯಲು ಆಗತಾನೆ ಶುರು ಮಾಡಿದ್ದ ಈ ಸಾಮ್ರಾಜ್ಯಶಾಹೀ ಶಕ್ತಿಗಳು ಯುದ್ಧಕೋರ ಪಾಳೆಯಗಾರಿ ಭೂಮಾಲಕರ ದಬ್ಬಾಳಿಕೆಯಲ್ಲಿ ಬಸವಳಿದು ಹೋಗಿದ್ದ ಕೂಲಿಕಾರರನ್ನು ಹೇಗೆಲ್ಲಾ ಶೋಷಣೆ ಮಾಡಿದ್ದಿರಬಹುದು ? ಗುಲಾಮರಿಗಿಂತ ಕಡೆಯಾಗಿ ದಿನಕ್ಕೆ 14–15 ಗಂಟೆ ಗಣಿಗಳ ಸುರಂಗಳಲ್ಲಿ ತೆವಳುತ್ತಾ ಕೇವಲ ಅರೆ ಹೊಟ್ಟೆಯ ಗಂಜಿ ಕೂಳಿಗೂ ಸಾಲದ ಕೂಲಿಗೆ ದುಡಿಯುತ್ತಿದ್ದರು. ಅಲ್ಲಿ ಶಾಲೆಗಳಿಗಿಂತಲೂ ಜೂಜು ಕಟ್ಟೆಗಳು, ಅಫೀಮು ಮೊದಲಾದ ಮಾದಕ ದ್ರವ್ಯಗಳ ಮಾರಾಟ ಕೇಂದ್ರಗಳು, ವೇಶ್ಯಾವಾಟಿಕೆಗಳು ರಾರಾಜಿಸುತ್ತಿದ್ದವು. ಅಲ್ಲಿದ್ದ 80,000 ಕ್ಕೂ ಮಿಕ್ಕಿದ ಜನಸಂಖ್ಯೆಗೆ ಒಂದೇ ಒಂದು ವೈದ್ಯಶಾಲೆಯಿದ್ದರೂ 22 ಚರ್ಚ್‌ಗಳು ಇದ್ದವು.

ಇಂತಹ ದುರ್ಭರ ಪರಿಸ್ಥಿತಿಯಲ್ಲಿ ಚೀನಾದ ಮೊತ್ತ ಮೊದಲ ಮುಷ್ಕರಗಳು ಇಲ್ಲಿಯೇ 1905 ರಲ್ಲಿ ಸಂಭವಿಸಿದ್ದವು ಎಂದರೆ ಅದು ಸಹಜವೇ. ಹೀಗೆ 1906 ರ ಭೀಕರ ಬರಗಾಲದಲ್ಲಿ, 1913 ರಲ್ಲಿ, 1915 ರಲ್ಲಿ, 1919 ರ ಮೇ ನಾಲ್ಕರ ಚಳುವಳಿಯ ಸಂದರ್ಭದಲ್ಲಿ ಅಲ್ಲಿಯ ಕಾರ್ಮಿಕರು ತಮ್ಮಿಂದ ತಾವೇ ಹೋರಾಟಗಳನ್ನು ನಡೆಸಿದ್ದರು.

ಈ ಗಣಿಗಳಿಗೆ 1921 ರಲ್ಲಿ ಮೊದಲ ಬಾರಿಗೆ ಭೇಟಿ ನೀಡಿದ ಮಾವೋ ತಮ್ಮ ಊರಿನ ನೆರೆಯ ಗಣಿ ಕಾರ್ಮಿಕನೊಬ್ಬನ ಕಿರಿದಾದ ಮನೆಯಲ್ಲಿ ತಂಗಿದರು. ಗಣಿಗಳಿಗೆ ಹೋದರು. ಅಲ್ಲಿಯ ಸುರಂಗಗಳಲ್ಲಿ ತೆವಳಿದರು. ಎಂತಹ ಕಠಿಣ ಪರಿಸ್ಥಿತಿಯಲ್ಲಿ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆಂಬುದನ್ನು ಕಣ್ಣಾರೆ ಕಂಡರು. ವಿದ್ಯಾರ್ಥಿಯಾಗಿ ಹುನಾನ್‌ನ ಹಳ್ಳಿಗಳಲ್ಲಿ ಬೇಸಿಗೆ ರಜದಲ್ಲಿ ಕಾಲ್ನಡಿಗೆಯಲ್ಲಿ ಸುತ್ತಾಡುತ್ತಾ ಮಾಡಿದಂ ಅವರ ಗುಡಿಸಲುಗಳಲ್ಲಿ ವಿರಾಮವಾಗಿ ಕುಳಿತು ಮಾತನಾಡುತ್ತಾ ಅವರ ಜೀವನ ಬಗ್ಗೆ, ಆಶೋತ್ತರಗಳ ಬಗ್ಗೆ ಅಧ್ಯಯನ ಮಾಡಿದರು. ಅವರ ಎಂದಿನ ಅಭ್ಯಾಸದಂತೆ ಎಲ್ಲವನ್ನೂ ಟಿಪ್ಪಣಿ ಮಾಡಿಕೊಂಡರು. ಕಾರ್ಮಿಕರು ಮಾಡುತ್ತಿದ್ದ ಉತ್ಪತ್ತಿಗೂ ಅವರಿಗೆ ದೊರೆಯುತ್ತಿದ್ದ ಕೂಲಿಗೂ ಇದ್ದ ಪ್ರಮಾಣವನ್ನು ಲೆಕ್ಕ ಹಾಕಿದರು. ಕಾರ್ಮಿಕರಿಗೆ ಅವರು ಅನುಭವಿಸುತ್ತಿದ್ದ ಶೋಷಣೆ, ಹಾಗೂ ದಬ್ಬಾಳಿಕೆಗಳ ಬಗ್ಗೆ ಅರಿವು ಮೂಡಿಸಿದರು. ಮುಂದೊಂದು ದಿನ ಚೀನಾದ ಮಿಲಿಟರಿ ಕಮಿಷನ್‌ನ ಭೋಜನ ಕೂಟವೊಂದರಲ್ಲಿ ಈ ಗಣಿ ಕಾರ್ಮಿಕರಲ್ಲಿ ಕೆಲವರನ್ನು ಕಂಡಾಗ ಆ ದಿನಗಳನ್ನು ನೆನಪಿಸಿಕೊಳ್ಳುತ್ತಾ ಹೇಳಿದ ಮಾತುಗಳು ಜನರೊಡನೆ ಮಿಳಿತವಾಗುವ ಎಲ್ಲ ಕಮ್ಯುನಿಸ್ಟರಿಗೂ ಅವಶ್ಯ ಮಾದರಿಯಾದ ಅವರ ಕೆಲಸದ ವಿಧಾನವನ್ನು ವಿವರಿಸುತ್ತವೆ. "ಗಣಿ ಕಾರ್ಮಿಕರ ಬಳಿಗೆ ನಾನು ಶಾಲಾ ಮುಖ್ಯೋಪಾಧ್ಯಾಯನಾಗಿದ್ದ ನಾನು ವಿದ್ವಾಂಸನೊಬ್ಬನ ಗತ್ತಿನಿಂದ ಅದಕ್ಕೆ ತಕ್ಕ ಗೌನು ಧರಿಸಿ ಹೋಗಿದ್ದೆ. ಆದರೆ ಕಾರ್ಮಿಕರ ವಿಶ್ವಾಸವನ್ನು ಗಳಿಸುವುದಕ್ಕೆ ಅದೇನು ಪ್ರಯೋಜನಕ್ಕೆ ಬರಲಿಲ್ಲ. ಅದೇ ಚಿಂತೆಗೊಳಗಾಗಿ ಅಲ್ಲಿಯ ರೈಲ್ವೆ ಹಳಿಗಳ ದಾರಿಯಲ್ಲಿ ಅತ್ತಿಂದಿತ್ತ, ಇತ್ತಿಂದತ್ತ ಬೆಳಗ್ಗೆಯಿಂದ ಸಂಜೆಯವರೆಗೂ ಸುತ್ತಾಡಿದೆ. ಕೊನೆಗೆ ನನ್ನ ತಪ್ಪು ಗೊತ್ತಾಯಿತು. ಆ ಗತ್ತು ಗಾಂಭೀರ್ಯಗಳನ್ನು ತೊರೆದು ಅವರಿಂದ ನಾವು ಬಹಳಷ್ಟು ಕಲಿಯಬೇಕಾಗಿದೆ ಎಂಬ ಮನೋಭಾವದಿಂದ ಅವರೊಡನೆ ಮಾತನಾಡತೊಡಗಿದೆ. ನಿಧಾನವಾಗಿ ಅವರು ತಮ್ಮ ಮನಸ್ಸು ತೆರೆದು ಮಾತನಾಡತೊಡಗಿದರು. "ಹೀಗೆ ಹಳ್ಳಿಗಾಡಿನಿಂದ ಬಂದ ಮಾವೋರವರು ಆಗ್ಗೆ ಆಗಲೇ ಹಲವು ಸನ್ನಿವೇಶಗಳಲ್ಲಿ ಜನರೊಡನೆ ಬೆರೆಯುವುದರ ಅನುಭವವಿದ್ದರೂ ಕೂಡ ಮತ್ತೆ ಈ ಪಾಠವನ್ನು ಕಲಿಯಬೇಕಾಯಿತು ಎಂಬುದನ್ನು ನಾವೆಲ್ಲರೂ ಮತ್ತೆ ಮತ್ತೆ ನೆನೆಪಿಸಿಕೊಳ್ಳಬೇಕಾಗಿದೆ.

JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086 Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor NITHYANANDASWAMI EMS Bhavana, No.37/A, 8th Cross, Mahalakshmi Layout, ...
Editor : NITHYANANDASWAMI